**ನಿಗದಿಪಡಿಸಿದ ಅವಧಿಗಳು – ೧**



**ಪಠ್ಯಪೂರಕ ಅಧ್ಯಯನ ಸಾರ್ಥಕ ಪದ್ಯದ ಮುಖ್ಯಾಂಶಗಳು :**

೧. ಗಾಳಿಯಲ್ಲಿ ಬೂದಿಯನ್ನು ತೂರಿದಾಗ ಭತ್ತ ಬೆಳೆಯುವಲ್ಲಿ ಬೀಳುತ್ತದೆ.

೨. ಬೂದಿಯನ್ನು ಹೊಳೆಯಲ್ಲಿ ಹರಿಯ ಬಿಟ್ಟಾಗ ಮೀನಿಗೆ ಸಿಗುತ್ತದೆ.

೩. ತನ್ನ ಸ್ವಾರ್ಥವ ನೆನೆದು ವ್ಯರ್ಥವಾಗಿದೆ.

೪. ದೇಹದ ಬೂದಿಯನ್ನು ತಾವರೆಯು ಬೆಳೆಯುವ ಕೊಳದಲ್ಲಿ ಬಿಟ್ಟಾಗ ಆ ಬೂದಿ ಕೆಸರನ್ನು ಸೇರಿ ಹೊಸ ತಾವರೆಯು ಅರಳಿದರೆ ಆ ಮೂಲಕ ಹುಟ್ಟು ಸಾವಿನಲ್ಲಿ ಧನ್ಯವಾಗುತ್ತದೆ ಎಂದು ಕವಿ ಹೇಳುತ್ತಾರೆ.

೫. ಮಾನವನು ಸ್ವಾರ್ಥಿಯಾಗಿದ್ದಾನೆ, ಆತನು ಬದುಕಿದ್ದಾಗ ಆತನ ಜೀವನ ಸಾರ್ಥಕತೆ ಪಡೆಯದಿದ್ದರೂ ಸತ್ತಮೇಲಾದರೂ ಧನ್ಯತೆಯನ್ನು ಪಡೆಯಲಿ ಎಂದು ಕವಿ ಮಾರ್ಮಿಕವಾಗಿ ಹೇಳಿರುವ ಮಾತು ಮೆಚ್ಚುವ ಅಂಶವಾಗಿದೆ.

೬. ಸತ್ತ ನಂತರ ದೇಹವನ್ನು ಸುಡಲಾಗುತ್ತದೆ. ಆನಂತರ ಆ ಬೂದಿಯನ್ನು ಭತ್ತಬೆಳೆಯುವ ಗದ್ದೆಗೆ , ಮೀನು ವಾಸಿಸುವ ಹೊಳೆಗೆ, ತಾವರೆ ಬೆಳೆಯುವ ಕೊಳಕ್ಕೆ ಹಾಕುವುದರ ಮೂಲಕ ಸತ್ತಮೇಲಾದರೂ ಪರೋಪಕಾರಕ್ಕೆ ದೇಹ ಬಳಕೆಯಾಗಲಿ ಎಂದು ಕವಿ ಹೇಳಿರುವ ಮಾತುಗಳು ಮೆಚ್ಚುಗೆಯಾಗುತ್ತದೆ.

**ಅಭ್ಯಾಸ ಹಾಳೆ**

**ಮೇಲಿನ ಪ್ರಮುಖ ಅಂಶಗಳ ಕ್ರಮ ಸಂಖ್ಯೆಗಳನ್ನು ತೆಗೆದು ಹಾಕಿ ವಾಕ್ಯ ರೂಪದಲ್ಲಿ ಜೋಡಿಸಿ ಬರೆಯಿರಿ.**

______________________________________________

______________________________________________

______________________________________________

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ**

೧. ಗಾಳಿಯಲ್ಲಿ ಬೂದಿಯನ್ನು ತೂರಿದಾಗ ಎಲ್ಲಿ ಬೀಳುತ್ತದೆ

______________________________________________

______________________________________________

೨. ಬೂದಿಯನ್ನು ಹೊಳೆಯಲ್ಲಿ ಹರಿಯಬಿಟ್ಟಾಗ ಯಾರಿಗೆ ಸಿಗುತ್ತದೆ ?

______________________________________________

೩. ದೇಹ ಏಕೆ ವ್ಯರ್ಥವಾಗಿದೆ ?

______________________________________________

೪. ಬೂದಿಯನ್ನು ಕೊಳದಲ್ಲಿ ಬಿಡುವುದರಿಂದ ಬದುಕು ಧನ್ಯವಾಗುವುದು ಹೇಗೆ ? ವಿವರಿಸಿ.

______________________________________________

೫. ಸಾರ್ಥಕ ಪದ್ಯದ ಯಾವ ಅಂಶಗಳನ್ನು ನೀವು ಮೆಚ್ಚುವಿರಿ ? ಏಕೆ ?

______________________________________________

**ಘಟಕ ಪರೀಕ್ಷೆ – ೩ ( ಸಾರ್ಥಕ )**

**ನಿಗದಿಪಡಿಸಿದ ಅವಧಿ – ೧** **ಅಂಕಗಳು – ೧೦**

---

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** ೧*೪=೪

೧. ಗಾಳಿಯಲ್ಲಿ ಬೂದಿಯನ್ನು ತೂರಿದಾಗ ಎಲ್ಲಿ ಬೀಳುತ್ತದೆ ?

--------------------------------------------------------------------------------

೨. ಬೂದಿಯನ್ನು ಹೊಳೇಯಲ್ಲಿ ತೂರಿದಾಗ ಎಲ್ಲಿ ಬೀಳುತ್ತದೆ ?

--------------------------------------------------------------------------------

೩. ಸಾರ್ಥಕ ಪದ್ಯವನ್ನು ಬರೆದ ಲೇಖಕರ ಹೆಸರೇನು ?

--------------------------------------------------------------------------------

೪. ದೇಹ ಏಕೆ ವ್ಯರ್ಥವಾಗಿದೆ ?

--------------------------------------------------------------------------------

**ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ.** **೩*೨=೬**

೫. ಬೂದಿಯನ್ನು ಕೊಳದಲ್ಲಿ ಬಿಡುವುದರಿಂದ ಬದುಕು ಧನ್ಯವಾಗುವುದು ಹೇಗೆ ? ವಿವರಿಸಿ

--------------------------------------------------------------------------------

--------------------------------------------------------------------------------

--------------------------------------------------------------------------------

--------------------------------------------------------------------------------

೬. ದೇಹದ ಬೂದಿಯನ್ನು ಹೊಳೆಯಲ್ಲಿ ಹರಿಯ ಬಿಟ್ಟರೆ ಏನಾಗುವುದು ?

--------------------------------------------------------------------------------

--------------------------------------------------------------------------------

--------------------------------------------------------------------------------

--------------------------------------------------------------------------------

೭. ಸಾರ್ಥಕ ಪದ್ಯದ ಯಾವ ಅಂಶಗಳನ್ನು ನೀವು ಮೆಚ್ಚುತ್ತೀರಿ ?

--------------------------------------------------------------------------------

--------------------------------------------------------------------------------

******************************

## ಗದ್ಯ-೨. ಸಾರ್ಥಕ ಬದುಕಿನ ಸಾಧಕ – ಡಿ.ವಿ.ಜಿ. (ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ)

( ನಿಗದಿತ ಅವಧಿಗಳು – ೪ )



ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು ಅವರು ೨೯-೧೦-೧೯೩೬ ರಲ್ಲಿ ಶಿವಮೊಗ್ಗದಲ್ಲಿ ಜನಿಸಿದರು. ಇವರ ತಂದೆ ಶಿವರಾಮ ಭಟ್ಟರು, ತಾಯಿ ಮೂಕಾಂಬಿಕೆ. ಇವರ ಕವನ ಸಂಕಲನಗಳು ವೃತ್ತ, ಚಿತ್ರಕೂಟ, ಸುಳಿ. ಇವರ ಪ್ರಸಿದ್ಧ ಧ್ವನಿ ಸುರುಳಿಗಳು ದೀಪಿಕಾ, ಭಾವ ಸಂಗಮ, ಬಂದೇ ಬರುತಾವ ಕಾಲ, ಬಾರೋ ವಸಂತ, ಅಭಿನಂದನ, ಭಾವೋತ್ಸವ, ಪ್ರೇಮಧಾರೆ. ಮಕ್ಕಳ ಧ್ವನಿ ಸುರುಳಿಗಳು ನಂದನ, ಕಿನ್ನರಿ, ನವಿಲುಗರಿ, ಕಿಶೋರಿ ಮುಂತಾದವುಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಸಾಧನೆಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ ಮುಂತಾದವು ದೊರಕಿವೆ.

## ಅಭ್ಯಾಸ

### ಹಂತ-೧ ಪ್ರಮುಖ ಅಂಶಗಳನ್ನು ಗುರ್ತಿಸುವುದು

| | |
|---|---|
| ಕವಿ/ಸಾಹಿತಿಗಳ ಹೆಸರು | ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು |
| ಸ್ಥಳ –ಕಾಲ | ೨೯-೧೦-೧೯೩೬, ಶಿವಮೊಗ್ಗ |
| ಕೃತಿಗಳು | ವೃತ್ತ, ಚಿತ್ರಕೂಟ, ಸುಳಿ. ಇವರ ಪ್ರಸಿದ್ಧ ಧ್ವನಿ ಸುರುಳಿಗಳು ದೀಪಿಕಾ, ಭಾವ ಸಂಗಮ, ಬಂದೇ ಬರುತಾವ ಕಾಲ, ಬಾರೋ ವಸಂತ, ಅಭಿನಂದನ, ಭಾವೋತ್ಸವ, ಪ್ರೇಮಧಾರೆ. ಮಕ್ಕಳ ಧ್ವನಿ ಸುರುಳಿಗಳು ನಂದನ, ಕಿನ್ನರಿ, ನವಿಲುಗರಿ, ಕಿಶೋರಿ |
| | |
| ಬಿರುದು/ ಪ್ರಶಸ್ತಿಗಳು | ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ, |
| | ಆಳ್ವಾಸ್ ನುಡಿಸಿರಿ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ |

### ಹಂತ-೨ ಬರೆಯುವ ವಿಧಾನವನ್ನು ರೂಢಿಸುವುದು

ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು ಅವರು ೨೯-೧೦-೧೯೩೬ ರಲ್ಲಿ ಶಿವಮೊಗ್ಗದಲ್ಲಿ ಜನಿಸಿದರು. ಇವರ ತಂದೆ ಶಿವರಾಮ ಭಟ್ಟರು, ತಾಯಿ ಮೂಕಾಂಬಿಕೆ.

ಇವರ ಕವನ ಸಂಕಲನಗಳು ವೃತ್ತ, ಚಿತ್ರಕೂಟ, ಸುಳಿ. ಇವರ ಪ್ರಸಿದ್ಧ ಧ್ವನಿ ಸುರುಳಿಗಳು ದೀಪಿಕಾ, ಭಾವ ಸಂಗಮ, ಬಂದೇ ಬರುತಾವ ಕಾಲ, ಬಾರೋ ವಸಂತ, ಅಭಿನಂದನ, ಭಾವೋತ್ಸವ, ಪ್ರೇಮಧಾರೆ. ಮಕ್ಕಳ ಧ್ವನಿ ಸುರುಳಿಗಳು ನಂದನ, ಕಿನ್ನರಿ, ನವಿಲುಗರಿ, ಕಿಶೋರಿ ಮುಂತಾದವುಗಳನ್ನು ರಚಿಸಿದ್ದಾರೆ.

ಇವರ ಸಾಹಿತ್ಯ ಸಾಧನೆಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ ಮುಂತಾದವು ದೊರಕಿವೆ

### ಹಂತ ೪– ಸ್ವತಂತ್ರವಾಗಿ ಬರೆಯಿಸುವುದು

ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು ಅವರು ೨೯-೧೦-೧೯೩೬ ರಲ್ಲಿ ಶಿವಮೊಗ್ಗದಲ್ಲಿ ಜನಿಸಿದರು. ಇವರ ತಂದೆ ಶಿವರಾಮ ಭಟ್ಟರು, ತಾಯಿ ಮೂಕಾಂಬಿಕೆ.

ಇವರ ಕವನ ಸಂಕಲನಗಳು ವೃತ್ತ, ಚಿತ್ರಕೂಟ, ಸುಳಿ. ಇವರ ಪ್ರಸಿದ್ಧ ಧ್ವನಿ ಸುರುಳಿಗಳು ದೀಪಿಕಾ, ಭಾವ ಸಂಗಮ, ಬಂದೇ ಬರುತಾವ ಕಾಲ, ಬಾರೋ ವಸಂತ, ಅಭಿನಂದನ, ಭಾವೋತ್ಸವ, ಪ್ರೇಮಧಾರೆ. ಮಕ್ಕಳ ಧ್ವನಿ ಸುರುಳಿಗಳು ನಂದನ, ಕಿನ್ನರಿ, ನವಿಲುಗರಿ, ಕಿಶೋರಿ ಮುಂತಾದವುಗಳನ್ನು ರಚಿಸಿದ್ದಾರೆ.

ಇವರ ಸಾಹಿತ್ಯ ಸಾಧನೆಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ ಮುಂತಾದವು ದೊರಕಿವೆ

## ಮಕ್ಕಳಿಗಾಗಿ ಚಟುವಟಿಕೆ

**ಮಕ್ಕಳು ಮೇಲಿನ ರೀತಿಯಲ್ಲಿ ರೂಢಿಮಾಡಿಕೊಳ್ಳಬೇಕು.**

ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು ಅವರು ೨೯-೧೦-೧೯೩೬ ರಲ್ಲಿ ಶಿವಮೊಗ್ಗದಲ್ಲಿ ಜನಿಸಿದರು. ಇವರ ತಂದೆ ಶಿವರಾಮ ಭಟ್ಟರು, ತಾಯಿ ಮೂಕಾಂಬಿಕೆ. ಇವರ ಕವನ ಸಂಕಲನಗಳು ವೃತ್ತ, ಚಿತ್ರಕೂಟ, ಸುಳಿ. ಇವರ ಪ್ರಸಿದ್ಧ ಧ್ವನಿ ಸುರುಳಿಗಳು ದೀಪಿಕಾ, ಭಾವ ಸಂಗಮ, ಬಂದೇ ಬರುತಾವ ಕಾಲ, ಬಾರೋ ವಸಂತ, ಅಭಿನಂದನ, ಭಾವೋತ್ಸವ, ಪ್ರೇಮಧಾರೆ. ಮಕ್ಕಳ ಧ್ವನಿ ಸುರುಳಿಗಳು ನಂದನ, ಕಿನ್ನರಿ, ನವಿಲುಗರಿ, ಕಿಶೋರಿ ಮುಂತಾದವುಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಸಾಧನೆಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ ಮುಂತಾದವು ದೊರಕಿವೆ.

### ಅಭ್ಯಾಸ

| **ಹಂತ-೧ ಪ್ರಮುಖ ಅಂಶಗಳನ್ನು ಗುರ್ತಿಸುವುದು** | |
|---|---|
| ಕವಿ/ಸಾಹಿತಿಗಳ ಹೆಸರು | |
| ಸ್ಥಳ –ಕಾಲ | |
| ಕೃತಿಗಳು | |
| | |
| ಬಿರುದು/ ಪ್ರಶಸ್ತಿಗಳು | |
| | |

| **ಹಂತ-೨ ಬರೆಯುವ ವಿಧಾನವನ್ನು ರೂಢಿಸುವುದು** |
|---|
| ರವರು |
| ಯಲ್ಲಿ ಸಾ.ಶ ರಲ್ಲಿ ಜನಿಸಿದರು. |
| ಇವರು |
| ಮುಂತಾದ ಕೃತಿಗಳನ್ನು ಬರೆದಿದ್ದಾರೆ. |
| ಇವರಿಗೆ |
| ಮುಂತಾದ ಪ್ರಶಸ್ತಿಗಳು ದೊರೆತಿವೆ. / ಬಿರುದುಗಳಿವೆ. |

| **ಹಂತ ೪– ಸ್ವತಂತ್ರವಾಗಿ ಬರೆಯಿಸುವುದು** |
|---|
| |

## ಗದ್ಯ ಪಾಠ–ಸಾರ್ಥಕ ಬದುಕಿನ ಸಾಧಕ

### ಮಕ್ಕಳಿಗೆ ಸೂಚನೆಗಳು:–

೧. ಮಕ್ಕಳು ಮೊದಲು ಎಲ್ಲಾ ಅಂಶಗಳನ್ನು ಓದಿ ಮನದಟ್ಟು ಮಾಡಿಕೊಳ್ಳಬೇಕು.
೨. ಕ್ರಮ ಸಂಖ್ಯೆ ಬಿಟ್ಟು ಬರೆಯುವುದನ್ನು ರೂಢಿಗೊಳಿಸಿಕೊಳ್ಳಬೇಕು.
೩. ಕಥೆಯ ರೂಪದಲ್ಲಿ ಹೇಳಬೇಕು, ಹೇಳಿ ಹಾಗೆಯೇ ಬರೆಯಬೇಕು.
೪. ಆಯಾ ವಾಕ್ಯದಲ್ಲಿ ಪ್ರಮುಖ ಪದಗಳನ್ನು ನೆನಪಿಟ್ಟುಕೊಳ್ಳಬೇಕು.
೫. ಪದ್ಯಭಾಗದಲ್ಲಿ ಹಾಡನ್ನು ಮೊದಲು ಹೇಳಲು/ಹಾಡಲು ಕಲಿಯಬೇಕು.

### ಪಾಠದ ಪ್ರಮುಖಾಂಶಗಳು

೧. ಡಿ.ವಿ.ಜಿ. ಅವರು ಮಾತು ಬಿಟ್ಟಿದ್ದಾರೆಂದು ತಿಳಿದು ದಿವಾನ ಮಿರ್ಜಾ ಇಸ್ಮಾಯಿಲ್ ಅವರು ಸ್ನೇಹಕ್ಕೆ ಆತೊರೆದಿದ್ದರು.

೨. ಶ್ರೀಮಂತರಲ್ಲದಿದ್ದೂ ಕೇವಲ ಎಸ್.ಎಸ್.ಎಲ್.ಸಿ ಓದಿದ ಡಿ.ವಿ.ಜಿ. ಅವರ ಸ್ನೇಹಕ್ಕೆ ಹಾತೊರೆದ ಮಿರ್ಜಾ ಇಸ್ಮಾಯಿಲ್ ಅವರು ಮೆಚ್ಚಿದ ಮೇರು ವ್ಯಕ್ತಿತ್ವದ ವ್ಯಕ್ತಿಯಾಗಿದ್ದರು.

೩. ಡಿ.ವಿ.ಜಿ ಅವರ ಹುಟ್ಟೂರು ಕೋಲಾರ ಜಿಲ್ಲೆಯ ಮುಳಬಾಗಿಲು, ತಂದೆ ವೆಂಕಟರಮಣಯ್ಯ, ತಾಯಿ ಅಲಮೇಲಮ್ಮ. ಸೋದರ ಮಾವ ಮತ್ತು ಗುರು ತಿಮ್ಮಪ್ಪ

೪. ಲೋವರ್ ಸೆಕೆಂಡರಿ ಶಿಕ್ಷಣ ಓದಿ ಬಡತನದಿಂದ ಮುಂದೆ ಓದಲಾಗದೇ ಇದ್ದಾಗ ಬಂಡಿ ಹೊಡೆಯುವ ವ್ಯಕ್ತಿ ರಸೂಲ್ ಖಾನ್ ನಿಂದ ಸಹಾಯ.

೫. ಪತ್ರಕರ್ತರಾಗಿದ್ದ ಡಿ.ವಿ.ಜಿ ದಸರಾ ವರದಿ ಮಾಡಿದಾಗ ವಿಶ್ವೇಶ್ವರಯ್ಯನವರು ನೀಡಿದ ಸಂಭಾವನೆ ಸ್ವತಃ ಭೇಟಿಯಾಗಿ ಹಿಂದುರುಗಿಸಿದ್ದು.

೬. ಅಲ್ಲದೇ ತಮಗೆ ನೀಡಿದ ಸಂಬಳ ಸಹಿತ ಹಿಂದುರುಗಿಸಿದಾಗ ಒತ್ತಾಯದಿಂದ ನೀಡಿದ ಚೆಕ್ ಕೂಡಾ ಪಡೆಯುತ್ತಾ ಹೋದರು. ಆದರೆ ಬ್ಯಾಂಕ್ ಮೆಟ್ಟಲು ಹತ್ತಲೂ ಇಲ್ಲ.

೭. ಬಂಧುಗಳೊಬ್ಬರ ಮನೆಯ ಉತ್ಸವಕ್ಕೆ ಮಕ್ಕಳನ್ನು ಕಳುಹಿಸಿ, ಆರತಿ ಅಕ್ಷತೆಗೆ ಹೆಂಡತಿಗೆ ಹೋಗಲು ಹೇಳಿದಾಗ ಹೆಂಡತಿ "ಹರಿದ ಸೀರೆ ಹಾಕಿಕೊಂಡು ಹೋಗಿ ನಿಮ್ಮ ಮಾನ ತಗೆಯಲಾರೆ" ಎಂದು ಹೇಳಿದರು.

೮. ಸಾಹಿತ್ಯ ಲೋಕದಲ್ಲಿ ದಿಗ್ಗಜರಾದ ಡಿ.ವಿ.ಜಿ. ಅವರನ್ನು ಗೋಖಲೆ ಸಾರ್ವಜನಿಕ ಸಂಸ್ಥೆಯಂತಹ ಪ್ರಸಿದ್ಧ ಸಂಸ್ಥೆ ಕಟ್ಟಿದ ಸಾಹಿತಿ ಬೇರೆ ಯಾರಿದ್ದಾರೆ ? ಅವರನ್ನು 'ಮಹಾಧೀಮಂತ' ಎಂದು ವರ್ಣಿಸಿದ್ದು.

೯. ಇಳೆಯಿಂದ ಮೊಳಕೆ ಒಗೆವಂದು ತಮಟೆಗಳಿಲ್ಲ......ಈ ಶ್ಲೋಕಗಳನ್ನು ನೋಡಿದಾಗ ಅವರ ಮೇರು ವ್ಯಕ್ತಿತ್ವ ವ್ಯಕ್ತವಾಗುತ್ತದೆ.

### ಅಭ್ಯಾಸ ಹಾಳೆ ೪.೧

**ಮೇಲಿನ ಪ್ರಮುಖ ಅಂಶಗಳ ಕ್ರಮಸಂಖ್ಯೆಗಳನ್ನು ತೆಗೆದುಹಾಕಿ ವಾಕ್ಯರೂಪದಲ್ಲಿ ಜೋಡಿಸಿ ಬರೆಯಿರಿ.**

## ಅಭ್ಯಾಸ- ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೆಗಳು

೧) ಡಿ.ವಿ.ಜಿ. ಅವರ ಹುಟ್ಟೂರು ಯಾವುದು?

ಉತ್ತರ:- ಡಿ.ವಿ.ಜಿ. ಅವರ ಹುಟ್ಟೂರು ಮುಳಬಾಗಿಲು

೨) ಡಿ.ವಿ.ಜಿ ಅವರ ಮನಸ್ಸಿನ ಮೇಲೆ ಪ್ರಭಾವ ಬೀರಿದವರು ಯಾರು?

ಉತ್ತರ:- ಡಿ.ವಿ.ಜಿ ಅವರ ಮನಸ್ಸಿನ ಮೇಲೆ ಪ್ರಭಾವ ಬೀರಿದವರು ಇಬ್ಬರು. ಒಬ್ಬರು ಅಜ್ಜಿ ಸಾಕಮ್ಮ ಹಾಗೂ ಇನ್ನೊಬ್ಬರು ಸೋದರ ಮಾವ ತಿಮ್ಮಪ್ಪ.

೩) ಡಿ.ವಿ.ಜಿ. ಅವರನ್ನು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಕಳುಹಿಸಿದವರು ಯಾರು?

ಉತ್ತರ:- ಡಿ.ವಿ.ಜಿ. ಅವರನ್ನು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಕಳುಹಿಸಿದವರು ಬಂಡಿ ಹೊಡೆಯುವ ವ್ಯಕ್ತಿ ರಸೂಲ್ ಖಾನ್.

೪) ವಿಶ್ವೇಶ್ವರಯ್ಯ ಅವರು ಮೈಸೂರು ಸರ್ಕಾರದಲ್ಲಿ ಅಲಂಕರಿಸಿದ ಹುದ್ದೆ ಯಾವುದು?

ಉತ್ತರ:- ವಿಶ್ವೇಶ್ವರಯ್ಯ ಅವರು ಮೈಸೂರು ಸರ್ಕಾರದಲ್ಲಿ ಅಲಂಕರಿಸಿದ ಹುದ್ದೆ ಮೈಸೂರಿನ ದಿವಾನ ಹುದ್ದೆ.

೫) ಡಿ.ವಿ.ಜಿ. ಅವರು ಸ್ಥಾಪಿಸಿದ ಸಂಸ್ಥೆ ಯಾವುದು?

ಉತ್ತರ:- ಡಿ.ವಿ.ಜಿ. ಅವರು ಸ್ಥಾಪಿಸಿದ ಸಂಸ್ಥೆ ಗೋಖಲೆ ಸಾರ್ವಜನಿಕ ಸಂಸ್ಥೆ

### ಚಟುವಟಿಕೆ

ಸೂಚನೆ:- ಈ ಕೆಳಗೆ ನೀಡಿರುವ ಉತ್ತರದ ... ಸ್ತವಾದುದನ್ನು ಆರಿಸಿ, ಬಿಟ್ಟಿರುವ ಜಾಗದಲ್ಲಿ ತುಂಬುವುದರ ಮೂಲಕ ಉತ್ತರಿಸಿ.

(ಮೈಸೂರಿನ ದಿವಾನ ಹುದ್ದೆ / ಒಬ್ಬರು ಅಜ್ಜಿ ಸಾಕಮ್ಮ ಹಾಗೂ ಇನ್ನೊಬ್ಬರು ಸೋದರ ಮಾವ ತಿಮ್ಮಪ್ಪ / ಮುಳಬಾಗಿಲು/ ಮಹಾಧೀಮಂತ / ಬಂಡಿ ಹೊಡೆಯುವ ವ್ಯಕ್ತಿ ರಸೂಲ್ ಖಾನ್ /

೧) ಡಿ.ವಿ.ಜಿ. ಅವರ ಹುಟ್ಟೂರು ಯಾವುದು?

ಡಿ.ವಿ.ಜಿ.ಅವರ ಹುಟ್ಟೂರು -----------

೨) ಡಿ.ವಿ.ಜಿ ಅವರ ಮನಸ್ಸಿನ ಮೇಲೆ ಪ್ರಭಾವ ಬೀರಿದವರು ಯಾರು?

ಡಿ.ವಿ.ಜಿ ಅವರ ಮನಸ್ಸಿನ ಮೇಲೆ ಪ್ರಭಾವ ಬೀರಿದವರು-------------------------------------.

೩) ಡಿ.ವಿ.ಜಿ. ಅವರನ್ನು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಕಳುಹಿಸಿದವರು ಯಾರು?

ಡಿ.ವಿ.ಜಿ. ಅವರನ್ನು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಕಳುಹಿಸಿದವರು------------------------.

೪) ವಿಶ್ವೇಶ್ವರಯ್ಯ ಅವರು ಮೈಸೂರು ಸರ್ಕಾರದಲ್ಲಿ ಅಲಂಕರಿಸಿದ ಹುದ್ದೆ ಯಾವುದು?

ವಿಶ್ವೇಶ್ವರಯ್ಯ ಅವರು ಮೈಸೂರು ಸರ್ಕಾರದಲ್ಲಿ ಅಲಂಕರಿಸಿದ ಹುದ್ದೆ-------------------------------.

೫) ಡಿ.ವಿ.ಜಿ. ಅವರು ಸ್ಥಾಪಿಸಿದ ಸಂಸ್ಥೆ ಯಾವುದು?

ಡಿ.ವಿ.ಜಿ. ಅವರು ಸ್ಥಾಪಿಸಿದ ಸಂಸ್ಥೆ-----------------.

## ಅಭ್ಯಾಸ – ಸಂದರ್ಭಗಳು

ಐದು ಸಂದರ್ಭದ ಹೇಳಿಕೆಗಳಿದ್ದು ಆಯ್ಕೆ, ಸಂದರ್ಭ ಮತ್ತು ಸ್ವಾರಸ್ಯವನ್ನು ಅನುಸರಿಸಿ ವಾಕ್ಯರೂಪದಲ್ಲಿ ವಿವರಿಸಬೇಕು. (ಈ ಕೆಳಗಿನ ಕೋಷ್ಟಕದಲ್ಲಿರುವ ಅಂಶಗಳನ್ನಾಧರಿಸಿ ಎಲ್ಲಾ ಗದ್ಯ ಮತ್ತು ಪದ್ಯ ಪಾಠಗಳ ಸಂದರ್ಭದ ಪ್ರಶ್ನೆಗಳನ್ನು ಸುಲಭವಾಗಿ ಕೆಳಗಿನ ಮಾದರಿಯಂತೆ ಉತ್ತರಿಸಬಹುದು.)

## ಗದ್ಯ ಭಾಗದಲ್ಲಿ ಬಂದಿರುವ ಸಾಂದರ್ಭಿಕ ಪ್ರಶ್ನೆಗಳ ಕೋಷ್ಟಕ

**ಆಯ್ಕೆ : ಈ ವಾಕ್ಯವನ್ನು ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು ಅವರು ರಚಿಸಿದ 'ಸಾಹಿತ್ಯ ರತ್ನ ಸಂಪುಟ' ಕೃತಿಯಿಂದ ಆಯ್ದ 'ಸಾರ್ಥಕ ಬದುಕಿನ ಸಾಧಕ' ಎಂಬ ಗದ್ಯ ಪಾಠದಿಂದ ಆರಿಸಲಾಗಿದೆ.**

| ಗದ್ಯ ಭಾಗ | ಸಾಂದರ್ಭಿಕ ಪ್ರಶ್ನೆಗಳು | ಯಾರು? ಯಾರಿಗೆ? | ಸಂದರ್ಭ |
|---|---|---|---|
| ಸಾರ್ಥಕ ಬದುಕಿನ ಸಾಧಕ | "ಏನು ಬಂದಿರಿ ಗುಂಡಪ್ಪ?" | ವಿಶ್ವೇಶ್ವರಯ್ಯನವರು ಡಿ.ವಿ.ಜಿ.ಗೆ | ಡಿ.ವಿ.ಜಿ. ದಿವಾನರ ಬಳಿಗೆ ಬಂದಾಗ |
| | "ನೀನು ಉತ್ಸವಕ್ಕೆ ಹೋಗುವುದಿಲ್ಲವೇ?" | ಡಿ.ವಿ.ಜಿ.ಯವರು ತಮ್ಮ ಪತ್ನಿಗೆ | ಡಿ.ವಿ.ಜಿ.ಯ ಬಂಧುಗಳ ಮನೆಗೆ ಉತ್ಸವಕ್ಕೆ |
| | "ನನ್ನ ಹತ್ತಿರ ಇರುವುದು ಇದೊಂದೇ ಸೀರೆ" | ಡಿ.ವಿ.ಜಿ.ಯವರಪತ್ನಿ ಡಿ.ವಿ.ಜಿ.ಗೆ | ಡಿ.ವಿ.ಜಿ.ಯ ಬಂಧುಗಳ ಮನೆಗೆ ಉತ್ಸವಕ್ಕೆ |
| | "ಹೊಲಿ ನಿನ್ನ ತುಟಿಗಳನು ಮಂಕುತಿಮ್ಮ" | ಡಿ.ವಿ.ಜಿ.ಯವರು ತಮ್ಮ ಓದುಗರಿಗೆ | ಡಿ.ವಿ.ಜಿ.ಯು ಸಾಹಿತ್ಯದ ಶಕ್ತಿ ಹೇಳುವಾಗ |
| | "ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಗೆ" | ಡಿ.ವಿ.ಜಿ.ಯವರು ತಮ್ಮ ಓದುಗರಿಗೆ | ಡಿ.ವಿ.ಜಿ.ಯು ಸಾಹಿತ್ಯದ ಶಕ್ತಿ ಹೇಳುವಾಗ |

## ಸಂದರ್ಭ ಬರೆಯುವ ಮಾದರಿ

**ಆಯ್ಕೆ** :– ಈ ವಾಕ್ಯವನ್ನು ಕವಿ/ಲೇಖಕರ ಹೆಸರು ಅವರು ಬರೆದ ಕೃತಿ ಕೃತಿ ಎಂಬ ಕೃತಿಯಿಂದ ಆಯ್ದುಕೊಂಡ ಪಾಠದ ಹೆಸರು ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ** :–ಈ ಮಾತನ್ನು ಯಾರು, ಯಾರಿಗೆ, ಯಾವಾಗ, ಏಕೆ ಹೇಳಿದರು ಎಂಬ ಅಂಶಗಳನ್ನು ಬರೆಯಬೇಕು.

**ಸ್ವಾರಸ್ಯ** :–ಈ ಮಾತಿನ ವಿಶೇಷತೆಯನ್ನು/ ಮೌಲ್ಯವನ್ನು / ಗುಣವನ್ನು ಕುರಿತು ಬರೆಯಬೇಕು

## ಮಾದರಿ ಸಂದರ್ಭಗಳು

**೧) "ಏನು ಬಂದಿರಿ ಗುಂಡಪ್ಪ?"**

**ಆಯ್ಕೆ** : ಈ ವಾಕ್ಯವನ್ನು ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರು ಅವರು ಬರೆದ **ಸಾಹಿತ್ಯ ರತ್ನ ಸಂಪುಟ'** ಕೃತಿ ಎಂಬ ಕೃತಿಯಿಂದ ಆಯ್ದುಕೊಂಡ **ಸಾರ್ಥಕ ಬದುಕಿನ ಸಾಧಕ'** ಎಂಬ ಗದ್ಯ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ** : ದಸರಾ ಉತ್ಸವದ ನಿಮಿತ್ಯ ಸರಕಾರದಿಂದ ಬಂದ ಸಂಭಾವನೆಯ ಹಣ ದಿವಾನರಿಗೆ ಮರಳಿಸಲು ದಿವಾನ ಸರ್.ಎಂ. ವಿಶ್ವೇಶ್ವರಯ್ಯನವರ ಬಳಿಗೆ ಬಂದಾಗ ದಿವಾನರು ಡಿ.ವಿ.ಜಿ. ಅವರಿಗೆ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ** : ಏನು ಬಂದೀರಿ ಗುಂಡಪ್ಪ ಎಂಬ ಮಾತಿನಲ್ಲಿ ದಿವಾನರಿಗೆ ಡಿ.ವಿ.ಜಿ. ಅವರ ಮೇಲೆ ಇರುವ ಕಾಳಜಿ ಬಹು ಸ್ವಾರಸ್ಯಕರವಾಗಿ ವರ್ಣಿಸಲಾಗಿದೆ.

**ಚಟುವಟಿಕೆ:–** **ಈ ಮೇಲಿನ ರೀತಿಯಲ್ಲಿ ಎಲ್ಲಾ ಸಂದರ್ಭಗಳನ್ನು ಈ ಕೆಳಕಾಣಿಸಿದ ಕೋಷ್ಟಕದಲ್ಲಿ ಬರೆಯಿರಿ.**

**೨. ನೀನು ಉತ್ಸವಕ್ಕೆ ಹೋಗುವುದಿಲ್ಲವೇ?"**

**ಆಯ್ಕೆ** : ಈ ವಾಕ್ಯವನ್ನು ------------------ ಅವರು ಬರೆದ ------------------- ಕೃತಿ ಎಂಬ ಕೃತಿಯಿಂದ ಆಯ್ದುಕೊಂಡ ------------ ಎಂಬ ಗದ್ಯ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ** : ---------------------------------------------------------------------------- ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ** : ---------------------------------------------------------------------------- ಬಹು ಸ್ವಾರಸ್ಯಕರವಾಗಿ ವರ್ಣಿಸಲಾಗಿದೆ.

**೩. "ನನ್ನ ಹತ್ತಿರ ಇರುವುದು ಇದೊಂದೇ ಸೀರೆ"**

**ಆಯ್ಕೆ** : ಈ ವಾಕ್ಯವನ್ನು ------------------ ಅವರು ಬರೆದ ------------------- ಕೃತಿ ಎಂಬ ಕೃತಿಯಿಂದ ಆಯ್ದುಕೊಂಡ ---------------- ಎಂಬ ಗದ್ಯ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ** : ---------------------------------------------------------------------------- ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ** : ---------------------------------------------------------------------------- ಬಹು ಸ್ವಾರಸ್ಯಕರವಾಗಿ ವರ್ಣಿಸಲಾಗಿದೆ.

**೪.ಹೊಲಿ ನಿನ್ನ ತುಟಿಗಳನು ಮಂಕುತಿಮ್ಮ"**

**ಆಯ್ಕೆ** : ಈ ವಾಕ್ಯವನ್ನು ------------------ ಅವರು ಬರೆದ ------------------- ಎಂಬ ಕೃತಿಯಿಂದ ಆಯ್ದುಕೊಂಡ ------------- ಎಂಬ ಗದ್ಯ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ** : ---------------------------------------------------------------------------- ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ** : ---------------------------------------------------------------------------- ಬಹು ಸ್ವಾರಸ್ಯಕರವಾಗಿ ವರ್ಣಿಸಲಾಗಿದೆ.

೫. "ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಗೆ"

**ಆಯ್ಕೆ** : ಈ ವಾಕ್ಯವನ್ನು ------------------ ಅವರು ಬರೆದ ------------------- ಎಂಬ ಕೃತಿಯಿಂದ ಆಯ್ದುಕೊಂಡ ------------- ಎಂಬ ಗದ್ಯ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ** : ---------------------------------------------------------------------------- ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ** : ---------------------------------------------------------------------------- ಬಹು ಸ್ವಾರಸ್ಯಕರವಾಗಿ ವರ್ಣಿಸಲಾಗಿದೆ.

ನಾಮಪದ

ಒಂದು ವಸ್ತು, ಒಬ್ಬ ವ್ಯಕ್ತಿ, ಒಂದು ಸ್ಥಳದ ಹೆಸರಾಗಿರಬಹುದು ಅಥವಾ ಒಂದು ಗುಂಪು, ಗುಣ, ಸ್ವಭಾವ, ಸಂಖ್ಯೆ, ಸ್ಥಾನ, ಅಳತೆ, ತೂಕ

ಇತ್ಯಾದಿಗಳನ್ನು ಸೂಚಿಸುವ ಪದಗಳಿಗೆ ನಾಮಪದ ಎನ್ನುವರು.

ನಾಮಪದದ ವಿಧಗಳು:–

**೧. ವಸ್ತುವಾಚಕ ಅಥವಾ ನಾಮವಾಚಕಗಳು:–**

**ಅ) ರೂಢನಾಮ**– (ರೂಢಿಯಿಂದ ಸಾಮಾನ್ಯವಾಗಿ ಕರೆಯುವ ಹೆಸರು)

ಗಂಡಸು, ಹೆಂಗಸು, ಮಕ್ಕಳು, ಜನ, ನದಿ, ಗಿಡ......

**ಆ) ಅಂಕಿತನಾಮ** – ( ನಿರ್ದಿಷ್ಟವಾಗಿ ಕರೆಯುವ ಹೆಸರುಗಳು)

ಗಣೇಶ, ಗಂಗಾ, ಯಾದಗಿರಿ, ವರ್ಷಿಣಿ, ವಿಜಯಲಕ್ಷ್ಮೀ.........

**ಇ) ಅನ್ವರ್ಥಕ ನಾಮ** – (ವಸ್ತುವಿನ ರೂಪ , ಗುಣ, ಸ್ವಭಾವ, ಮತ್ತು ಮಾಡುವ ವೃತ್ತಿಯ ಮೇಲೆ ಕರೆಯುವ ಹೆಸರು)

ಜಾಣ, ಪಂಡಿತ, ಶಿಕ್ಷಕ, ವಿದ್ಯಾರ್ಥಿ, ಕುರುಡ, ಕಿವುಡ ಇತ್ಯಾದ

೨. **ಗುಣವಾಚಕ:–** ವಿಶೇಷಣ ಪದಗಳು ಉದಾ – ಸಿಹಿ, ದೊಡ್ಡ, ಒಳ್ಳೆಯ, ಹಿರಿಯ.........
೩. **ಸಂಖ್ಯಾ ವಾಚಕ:–** ಸಂಖ್ಯೆಯ ಅರ್ಥ ಸೂಚಿಸುವ ಪದ. ಉದಾ:– ಒಂದು, ಎರಡು, ಮೂರು, ನಾಲ್ಕು.......
೪. **ಸಂಖ್ಯೇಯ ವಾಚಕ:–** ಸಂಖ್ಯೆಯಿಂದ ಕೂಡಿದ ವಸ್ತು. ಉದಾ:– ಒಂದನೆಯ, ಎರಡನೆಯ, ಒಬ್ಬರು,ಇಬ್ಬರು......
೫. **ಭಾವನಾಮ:–** ವಸ್ತುಗಳ ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಶಬ್ಧಗಳು

ಉದಾ:– ಬಿಳಿಯದ ಭಾವ– ಬಿಳುಪು, ಕರಿಯದರ ಭಾವ –ಕಪ್ಪು

೬. **ಪರಿಮಾಣ ವಾಚಕ:–** ವಸ್ತುಗಳ ಸಾಮಾನ್ಯ ಅಳತೆ, ಪರಿಮಾಣ, ಗಾತ್ರ ಸೂಚಿಸುವ ಪದಗಳು.

ಉದಾ:– ಪರಿಮಾಣ–ಕೆಲವು,ಹಲವು…..

ಗಾತ್ರ– ಅಷ್ಟು,ಇಷ್ಟು…….

೭. **ದಿಗ್ವಾಚಕಗಳು;–** ದಿಕ್ಕುಗಳನ್ನು ಹೆಸರಿಸಲು ಬಳಸುವ ಪದಗಳು– ಉದಾ– ಪೂರ್ವ, ಪಶ್ಚಿಮ,ಉತ್ತರ, ದಕ್ಷಿಣ….

## ಚಟುವಟಿಕೆ :– ಹೊಂದಿಸಿ ಬರೆಯಿರಿ

| ಎ | ಬಿ |
|---|---|
| ೧. ರೂಢನಾಮ | ಅ) ಕಪ್ಪು |
| ೨. ಅಂಕಿತನಾಮ | ಆ) ಮೂರು |
| ೩. ಅನ್ವರ್ಥಕ ನಾಮ | ಇ) ಪಶ್ಚಿಮ, |
| ೪. ಗುಣವಾಚಕ: | ಈ) ಒಂದನೆಯ |
| ೫. ಸಂಖ್ಯಾ ವಾಚಕ | ಉ) ದೊಡ್ಡ |
| ೬. ಸಂಖ್ಯೇಯ ವಾಚಕ | ಋ) ಹಲವು |
| ೭. ಭಾವನಾಮ | ಎ) ಶಿಕ್ಷಕ |
| ೮. ಪರಿಮಾಣ ವಾಚಕ | ಏ) ಕಕ್ಕೇರಾ |
| ೯. ದಿಗ್ವಾಚಕಗಳು | ಐ) ನದಿ |

## ಘಟಕ ಪರೀಕ್ಷೆ–೦೩ (ಸಾರ್ಥಕ ಬದುಕಿನ ಸಾಧಕ)

**ಅಂಕಗಳು–೧೦ ತರಗತಿ–೮ ಅವಧಿ ೩೦ ನಿಮಿಷ**

I. ಕೊಟ್ಟಿರುವ ಪ್ರತಿಯೊಂದು ಹೇಳಿಕೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ.

೧. ಈ ಕೆಳಗಿನವುಗಳಲ್ಲಿ ಅನ್ವರ್ಥಕ ನಾಮಪದ ೧x೩=೩

ಎ) ರಾಮ ಬಿ) ಹೂ ಸಿ) ಶಿಕ್ಷಕ ಡಿ) ಅವನು

೨. ಈ ಕೆಳಗಿನವುಗಳಲ್ಲಿ ಸಂಖ್ಯೇಯ ವಾಚಕ ನಾಮಪದ .

ಎ) ಎರಡು ಬಿ) ಇಬ್ಬರು ಸಿ) ಕೆಲವು ಡಿ) ಉತ್ತಮ

೩. ಈ ಕೆಳಗಿನವುಗಳಲ್ಲಿ ದಿಗ್ವಾಚಕ ನಾಮಪದವಲ್ಲದ್ದು

ಎ) ಉತ್ತರ ಬಿ) ದಕ್ಷಿಣ ಸಿ) ಪೂರ್ವ ಡಿ) ಮರ

II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ ೧x೩=೩

೪. ಡಿ.ವಿ.ಜಿ. ಅವರ ಹುಟ್ಟೂರು ಯಾವುದು?
೫. ಡಿ.ವಿ.ಜಿ. ಅವರು ಸ್ಥಾಪಿಸಿದ ಸಂಸ್ಥೆ ಯಾವುದು?
೬. ಡಿ.ವಿ.ಜಿ. ಅವರನ್ನು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಕಳುಹಿಸಿದವರು ಯಾರು?

III.ಈ ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ. ೨x೨=೪.

೭. "ನನ್ನ ಹತ್ತಿರ ಇರುವುದು ಇದೊಂದೇ ಸೀರೆ" – ಈ ಹೇಳಿಕೆಯ ಸಂದರ್ಭ ಸ್ವಾರಸ್ಯದೊಡನೆ ವಿವರಿಸಿ ಬರೆಯಿರಿ
೮. ಈ ಕೆಳಗಿನ ಗಾದೆಗಳಲ್ಲಿ ಒಂದನ್ನು ವಿಸ್ತರಿಸಿ ಬರೆಯಿರಿ.

ಅ) ಹಾಸಿಗೆ ಇದ್ದಷ್ಟು ಕಾಲು ಚಾಚು

ಆ) ಕುಂಬಾರನಿಗೆ ವರ್ಷ ದೊಣ್ಣೆಗೆ ನಿಮಿಷ

*****************************************

# ಪದ್ಯ–೨. ಭಾರತೀಯತೆ – ( ಕೆ.ಎಸ್. ನರಸಿಂಹಸ್ವಾಮಿ )

ನಿಗದಿಪಡಿಸಿದ ಅವಧಿಗಳು – ೫



ಪ್ರೇಮಕವಿ ಎಂದೇ ಪ್ರಸಿದ್ಧರಾಗಿರುವ ಕೆ.ಎಸ್. ನರಸಿಂಹಸ್ವಾಮಿ ಅವರು ಕ್ರಿಸ್ತ ಶಕ ಸುಮಾರು ೨೬ ಜನವರಿ ೧೯೧೫ರಲ್ಲಿ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ ಕಿಕ್ಕೇರಿಯಲ್ಲಿ ಜನಿಸಿದರು. ಇವರು ಮೈಸೂರು ಮಲ್ಲಿಗೆ, ಶಿಲಾಲತೆ, ಐರಾವತ, ನವ ಪಲ್ಲವ, ಇರುವಂತಿಗೆ, ದೀಪದ ಮಲ್ಲಿ, ಮನೆಯಿಂದ ಮನೆಗೆ, ತೆರೆದ ಬಾಗಿಲು ಎಂಬ ಮೊದಲಾದ ಕವನ ಸಂಕಲನಗಳನ್ನು ರಚಿಸಿದ್ದಾರೆ. ತೆರೆದ ಬಾಗಿಲು ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ದುಂಡಮಲ್ಲಿಗೆ ಕವನ ಸಂಕಲನಕ್ಕೆ ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಪಂಪ ಪ್ರಶಸ್ತಿ ನೀಡಿದೆ.

## ಹಂತ : ೦೧

| | |
|---|---|
| ಕವಿ / ಸಾಹಿತಿಗಳ ಹೆಸರು | |
| ಸ್ಥಳ / ಕಾಲ | |
| ಕವನ ಸಂಕಲನ | |
| ಬಿರುದು ಪ್ರಶಸ್ತಿಗಳು | |

## ಹಂತ – ೨ ಬಿಟ್ಟ ಸ್ಥಳವನ್ನು ಸೂಕ್ತ ಪದಗಳಿಂದ ತುಂಬಿರಿ.

------------------------ಎಂದು ಪ್ರಸಿದ್ಧರಾದ --------------------------------------ರವರು --------

--------------------ದಲ್ಲಿ ಕ್ರಿ.ಶ. ಸುಮಾರು--------------------------------ರಲ್ಲಿ ಜನಿಸಿದರು.

ಇವರು ವಿದ್ವಾಂಸರಾಗಿ ------------------------------------------------------------------

------------------------------------------------------------ಮುಂತಾದ ಕೃತಿಗಳನ್ನು ಬರೆದಿದ್ದಾರೆ.

ಇವರಿಗೆ ---------------------------------------------------------------------------

----------------------------------------------------ಮುಂತಾದ ಪ್ರಶಸ್ತಿಗಳು ಲಭಿಸಿವೆ.

## ಹಂತ : ೩ ಸ್ವತಂತ್ರವಾಗಿ ವಾಕ್ಯ ರೂಪದಲ್ಲಿ ಬರೆಯುವುದನ್ನು ರೂಢಿಸುವುದು.

------------------------------------------------------------------------------------------

------------------------------------------------------------------------------------------

------------------------------------------------------------------------------------------

------------------------------------------------------------------------------------------

------------------------------------------------------------------------------------------

------------------------------------------------------------------------------------------

------------------------------------------------------------------------------------------

------------------------------------------------------------------------------------------

--------------------------------

## ಪದ್ಯಭಾಗದ ಪ್ರಮುಖಾಂಶಗಳು:

೧. ಭಾರತ ದೇಶದ ಆಕಾಶದಷ್ಟು ಎತ್ತರವಾಗಿರುವ ಪರ್ವತ ಪ್ರದೇಶಗಳಲ್ಲಿ, ಕರಾವಳಿಯ ತೀರ ಪ್ರದೇಶಗಳಲ್ಲಿ, ಬಯಲು ಪ್ರದೇಶಗಳಲ್ಲಿ ಅನೇಕ ಜನರು ವಾಸಿಸುತ್ತಿದ್ದಾರೆ.

೨. ಭಾರತ ದೇಶದ ಬೆರೆ ಬೇರೆ ಪ್ರದೇಶಗಳಲ್ಲಿ ವಾಸ ಮಾಡುವವರ ಕಣ್ಣುಗಳು ಬೇರೆಯಾದರೂ ನೋಟವು ಒಂದೇ ಆಗಿದೆ.

೩. ನಮ್ಮ ದೇಶದಲ್ಲಿ ಹಲವಾರು ಗಡಿ ಪ್ರದೇಶಗಳಿವೆ.

೪. ನಮ್ಮ ದೇಶದಲ್ಲಿ ಹಲವಾರು ಕಡಲುಗಳಿವೆ.

೫. ನಮ್ಮ ದೇಶದ ಗಡಿಗಳಲ್ಲಿ, ಕಡಲಿನ ಗಡಿಗಳಲ್ಲಿ, ಆಕಾಶದ ಗಡಿಗಳಲ್ಲಿ ನಮ್ಮ ಯೋಧರು ಬಾವುಟಗಳನ್ನು ಹಾರಿಸುತ್ತಿದ್ದಾರೆ.

೬. ನಮ್ಮ ಎಲ್ಲರ ತಾಯಿ ಭಾರತ ಮಾತೆಯಾಗಿದ್ದಾಳೆ.

೭. ನಮ್ಮೆಲ್ಲರನ್ನು ಪೊರೆಯುತ್ತಿದ್ದಾಳೆ.

೮. ಭಾರತ ದೇಶದಲ್ಲಿ ಹಲವಾರು ಭಾಷೆಗಳಿದ್ದರೂ ಭಾರತೀಯರೆಲ್ಲರ ಭಾವನೆಗಳು ಒಂದೇ ಆಗಿವೆ.

೯. ತಾಯ್ನಾಡಿಗೆ ಪ್ರಾಣ ತ್ಯಾಗ ಮಾಡಿರುವ ಅನೇಕ ಹುತಾತ್ಮರು ನಮ್ಮ ದೇಶದಲ್ಲಿದ್ದಾರೆ.

೧೦. ನಾವು ಕಷ್ಟದಲ್ಲಿದ್ದರೂ ಪರರ ಕಷ್ಟಗಳಿಗೆ ಮಿಡಿಯುವ ಮನಸ್ಸು ಸಂಸ್ಕಾರ ನಮ್ಮದು.

೧೧.ಬಿರುಗಾಳಿ ಎಂಬ ಭಯಾನಕತೆಯಲ್ಲಿಯೂ ನಾವು ನಮ್ಮ ಗುರಿಯ ಬೆಳಕಿ ನಡೆಗೆ ಸಾಗುತ್ತಿದ್ದೇವೆ.

೧೨. ನಾವು ಯಾವುದೇ ರಾಜ್ಯದಲ್ಲಿದ್ದರೂ ನಾವು ಭಾರತೀಯರು ಎಂದು ಕವಿ ಅಭಿಮಾನದಿಂದ ಹೇಳಿದ್ದಾರೆ.

## ಅಭ್ಯಾಸ ಹಾಳೆ :

- ಮೇಲಿನ ಪ್ರಮುಖ ಅಂಶಗಳು ಕ್ರಮ ಸಂಖ್ಯೆಗಳನ್ನು ತೆಗೆದುಹಾಕಿ ವಾಕ್ಯ ರೂಪದಲ್ಲಿ ಜೋಡಿಸಿ ಬರೆಯಿರಿ.

________________________________________________________________________________

________________________________________________________________________________

________________________________________________________________________________

________________________________________________________________________________

________________________________________________________________________________

________________________________________________________________________________

________________________________________________________________________________

________________________________________________________________________

- ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೋತ್ತರಗಳು:

೧) ಹಿಮಾ ಪರ್ವತ ಯಾವ ಎತ್ತರಕ್ಕೆ ಎದ್ದು ನಿಂತಿವೆ ?

ಉ: ಪರ್ವತ ಹಿಮಾ ಆಕಾಶದ ಎತ್ತರಕ್ಕೆ ಎದ್ದು ನಿಂತಿದೆ.

೨. ಪೆರ್ದೆರೆಗಳು ಯಾವುದಕ್ಕೆ ಮುತ್ತ ನೀಡುತ್ತಿವೆ ?

ಉ: ಪೆರ್ದೆರೆಗಳು ಕರಾವಳಿಗೆ ಮುತ್ತ ನೀಡುತ್ತಿವೆ.

೨) ಹಸಿರು ದೀಪವನ್ನು ಎಲ್ಲಿ ಹಚ್ಚಲಾಗಿದೆ ?

ಉ: ಹಸಿರು ದೀಪವನ್ನು ಬಯಲು ತುಂಬಾ ಹಚ್ಚಲಾಗಿದೆ.

೩) ನಮ್ಮ ಧ್ವಜವನ್ನು ಎತ್ತಿ ಹಿಡಿದಿರುವವರು ಯಾರು ?

ಉ: ನಮ್ಮ ಧ್ವಜವನ್ನು ಎತ್ತಿ ಹಿಡಿದಿರುವವರು ನಮ್ಮ ಯೋಧರು.

೪) ನಮ್ಮ ಪಯಣ ಎತ್ತಸಾಗಿದೆ ?

ಉ: ನಮ್ಮ ಪಯಣ ಬೆಳಕಿನೆಡೆಗೆ ಸಾಗಿದೆ.

- ಈ ಪದ್ಯ ಭಾಗದಲ್ಲಿ ಬಂದಿರುವ ಸಾಂದರ್ಭಿಕ ಹೇಳಿಕೆಗಳನ್ನು ಸ್ವಾರಸ್ಯವಾಗಿ ಬರೆಯಿರಿ.

ಆಯ್ಕೆ : ಈ ವಾಕ್ಯವನ್ನು ಕೆ ಎಸ್ ನರಸಿಂಹಸ್ವಾಮಿ ಅವರು ಬರೆದಿರುವ ನವ ಪಲ್ಲವ ಎಂಬ ಕವನ ಸಂಕಲನದಿಂದ ಆರಿಸಿ ಭಾರತೀಯತೆ ಎಂಬ ಪದ್ಯದಿಂದ ಆಯ್ದುಕೊಳ್ಳಲಾಗಿದೆ.

| ಪದ್ಯ | ಸಾಂದರ್ಭಿಕ ಪ್ರಶ್ನೆಗಳು | ಯಾರು ? ಯಾರಿಗೆ ? | ಸಂದರ್ಭ |
|---|---|---|---|
| ಭಾರತೀಯತೆ | "ಕಣ್ಣು ಬೇರೆ ನೋಟ ಒಂದು" | ಕವಿಯು ಓದುಗರಿಗೆ | ಭಾರತ ದೇಶದಲ್ಲಿ ವಿವಿಧ ಪ್ರದೇಶಗಳಲ್ಲಿ ವಾಸಿಸುವ ಜನರ ನೋಟದ ಕುರಿತು ವಿವರಿಸುವ ಸಂಧರ್ಭ. |
| | "ಭಾಷೆ ಬೇರೆ ಭಾವ ಒಂದು" | ಕವಿಯು ಓದುಗರಿಗೆ | ಬಾನು ಕಡಲುಗಳ ಕುರಿತು ನಮ್ಮ ಯೋಧರ ಕುರಿತು ತಾಯ್ನಾಡಿನ ಕುರಿತು ವಿವರಿಸುವಾಗ. |
| | "ಎಲ್ಲೇ ಇರಲಿ ನಾವು ಒಂದು" | ಕವಿಯು ಓದುಗರಿಗೆ | ನಮ್ಮ ನಾಡಿಗಾಗಿ ಪ್ರಾಣ ತ್ಯಾಗ ಮಾಡಿರುವ ಹುತಾತ್ಮರ ಕುರಿತು ನಮ್ಮ ಸಂಸ್ಕೃತಿಯ ಕುರಿತು ನಾವೆಲ್ಲರೂ ಒಂದೇ ಎಂಬ ಕುರಿತು ವಿವರಿಸುವಾಗ. |

➤ ಸಂದರ್ಭ ಸಹಿತ ಉತ್ತರವನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ.

ಆಯ್ಕೆ : ಈ ವಾಕ್ಯವನ್ನು ---------------------------------- ಅವರು ಬರೆದಿರುವ ----------------------
ಎಂಬ ಕವನ ಸಂಕಲನದಿಂದ ಆರಿಸಿ ------------------------ ಎಂಬ ಪದ್ಯದಿಂದ ಆಯ್ದುಕೊಳ್ಳಲಾಗಿದೆ.

- ಸಂದರ್ಭ: ಈ ಮಾತನ್ನು ಯಾರು, ಯಾರಿಗೆ, ಯಾವಾಗ, ಏಕೆ, ಹೇಳಿದರು ಎಂಬ ಅಂಶಗಳನ್ನು ಬರೆಯಬೇಕು.

--------------------------------------------------------------------------------------------------------------

--------------------------------------------------------------------------------------------------------------

--------------------------------------------------------------------------------------------------------

- ಸ್ವಾರಸ್ಯ: ಈ ಮಾತಿನ ವಿಶೇಷತೆಯನ್ನು ಮೌಲ್ಯವನ್ನು ಗುಣವನ್ನು ಕುರಿತು ಬರೆಯಬೇಕು.

--------------------------------------------------------------------------------------------------------------

------------------------------------------------------------------------------------------------------------

## ಅಭ್ಯಾಸ

### ಪದ್ಯ ಕಂಠಪಾಠ

| |
|---|
| ನಾಡಿಗಾಗಿ ತನುವತೆತ್ತ ಹುತಾತ್ಮರ ಸ್ಮರಣೆಯಲ್ಲಿ |
| ನಮ್ಮ ಕಷ್ಟದಲ್ಲೂ ನೆರೆಗೆ ನೆರಳ ನೀವ ಕರುಣೆಯಲ್ಲಿ |
| ದಾರಿ ಬಳಸಿ ಏರುವಲ್ಲಿ ಬಿರುಗಾಳಿಯ ಮೊಳಗುವಲ್ಲಿ |
| ನಮ್ಮ ಗುರಿಯ ಬೆಳಕಿನೆಡೆಗೆ ನಡೆವ ಧೀರ ಪಯಣದಲ್ಲಿ |

### ಅಭ್ಯಾಸ ಹಾಳೆ :

**ಒಂದೊಂದೇ ಸಾಲನ್ನು ರೂಢಿಗಳಿಸುವುದು.**

ನಾಡಿಗಾಗಿ ತನುವತೆತ್ತ ಹುತಾತ್ಮರ ಸ್ಮರಣೆಯಲ್ಲಿ

-----------------------------------------------------------------------------------

ನಮ್ಮ ಕಷ್ಟದಲ್ಲೂ ನೆರೆಗೆ ನೆರಳ ನೀವ ಕರುಣೆಯಲ್ಲಿ

-----------------------------------------------------------------------------------

ದಾರಿ ಬಳಸಿ ಏರುವಲ್ಲಿ ಬಿರುಗಾಳಿಯ ಮೊಳಗುವಲ್ಲಿ

-----------------------------------------------------------------------------------

ನಮ್ಮ ಗುರಿಯ ಬೆಳಕಿನೆಡೆಗೆ ನಡೆವ ಧೀರ ಪಯಣದಲ್ಲಿ

---

- **ಸುಳಿವು ನೀಡಿ ಬರೆಸುವುದು.**

ನಾಡಿಗಾಗಿ-----------------------------------------------------------------------------------

ನಮ್ಮ ಕಷ್ಟದಲ್ಲೂ -----------------------------------------------------------------------------

ದಾರಿ ಬಳಸಿ ------------------------------------------------------------------------------------

ನಮ್ಮ ಗುರಿಯ-----------------------------------------------------------------------------------

## • ಪದ್ಯವನ್ನು ಪೂರ್ಣಗೊಳಿಸಿರಿ.

ನಾಡಿಗಾಗಿ-----------------------------------------------------------------------------------------

----------------------------------------------------- ---------------------ಕರುಣೆಯಲ್ಲಿ

ದಾರಿ---------------------------------------------------------------------------------------------

-----------------------------------------------------------------------------ಪಯಣದಲ್ಲಿ.

## ವ್ಯಾಕರಣಾಂಶಗಳು

ಛಂದಸ್ಸು :- ಪದ್ಯ ರಚನಾ ನಿಯಮಗಳನ್ನು ತಿಳಿಸುವ ಶಾಸ್ತ್ರಕ್ಕೆ ಛಂದಸ್ಸು ಎಂದು ಕರೆಯುತ್ತಾರೆ. ಪದ್ಯವನ್ನು ರಚಿಸಲು ಬೇಕಾದ ನಿರ್ದಿಷ್ಟ ಪಾದಗಳ ಬಗ್ಗೆ ಮತ್ತು ಪ್ರತಿ ಪಾದದಲ್ಲಿ ಇರಬೇಕಾದ ಪ್ರಾಸ, ಯತಿ, ಗಣಗಳ ಬಗ್ಗೆ ತಿಳಿಸುವ ಶಾಸ್ತ್ರಕ್ಕೆ ಛಂದಸ್ಸು ಎಂದು ಕರೆಯುತ್ತಾರೆ.

ಛಂದಸ್ಸಿನಲ್ಲಿ ಪದ್ಯಗಳೇ ಪ್ರಧಾನವಾಗಿವೆ.

ಪದ್ಯಗಳು :- ಒಂದು ಗೊತ್ತಾದ ಸಾಲುಗಳ ನಿಯಮ ಅನುಸರಿಸಿ ಬರೆದವುಗಳಿಗೆ ಪದ್ಯಗಳೆನ್ನುವರು.

ತ್ರಿಪದಿ :- ಮೂರು ಪಾದಗಳ ಪದ್ಯವನ್ನು ತ್ರಿಪದಿ ಎನ್ನುತ್ತಾರೆ.

ಚೌಪದಿ :- ನಾಲ್ಕು ಪಾದಗಳ ಪದ್ಯವನ್ನು ಚೌಪದಿ ಎನ್ನುತ್ತಾರೆ.

ಷಟ್ಪದಿ :- ಆರು ಪಾದಗಳ ಪದ್ಯವನ್ನು ಷಟ್ಪದಿ ಎನ್ನುತ್ತಾರೆ.

ಅಷ್ಟ ಷಟ್ಪದಿ (ಸುನೀತ/ಸಾನೆಟ್) :- ಹದಿನಾಲ್ಕು  ಪಾದಗಳ ಪದ್ಯವನ್ನು ಅಷ್ಟ ಷಟ್ಪದಿ ಎನ್ನುತ್ತಾರೆ.

ಛಂದಸ್ಸಿನಲ್ಲಿ ಪ್ರಾಸ, ಯತಿ, ಗಣ ಪ್ರಮುಖವಾಗಿವೆ.

ಪ್ರಾಸ :- ಪದ್ಯದ ಪ್ರತಿಯೊಂದು ಪಾದದ ಎರಡನೆ ಅಕ್ಷರದಲ್ಲಿ ಅಥವಾ ಪ್ರತಿ ಸಾಲಿನ ಕೊನೆಯ ಅಕ್ಷರದಲ್ಲಿ ಒಂದೇ ಜಾತಿಯ ವ್ಯಂಜನವಿದ್ದರೆ ಅದಕ್ಕೆ ಪ್ರಾಸ ಎಂದು ಕರೆಯುತ್ತಾರೆ.

ಉದಾ:- ಗುರು ಹಿರಿಯರ ಅರಿಯದವನ ಅರಿವದೇತಕೆ
ಪರ ಹಿತಾರ್ಥಕಿಲ್ಲದವನ ಶರೀರವೇತಕೆ
ಹರಿಯ ಪೂಜೆ ಮಾಡದವನ ಜನುಮವೇತಕೆ
ಸೇರಿದವರ ಹೊರೆಯದಂಥ ದೊರೆಯು ಏತಕೆ

ಈ ಮೇಲಿನ ಉದಾಹರಣೆಯಲ್ಲಿ 'ರ' ಆದಿಪ್ರಾಸ ಮತ್ತು 'ಕ' ಅಂತ್ಯಪ್ರಾಸ ಆಗಿದೆ.

- ಪ್ರಾಸಗಳಲ್ಲಿ ಮೂರು ಪ್ರಕಾರಗಳು:-

೧. ಆದಿಪ್ರಾಸ :- ಪ್ರತಿ ಸಾಲಿನ ಎರಡನೆ ಅಕ್ಷರ ಪ್ರಾಸವಾಗಿದ್ದರೆ ಅದಕ್ಕೆ ಆದಿಪ್ರಾಸ ಎನ್ನುವರು.

೨. ಮದ್ಯಪ್ರಾಸ (ಒಳಪ್ರಾಸ) :- ಮಧ್ಯದಲ್ಲಿ ಬರುವ ಪ್ರಾಸವನ್ನು ಮಧ್ಯಪ್ರಾಸ ಎನ್ನುವರು.

೩. ಅಂತ್ಯ ಪ್ರಾಸ ;- ಅಂತ್ಯದಲ್ಲಿ ಬರುವ ಪ್ರಾಸವನ್ನು ಅಂತ್ಯಪ್ರಾಸ ಎನ್ನುವರು.

ಯತಿ: ಪದ್ಯವನ್ನು ವಾಚಿಸುವಾಗ ಅರ್ಥಕ್ಕೆ ಲೋಪವಾಗುದಂತೆ ನಿಲ್ಲಿಸುವ ಸ್ಥಳವನ್ನು ಯತಿ ಎನ್ನುವರು. ಯತಿ ಎಂಬುವುದು ಸಂಸ್ಕೃತ ಕಾವ್ಯಗಳಲ್ಲಿ ಬಳಕೆಯಾದಷ್ಟು ಕನ್ನಡದಲ್ಲಿ ಬಳಕೆ ಆಗುವುದಿಲ್ಲ.

ಗಣ: ಎಂದರೆ ಗುಂಪು ಎಂದರ್ಥ ಪದ್ಯದ ಪ್ರತಿ ಸಾಲಿನ ಅಕ್ಷರ ಅಥವಾ ಮಾತ್ರೆ ಅಥವಾ ಅಂಶಗಳ ಗುಂಪಿಗೆ ಗಣ ಎನ್ನುವರು.

ಗಣಗಳಲ್ಲಿ ಮೂರು ಪ್ರಕಾರಗಳು:

- ಮಾತ್ರಾ ಗಣ : ಮಾತ್ರಾ ಗಣ ಮಾತ್ರೆಗಳ ಲೆಕ್ಕಾಚಾರದಿಂದ ಗುಂಪು ಮಾಡಿದರೆ ಅದನ್ನು ಮಾತ್ರ ಗಣ ಎನ್ನುವರು.
- ಅಕ್ಷರಗಣ: ಅಕ್ಷರಗಳ ಲೆಕ್ಕಾಚಾರದಿಂದ ಗುಂಪು ಮಾಡಿದರೆ ಅದಕ್ಕೆ ಅಕ್ಷರಗಣ ಎನ್ನುವರು.
- ಅಂಶಗಣ: ಅಂಶಗಳ ಆಧಾರದಿಂದ ಗುಂಪು ಮಾಡಿದರು ಅದಕ್ಕೆ ಅಂಶ ಗಣ ಎನ್ನುವರು.

ಅಭ್ಯಾಸ ಚಟುವಟಿಕೆ : ಈ ಮೇಲಿನ ವ್ಯಾಕರಣ ಅಂಶಗಳನ್ನು ಬಳಸಿಕೊಂಡು ಈ ಕೆಳಗಿನ ಅಂಶಗಳಿಗೆ ಸರಿಯಾದ ಉತ್ತರವನ್ನು ಬರೆಯಿರಿ.

- ಛಂದಸ್ಸಿನ ಅರ್ಥ:------------------------------------------------------------------------
- ಪದ್ಯದ ಅರ್ಥ:--------------------------------------------------------------------------
- ತ್ರಿಪದಿ ಅರ್ಥ:--------------------------------------------------------------------------
- ಚೌಪದಿ ಅರ್ಥ:--------------------------------------------------------------------------
- ಷಟ್ಪದಿ ಅರ್ಥ:--------------------------------------------------------------------------
- ಅಷ್ಟಷಟ್ಪದಿ ಅರ್ಥ:---------------------------------------------------------------------
- ಪ್ರಾಸದ ಅರ್ಥ:-------------------------------------------------------------------------
- ಪ್ರಾಸದ ಪ್ರಕಾರಗಳು:--------------------------------------------------------------------

## ಪ.ಪೂ. ಅ- ೨. ಆಹುತಿ – (ಕೊಡಗಿನ ಗೌರಮ್ಮ)

### ನಿಗದಿಪಡಿಸಿದ ಅವಧಿಗಳು - 1



ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

೧. ರೈಲಿನಲ್ಲಿ ಸಿಕ್ಕಿದ ಮುದುಕನ ಉದ್ಯೋಗವೇನು?

ಉ: ರೈಲಿನಲ್ಲಿ ಸಿಕ್ಕಿದ ಮುದುಕನ ಉದ್ಯೋಗ ರತ್ನದ ವ್ಯಾಪಾರಿ.

೨. ಯುವಕನು ರೈಲಿನಲ್ಲಿ ಸಿಕ್ಕಿದ ಮುದುಕನ ಮನೆಗೆ ಏಕೆ ಬಂದನು?

ಉ: ಎಲ್ಲಿಯೂ ಕೆಲಸ ಸಿಗದ ಕಾರಣ ಯುವಕನು ರೈಲಿನಲ್ಲಿ ಸಿಕ್ಕಿದ ಮುದುಕನ ಮನೆಗೆ ಬಂದನು.

೩.ಮುದುಕನ ಮಗಳು ಮತ್ತು ಸೊಸೆಯ ಹೆಸರೇನು?

ಉ: ಮುದುಕನ ಮಗಳ ಹೆಸರು ಸೀತೆ ಮತ್ತು ಸೊಸೆಯ ಹೆಸರು ಶಾಂತಿ

೪. ವರದಕ್ಷಿಣೆಯ ಪಿಶಾಚಿ ಯಾರನ್ನು ಬಲಿ ತೆಗೆದುಕೊಂಡಿದೆ?

ಉ: ವರದಕ್ಷಿಣೆಯ ಪಿಶಾಚಿ ಸುಕುಮಾರಿಯರನ್ನು ಬಲಿ ತೆಗೆದುಕೊಂಡಿದೆ

೫. ಯುವಕನು ಬಡವರ ಹುಡುಗಿಯನ್ನು ಮದುವೆಯಾಗದಿರಲು ಕಾರಣಗಳೇನು?

ಉ: ಯುವಕನಿಗೆ ಲಂಡನ್ನಿನಲ್ಲಿ ಲಾ ಮಾಡುವ ಬಯಕೆಯಿದ್ದಿತು ಆದರೆ ತನ್ನ ತಂದೆಯಲ್ಲಿ ಅಷ್ಟೊಂದು ಶಕ್ತಿಯಿರಲಿಲ್ಲ. ಶ್ರೀಮಂತರ ಅಳಿಯನಾದರೆ ಅದು ಸಾಧ್ಯವೆಂದು ತಿಳಿದು ಬಡವರ ಹುಡುಗಿಯನ್ನು ಮದುವೆಯಾಗಲಿಲ್ಲ.

೬. ಪತ್ರಿಕೆಯನ್ನು ತೋರಿಸಿ ವಿಜಯಳು ಅಣ್ಣನಿಗೆ ಏನು ಹೇಳಿದಳು?

ಉ: ನೀನು ಕೊಂದ ಹುಡುಗಿಯನ್ನು ನೋಡು ಎಂದಳು.

## ಘಟಕ ಪರೀಕ್ಷೆ – ೮ ( ಪಠ್ಯ ಪೂರಕ ಅಧ್ಯಯನ – ಆಹುತಿ )

ನಿಗದಿಪಡಿಸಿದ ಅವಧಿ – ೧ ಅಂಕಗಳು – ೧೦

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. ೧*೬=೬**

೧. ರೈಲಿನಲ್ಲಿ ಸಿಕ್ಕಿದ್ದ ಮುದುಕನ ಉದ್ಯೋಗವೇನು ?

------------------------------------------------------------------------------------------------

೨. ಮುದುಕನ ಮಗಳು ಮತ್ತು ಸೊಸೆಯ ಹೆಸರೇನು ?

------------------------------------------------------------------------------------------------

೩. ವರದಕ್ಷಿಣೆ ಪಿಶಾಚಿ ಯಾರನ್ನು ಬಲಿ ತೆಗೆದುಕೊಂಡಿದೆ ?

------------------------------------------------------------------------------------------------

೪. ಯುವಕನು ರೈಲಿನಲ್ಲಿ ಸಿಕ್ಕ ಮುದುಕನ ಮನೆಗೆ ಏಕೆ ಬಂದನು ?

------------------------------------------------------------------------------------------------

೫. ಪತ್ರಿಕೆಯನ್ನು ತೋರಿಸಿ ವಿಜಯಳು ಅಣ್ಣನಿಗೆ ಏನು ಹೇಳಿದಳು ?

------------------------------------------------------------------------------------------------

೬. ಯುವಕನಿಗೆ ಏನಾಗಬೇಕೆಂದು ಆಸೆಯಿತ್ತು ?

------------------------------------------------------------------------------------------------

**ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. ೨*೨=೪**

೭. ಯುವಕನು ಬಡವರ ಹುಡುಗಿಯನ್ನು ಮದುವೆಯಾಗದಿರಲು ಕಾರಣವೇನು ?

------------------------------------------------------------------------------------------------

------------------------------------------------------------------------------------------------

೮. ಶಾಂತಿ ಕಾಗದದಲ್ಲಿ ಏನೆಂದು ಬರೆದಿದ್ದಳು ?

------------------------------------------------------------------------------------------------

------------------------------------------------------------------------------------------------

******

**ಕೊಟ್ಟಿರುವ ಪ್ರತಿಪ್ರಶ್ನೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಸರಿಯುತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ** **೩x೧=೩**

೧. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯಾ ವ್ಯಂಜನಾಕ್ಷರಗಳ ಸಂಖ್ಯೆ;

(ಎ) ೨೪ (ಬಿ) ೩೪ (ಸಿ) ೦೯ (ಡಿ) ೪೯

೨. ಇವುಗಳಲ್ಲಿ ಸಜಾತಿ ಸಂಯುಕ್ತಾಕ್ಷರದಿಂದ ಕೂಡಿದ ಪದವಿದು;

(ಎ) ಅಣ್ಣ (ಬಿ) ಮಸ್ತಕ (ಸಿ) ಕ್ರಮ (ಡಿ) ತಾಳ್ವೆ

೩. 'ಮಾ' ಎನ್ನುವ ಪದದ ಕಾಗುಣಿತ ರೂಪ

(ಎ) ಮ+ಅ (ಬಿ) ಮ+ಆ (ಸಿ) ಮ+ಇ (ಡಿ) ಮ+ಈ

**ಕೊಟ್ಟಿರುವ ಪ್ರತಿಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.** **೩x೧=೩**

೪. ಅಬ್ದುಲ್ ರಹೀಮನ ಹಠವೇನು ?

೫. ಕನ್ನಡ ತಾಯಿಯ ಬಸಿರ ಹೊನ್ನಗನಿ ಯಾರು ?

೬. ಗಾಳಿಯಲ್ಲಿ ಬೂದಿಯನ್ನು ತೂರಿದಾಗ ಎಲ್ಲಿ ಬೀಳುತ್ತದೆ ?

**ಕೊಟ್ಟಿರುವ ಪ್ರತಿಪ್ರಶ್ನೆಗೂ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.** **೨x೨=೪**

೭. ವಿಶ್ವೇಶ್ವರಯ್ಯ ಅವರು ತಮ್ಮ ಕಾರ್ಯದರ್ಶಿಗೆ ಏನು ಹೇಳಿದರು ?

೮. ಭಾಷೆ ಬೇರೆಯಾದರೂ ಭಾವ ಒಂದು ಸಮರ್ಥಿಸಿ ?

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ,ಕೃತಿಯನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **೧*೨=೨**

೯. ಬಾಗಲೋಡಿ ದೇವರಾಯ

**ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **೧x೩=೩**

೧೦. ತಾಳಿದವನು ಬಾಳಿಯಾನು. **ಅಥವಾ**

ಚಿಂತೆಯೇ ಮುಪ್ಪು; ಸಂತೋಷವೇ ಯೌವನ.

**ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ** **೧x೩=೩**

೧೧. "ಮಗ್ಗವಲ್ಲ ಕೊರಳಿಗೆ ಹಗ್ಗ"

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **೧x೨=೨**

೧೨.ನಾಡಿಗಾಗಿ -----------------------

--------------------------------------

--------------------------------------

----------------------------- ಪಯಣದಲ್ಲಿ

******************************************

## ಗದ್ಯ– ೩ . ನೀರು ಕೊಡದ ನಾಡಿನಲ್ಲಿ – ( ನೇಮಿಚಂದ್ರ )

## ನಿಗದಿಪಡಿಸಿದ ಅವಧಿಗಳು – ೪



**ಶ್ರೀಮತಿ ನೇಮಿಚಂದ್ರ ಅವರು ಪ್ರೊ. ಜಿ.ಗುಂಡಣ್ಣ – ತಿಮ್ಮಕ್ಕ ಎಂಬ ದಂಪತಿಗಳ ಉದರದಲ್ಲಿ ಚಿತ್ರದುರ್ಗದಲ್ಲಿ ಜುಲೈ–೧೬, ೧೯೫೯ ರಂದು ಜನಿಸಿದರು. ಪ್ರಸ್ತುತ ಇವರು ಬೆಂಗಳೂರಿನ ಎಚ್.ಎ.ಎಲ್. ಸಂಸ್ಥೆಯಲ್ಲಿ ಉನ್ನತ ತಂತ್ರಜ್ಞ ಅಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಇವರು ಯಾದ್ ವಶೇಮ್, ನಮ್ಮ ಕನಸುಗಳಲ್ಲಿ ನೀವಿದ್ದೀರಿ, ಪೆರುವಿನ ಪವಿತ್ರ ಕಣಿವೆಯಲ್ಲಿ, ಬದುಕು ಬದಲಿಸಬಹುದು ಎಂಬ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಪೇರುವಿನ ಪವಿತ್ರ ಕಣಿವೆಯಲ್ಲಿ ಕೃತಿಗೆ ಕರ್ನಾಟಕ ಸಾಹಿತ್ಯ ಪ್ರಶಸ್ತಿ, ನೃಪತುಂಗ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿಗಳು ಲಭಿಸಿವೆ.**

### ಅಭ್ಯಾಸ ಮಾದರಿ

### ಹಂತ –೧ ಪ್ರಮುಖ ಅಂಶಗಳನ್ನು ಗುರುತಿಸುವುದು :

| | |
|---|---|
| ಕವಿಯ ಹೆಸರು | ಶ್ರೀಮತಿ ನೇಮಿಚಂದ್ರ |
| ಸ್ಥಳ ಕಾಲ | ಚಿತ್ರದುರ್ಗ ಜುಲೈ–೧೬, ೧೯೫೯ |
| ಕೃತಿಗಳು | ನಮ್ಮ ಕನಸುಗಳಲ್ಲಿನೀವಿದ್ದೀರಿ, ತೇರುವಿನ ಪವಿತ್ರ ಕಣಿವೆಯಲ್ಲಿ ಬದುಕು ಬದಲಿಸಬಹುದು. |
| ಪ್ರಶಸ್ತಿಗಳು | ಕರ್ನಾಟಕ ಸಾಹಿತ್ಯ ಪ್ರಶಸ್ತಿ ನೃಪತುಂಗ ಪ್ರಶಸ್ತಿ ಅತ್ತಿಮಬ್ಬೆ ಪ್ರಶಸ್ತಿ |

### ಹಂತ –೨ ಸ್ವತಂತ್ರವಾಗಿ ಬರೆಯುವುದನ್ನು ರೂಢಿಸುವುದು.

| | |
|---|---|
| ಕವಿಯ ಹೆಸರು | |
| ಸ್ಥಳ ಕಾಲ | |
| ಕೃತಿಗಳು | |
| ಪ್ರಶಸ್ತಿಗಳು | |

### ಅಭ್ಯಾಸ ಹಾಳೆ :

### ಹಂತ – ೩. ಬಿಟ್ಟ ಸ್ಥಳವನ್ನು ಸೂಕ್ತ ಪದಗಳಿಂದ ತುಂಬಿರಿ.

**--------------ಎಂದು ಪ್ರಸಿದ್ಧರಾದ -----------------------ರವರು -----------------------------ದಲ್ಲಿ ಕ್ರಿ.ಶ. ಸುಮಾರು----------------------------------ರಲ್ಲಿ ಜನಿಸಿದರು. ಇವರು ವಿದ್ವಾಂಸರಾಗಿ -------------------------- -----------------------------ಮುಂತಾದ ಕೃತಿಗಳನ್ನು ಬರೆದಿದ್ದಾರೆ.**

**ಇವರಿಗೆ ------------------------------------------------------------------------------------ ------------------------------------------------------------------ಮುಂತಾದ ಪ್ರಶಸ್ತಿಗಳು ಲಭಿಸಿವೆ.**

## ಪಾಠದ ಪ್ರಮುಖ ಅಂಶಗಳು :

೧) ಭಾರತೀಯ ಸಂಸ್ಕೃತಿ ಸಂಪ್ರದಾಯ ಅತಿಥಿ ಸತ್ಕಾರ ತಿಳಿಯುವುದು.

೨) ಯುರೋಪ ಹಾಗೂ ಅಮೇರಿಕದ ಸಂಸ್ಕೃತಿ ಸಂಪ್ರದಾಯ ಅರಿಯುವುದು.

೩) ಭಾರತ ದೇಶದಲ್ಲಿ ಬೇಸಿಗೆ ಸಂದರ್ಭದಲ್ಲಿ ಬಸ್ ನಿಲ್ದಾಣಗಳಲ್ಲಿ, ರೈಲ್ವೆ ನಿಲ್ದಾಣಗಳಲ್ಲಿ ಅನೇಕ ಗುರುದ್ವಾರಗಳಲ್ಲಿ, ರಸ್ತೆಯ ಅಕ್ಕ ಪಕ್ಕದಲ್ಲಿ ಸ್ವಯಂ ಸೇವಕರು ಮಣ್ಣಿನ ಮಡಿಕೆಗಳಲ್ಲಿ ನೀರು ತುಂಬಿಟ್ಟು ಜನರ ದಾಹ ಹಿಂಗಿಸುತ್ತಾರೆ.

೪) ಭಾರತ ದೇಶದಲ್ಲಿ ದಾಭಾ ಆಗಲಿ, ದರ್ಶನಿ ಆಗಲಿ, ಪಂಚತಾರಾ ಹೋಟೆಲ್ ಆಗಲಿ, ಮೊದಲು ಪುಕ್ಕಟೆಯಾಗಿ ನೀರು ಮೇಜಿನ ಮೇಲೆ ಕುಳಿತುಕೊಳ್ಳುತ್ತದೆ.

೫) ವಿದೇಶಗಳಲ್ಲಿ ಫಾಸ್ಟ್ ಫುಡ್ , ಜಾಯಿಂಟ್ಸ್, ಪಂಚತಾರಾ ಹೋಟೆಲಗಳಲ್ಲಿ ಫ್ರೆಂಚ್ ಫ್ರೈಸ್, ಸ್ಯಾಂಡ್ ವಿಚ್, ಬರ್ಗರ್, ಮ್ಯಾಗ್ ಡೊನಾಲ್ಡ್ ಗಳ ಜೊತೆಗೆ ವೈನ್ ಬಿಯರ್ ಕೋಲಾಗಳಿಂದಲೇ ಊಟ ಆರಂಭ.

೬) ಅಮೆರಿಕದಲ್ಲಿ ಮಧ್ಯಾಹ್ನದ ಊಟದ ಸಮಯದಲ್ಲಿ ಸ್ಪಾರ್ಕ್ಲಿಂಗ್ ವಾಟರ್ ಕೊಡುತ್ತಾರೆ.

೭) ಅಮೇರಿಕಾದಲ್ಲಿ ನೀರಿಗೆ ಹೆಚ್ಚು ಹಣ ತಂಪು ಪಾನೀಯ ಗಳಿಗೆ ಕಡಿಮೆ ಹಣ ಎಂಬ ವಾತಾವರಣ ಸೃಷ್ಟಿಯಾಗಿದೆ.

೮) ವಿದೇಶಗಳಲ್ಲಿರುವ ಫಿಲ್ಟರ್ ವಾಟರ್ ಎಂಬ ಶುದ್ಧವಾದ ನೀರು ಎಂಬ ಕಲ್ಪನೆ ವಿಶ್ವದಲ್ಲೆಲ್ಲಾ ಹಬ್ಬಿಸಿ ಎಲ್ಲಾ ಜನರು ಫಿಲ್ಟರ್ ವಾಟರ್ ಗೆ ಮುಗಿ ಬಿದ್ದಿದ್ದಾರೆ.

೯) ವಿದೇಶದ ಕೊಳ್ಳಬಾಕ ಸಂಸ್ಕೃತಿ ಭಾರತದಲ್ಲಿ ಹರಡಿದೆ.

೧೦) ಮದರ್ಸ್ ಡೇ, ಫಾದರ್ಸ್ ಡೇ, ವ್ಯಾಲೆಂಟೈನ್ಸ್ ಡೇ ಇಂತಹ ಆಚರಣೆಗಳಿಗೆ ಮಾರುಹೋಗಿದ್ದಾರೆ.

೧೧) ಭಾರತ ದೇಶದಲ್ಲಿ ಬೆಂಗಳೂರು, ಮುಂಬೈ, ಕಲ್ಕತ್ತಾ, ಮದ್ರಾಸ್ ಹೀಗೆ ದೊಡ್ಡ ದೊಡ್ಡ ಮಹಾನಗರಗಳಲ್ಲಿ ವಿದೇಶಿ ಸಂಸ್ಕೃತಿ ಹಬ್ಬಿದೆ.

೧೨) ನಮಗೆ ಸತ್ಕರಿಸುವ ಹೋಟೆಲ್, ದರ್ಶನಿ, ಜಾಯಿಂಟ್ಸ್ ಗಳನ್ನು ಉಳಿಸಿ ಬೆಳೆಸಬೇಕು.

## ಅಭ್ಯಾಸ ಹಾಳೆ :

- **ಮೇಲಿನ ಪ್ರಮುಖ ಅಂಶಗಳು ಕ್ರಮ ಸಂಖ್ಯೆಗಳನ್ನು ತೆಗೆದುಹಾಕಿ ವಾಕ್ಯ ರೂಪದಲ್ಲಿ ಜೋಡಿಸಿ ಬರೆಯಿರಿ.**

_______________________________________________

_______________________________________________

_______________________________________________

_______________________________________________

_______________________________________________

_______________________________________________

_______________________________________________

_______________________________________________

_______________________________________________

- **ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೋತ್ತರಗಳು:**

I. ಮನೆಗೆ ಬಂದವರನ್ನು ಹೇಗೆ ಸತ್ಕರಿಸುವ ಸಂಪ್ರದಾಯ ನಮ್ಮಲ್ಲಿದೆ ?

ಉತ್ತರ : ಮನೆಗೆ ಬಂದವರಿಗೆ ಕುಡಿಯಲು ನೀರು ಕೊಟ್ಟು ಸತ್ಕರಿಸುವ ಸಂಪ್ರದಾಯವಿದೆ.

II. ವಿದೇಶಗಳಲ್ಲಿ ನೀರಿಗಿಂತ ಅಗ್ಗವಾಗಿ ಸಿಗುವುದೇನು ?

ಉತ್ತರ : ವಿದೇಶಗಳಲ್ಲಿ ನೀರಿಗಿಂತ ಹಗ್ಗವಾಗಿ ಸಿಗುವುದು ಕೋಲಾಗಳು.

III. ಭಾರತದಲ್ಲಿ ಇತ್ತೀಚೆಗೆ ಯಾವ ಹುನ್ನಾರ ನಡೆದಿದೆ ?

ಉತ್ತರ : ಭಾರತದಲ್ಲಿ ಇತ್ತೀಚೆಗೆ ನೀರು ಕೊಂಡು ಕುಡಿಯುವ ಹುನ್ನಾರ ನಡೆದಿದೆ.

IV. ಸರ್ವರಿಗೂ ವೇದ್ಯವಾಗಿರುವ ಅಂಶಗಳು ಯಾವುವು ?

ಉತ್ತರ : ಮದರ್ಸ್ ಡೇ, ಫಾದರ್ಸ್ ಡೇ, ವ್ಯಾಲೆಂಟೈನ್ಸ್ ಡೇ ಆಚರಣೆಗಳಲ್ಲಿ ಗಿಫ್ಟ್, ಗ್ರೀಟಿಂಗ್ ಕಾರ್ಡ್ ಮಾರಾಟ ಮಾಡುವ ಹೊಸ ಹುನ್ನಾರ ಎಂಬ ಅಂಶಗಳು ಸರ್ವರಿಗೂ ವೇದ್ಯವಾಗಿವೆ.

V. ಭಾರತೀಯ ತಂಪು ಪಾನೀಯಗಳಾವುವು ?

ಉತ್ತರ:ಭಾರತೀಯ ತಂಪು ಪಾನೀಯಗಳು ಎಳನೀರು, ಮಜ್ಜಿಗೆ, ಪಾನಕ, ಕಬ್ಬಿನ ಹಾಲು ಚಟುವಟಿಕೆ

**ಈ ಮೇಲಿನ ಅಂಶಗಳನ್ನು ಬಳಸಿಕೊಂಡು ಈ ಕೆಳಕಂಡ ಅಂಶಗಳನ್ನು ಹೊಂದಿಸಿ ಬರೆಯಿರಿ.**

| ಎ – ಪಟ್ಟಿ | ಬಿ – ಪಟ್ಟಿ | ಸರಿ ಉತ್ತರಗಳನ್ನು ಬರೆಯಿರಿ. |
|---|---|---|
| ೧. ಮನೆಗೆ ಬಂದವರಿಗೆ | ಎ. ಕೋಲಾಗಳು | |
| ೨. ಭಾರತೀಯ ತಂಪು ಪಾನೀಯ | ಬಿ. ಗಿಫ್ಟ್, ಗ್ರೀಟಿಂಗ್ ಕಾರ್ಡ್ ಮಾರುವುದು. | |
| ೩.ಸರ್ವರಿಗೂ ವೇದ್ಯವಾಗಿರುವುದು. | ಸಿ. ನೀರನ್ನು ಕೊಂಡು ಕುಡಿಯುವ | |
| ೪.ಭಾರತದಲ್ಲಿ ನಡೆದಿರುವ ಹುನ್ನಾರ | ಡಿ. ಎಳನೀರು, ಮಜ್ಜಿಗೆ, ಪಾನಕ | |
| ೫. ವಿದೇಶಿ ತಂಪು ಪಾನೀಯ | ಇ.ಕುಡಿಯುವ ನೀರು ಕೊಡುವ | |

## ವ್ಯಾಕರಣ ಅಂಶಗಳು

ದೇಶಿಯ ಪದ: ಆಯಾ ಭಾಷೆಯ ಮೂಲ ಪದಗಳಿಗೆ ದೇಶಿಯ ಪದ ಎಂದು ಕರೆಯುತ್ತಾರೆ. ಅವುಗಳೆಂದರೆ

ಸಂಖ್ಯಾ ಪದಗಳು : ೦೧– ೯೯೯ ರವರೆಗೆ

- ದೇಹದ ಅಂಗಾಂಗಳ ಹೆಸರು: ಕೈ – ಕಾಲು ಬಾಯಿ, ನಾಲಿಗೆ ಇತ್ಯಾದಿ.
- ಅನ್ಯ ದೇಶೀಯ ಪದಗಳು: ಬೇರಿ ಭಾಷೆಯಿಂದ ಬಂದ ಪದಗಳಿಗೆ ಅನ್ಯ ದೇಶಿಯ ಪದಗಳು ಎಂದು ಕರೆಯುತ್ತಾರೆ.
- ಹಿಂದೂಸ್ತಾನೀಯ ಭಾಷೆ ಪದಗಳು: ಅರ್ಜಿ, ಕಚೇರಿ, ಕಾರ್ಖಾನೆ ಇತ್ಯಾದಿ.
- ಆಂಗ್ಲ ಭಾಷೆಯಿಂದ ಬಂದ ಪದಗಳು: ಕೋರ್ಟು, ಬ್ಯಾಂಕು, ಆಫೀಸ್ ಮತ್ತು ಹಾರ್ಮೋನಿಯಂ ಇತ್ಯಾದಿ.
- ಪೋರ್ಚುಗೀಸ್ ಭಾಷೆಯಿಂದ ಬಂದ ಪದಗಳು: ಅಲಮಾರು, ಸಾಬೂನು, ಮೇಜು ಇತ್ಯಾದಿ

## ವ್ಯಾಕರಣ ಅಂಶಗಳ ಅಭ್ಯಾಸ ಚಟುವಟಿಕೆ:

**ಈ ಮೇಲಿನ ವ್ಯಾಕರಣ ಅಂಶಗಳನ್ನು ಬಳಸಿಕೊಂಡು ದೇಶಿಯ ಪದಗಳು ಹಾಗೂ ಅನ್ಯದೇಶಿಯ ಪದಗಳನ್ನು ಪಟ್ಟಿ ಮಾಡಿರಿ.**

| ದೇಶಿಯ ಪದಗಳು | ಅನ್ಯದೇಶಿಯ ಪದಗಳು |
|---|---|
| ೧. | |
| ೨. | |
| ೩. | |
| ೪. | |
| ೫. | |

## ವ್ಯಾಕರಣಾಂಶಗಳು :

### ತತ್ಸಮ – ತದ್ಭವ

ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಿಂದ ಕನ್ನಡಕ್ಕೆ ಪದಗಳನ್ನು ಪಡೆದುಕೊಳ್ಳುವಾಗ ಅಲ್ಪ-ಸ್ವಲ್ಪ ಬದಲಾವಣೆಗೆ ಒಳಪಟ್ಟ ಹಾಗೂ ಬಹಳಷ್ಟು ಬದಲಾವಣೆಗೆ ಒಳಪಟ್ಟ ಪದಗಳು ಇವೆ.

ತತ್ಸಮ: ತತ್ ಎಂದರೆ ಅದಕ್ಕೆ, ಸಮ ಎಂದರೆ: ಸಮಾನ ಎಂದರ್ಥ ಹಾಗಾಗಿ ತತ್ಸಮ ಎಂದರೆ ಸಂಸ್ಕೃತಕ್ಕೆ ಸಮಾನವಾದದ್ದು ಎಂದರ್ಥ.

ಉದಾಹರಣೆಗೆ: ಚಂದ್ರ, ವಸಂತ, ಕರ್ತೃ, ರಾಜ, ಪುಸ್ತಕ ಇತ್ಯಾದಿ.

ತದ್ಭವ: ತದ್ ಎಂದರೆ ಅದರಿಂದ, ಭವ ಅಂದರೆ ಸಂಸ್ಕೃತದಿಂದ ಹುಟ್ಟಿದ ಎಂದರ್ಥ.
ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಅಲ್ಪಸ್ವಲ್ಪ ಅಥವಾ ಪೂರ್ಣ ಬದಲಾವಣೆ ಹೊಂದಿರುವ
ಪದಗಳಿಗೆ ತದ್ಭವಗಳು ಎಂದು ಕರೆಯುತ್ತಾರೆ.

ಉದಾಹರಣೆ: ಚಂದಿರ, ರಾಯ, ಕತ್ತಾರ, ಬಸಂತ, ಹೊತ್ತಿಗೆ, ಕಜ್ಜ, ಕಿರುತಿ, ಬೇಸಿಗೆ, ಬಕುತಿ ಇತ್ಯಾದಿ.

## ಮೌಲ್ಯಾಂಕನ ಮಾದರಿ ಪ್ರಶ್ನೆಪತ್ರಿಕೆ :

ವಿದ್ಯಾರ್ಥಿ ಹೆಸರು:– ಹಾಜರಿ ಸಂಖ್ಯೆ:

ಸಮಯ: ೨೦ ನಿ ಗರಿಷ್ಠ ಅಂಕಗಳು: ೧೦.

ಅ) ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕು ಸಂಭವನೀಯ ಉತ್ತರಗಳಿದ್ದು, ಹೆಚ್ಚು ಸೂಕ್ತವಾದ ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ. ೨ * ೧ = ೦೨

೧) ಈ ಕೆಳಗಿನವುಗಳಲ್ಲಿ ಯಾವ ಪದ ಪೋರ್ಚುಗೀಸ್ ಭಾಷೆಯಿಂದ ಬಂದಿದೆ ?

A) ಕೈ B) ಅರ್ಜಿ C) ಬ್ಯಾಂಕ್ D) ಮೇಜು

೨) ಚಂದ್ರ ಈ ಪದದ ತದ್ಭವ ರೂಪವೇನು ?

A) ಚಂದ್ರ B) ಚಂದಿರ C) ಚರ D) ಕಾಂತಿ

ಬ). ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ. ೦೧ * ೨ = ೦೨

೧) ವಿದೇಶಗಳಲ್ಲಿ ನೀರಿಗಿಂತ ಅಗ್ಗವಾಗಿ ಸಿಗುವುದೇನು ?

೨) ಭಾರತದಲ್ಲಿ ಇತ್ತೀಚಿಗೆ ಯಾವ ಹುನ್ನಾರ ನಡೆದಿದೆ ?

ಕ) ಈ ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೦೧ * ೨ = ೦೨

೧. ವಿದೇಶಗಳಲ್ಲಿ ಬಾಯಾರಿಕೆಗೆ ಧಾರಾಳವಾಗಿ ಏನೇನು ದೊರೆಯುವವು ?

ಡ) ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ. ೦೧* ೪ = ೦೪

೧) ಲೇಖಕಿಗೆ ಬೆಂಗಳೂರಿನಲ್ಲಿ ನೀರು ಕೊಡದ ಸಂಸ್ಕೃತಿಯ ಬಗ್ಗೆ ಆದ ಅನುಭವವನ್ನು ಬರೆಯಿರಿ.

## ಪದ್ಯ–೩. ಬೇವು ಬೆಲ್ಲದೊಳಿಡಲೇನು ಫಲ – ( ಪುರಂದರದಾಸರ ಪರಿಚಯ )

### ನಿಗದಿಪಡಿಸಿದ ಅವಧಿಗಳು – ೩



**ಕವಿ ಪರಿಚಯ:**

**ಕರ್ನಾಟಕ ಸಂಗೀತದ ಪಿತಾಮಹ ಎಂದು ಹೆಸರಾಗಿರುವ ಪುರಂದರದಾಸರು ಈಗಿನ ಮಹಾರಾಷ್ಟ್ರದ ಪ ಸ್ತಶಕ ಸುಮಾರು ೧೪೮೦ರಲ್ಲಿ ವರದಪ್ಪ ನಾಯಕ ಹಾಗೂ ಸರಸ್ವತಿ ಎಂಬ ದಂಪತಿಗಳ ಉದರದಲ್ಲಿ ಜನಿಸಿದರು.**

**ಇವರ ಪೂರ್ವದ ಹೆಸರು ಶ್ರೀನಿವಾಸ ನಾಯಕ. ಆಭರಣ ವ್ಯಾಪಾರಿಯಾಗಿದ್ದ ಇವರು ಜೀವನದಲ್ಲಿ ನಡೆದ ಘಟನೆಯಿಂದಾಗಿ ವೈರಾಗ್ಯತಾಳಿದರು. ಇವರು ನೂರಾರು ಕೀರ್ತನೆಗಳನ್ನು, ಪಿಳ್ಳಾರಿ ಗೀತೆಗಳನ್ನು ರಚಿಸಿದ್ದಾರೆ. "ದಾಸರೆಂದರೆ ಪುರಂದರದಾಸರಯ್ಯ" ಎಂದು ತಮ್ಮ ಗುರುಗಳಾದ ವ್ಯಾಸರಾಯರಿಂದ ಹೊಗಳಿಕೆಗೆ ಪಾತ್ರರಾದರು. ಇವರ ಅಂಕಿತನಾಮ ಪುರಂದರ ವಿಠಲ.**

### ಅಭ್ಯಾಸಕ್ಕಾಗಿ :

### ಹಂತ –೧ ಪ್ರಮುಖ ಅಂಶಗಳನ್ನು ಗುರುತಿಸುವುದು :

| | |
|---|---|
| ಕವಿಯ ಹೆಸರು | **ಪುರಂದರದಾಸರು** |
| ಸ್ಥಳ ಕಾಲ | **೧೪೮೦ ಪುರಂದರಗಡ** |
| ಕೃತಿಗಳು | **ನೂರಾರು ಕಿರ್ತನೆಗಳು, ಪಿಳ್ಳಾರಿ ಗೀತೆಗಳು** |
| ಬಿರುದುಗಳು | **ಕರ್ನಾಟಕದ ಸಂಗೀತದ ಪಿತಾಮಹ.** |

### ಹಂತ –೨ ಬರೆಯುವ ವಿಧಾನವನ್ನು ರೂಢಿಸುವುದು.

ಕರ್ನಾಟಕ ಸಂಗೀತದ ಪಿತಾಮಹ ಎಂದು ಹೆಸರಾಗಿರುವ ಪುರಂದರದಾಸರು ಈಗಿನ ಮಹಾರಾಷ್ಟ್ರದ ಪುರಂದರಗಡದಲ್ಲಿ ಕ್ರಿಸ್ತಶಕ ಸುಮಾರು ೧೪೮೦ರಲ್ಲಿ ವರದಪ್ಪ ನಾಯಕ ಹಾಗೂ ಸರಸ್ವತಿ ಎಂಬ ದಂಪತಿಗಳ ಉದರದಲ್ಲಿ ಜನಿಸಿದರು.

ಇವರ ಪೂರ್ವದ ಹೆಸರು ಶ್ರೀನಿವಾಸ ನಾಯಕ. ಆಭರಣ ವ್ಯಾಪಾರಿಯಾಗಿದ್ದ ಇವರು ಜೀವನದಲ್ಲಿ ನಡೆದ ಘಟನೆಯಿಂದಾಗಿ ವೈರಾಗ್ಯತಾಳಿದರು. ಇವರು ನೂರಾರು ಕೀರ್ತನೆಗಳನ್ನು, ಪಿಳ್ಳಾರಿ ಗೀತೆಗಳನ್ನು ರಚಿಸಿದ್ದಾರೆ. "ದಾಸರೆಂದರೆ ಪುರಂದರದಾಸರಯ್ಯ" ಎಂದು ತಮ್ಮ ಗುರುಗಳಾದ ವ್ಯಾಸರಾಯರಿಂದ ಹೊಗಳಿಕೆಗೆ ಪಾತ್ರರಾದರು. ಇವರ ಅಂಕಿತನಾಮ ಪುರಂದರ ವಿಠಲ.

### ಹಂತ – ೩ ಬಿಟ್ಟ ಸ್ಥಳವನ್ನು ಸೂಕ್ತ ಪದಗಳಿಂದ ತುಂಬಿರಿ.

-----------------------ಎಂದು ಪ್ರಸಿದ್ಧರಾದ ------------------ರವರು ------------------------

--ದಲ್ಲಿ ಕ್ರಿ.ಶ. ಸುಮಾರು--------------------------------ರಲ್ಲಿ ಜನಿಸಿದರು.

ಇವರು ------------------------------------------------------------------------------

---ಮುಂತಾದ ಕೀರ್ತನೆಗಳನ್ನು ಬರೆದಿದ್ದಾರೆ. ಇವರಿಗೆ ----------------------------------- ಬಿರುದು ಲಭಿಸಿದೆ.

### ಪ್ರಮುಖ ಅಂಶಗಳು:

೧) ಹುಟ್ಟುಗುಣ ಸುಟ್ಟರೂ ಹೋಗುವುದಿಲ್ಲ.

೨) ಬೇವು ಬೆಲ್ಲದ ಜೊತೆ ತಿಂದರೂ ತನ್ನ ಮೂಲ ಗುಣ ಬಿಡುವುದಿಲ್ಲ.

೩) ಹಾವಿಗೆ ಹಾಲೆರೆದರೆ ವಿಷಯ ಕಚ್ಚುವ ಮೂಲ ಗುಣ ಬಿಡುವುದಿಲ್ಲ.

೪) ನಿರ್ಮಲ ಭಕ್ತಿ ಇರಬೇಕು.

೫) ಕೆಟ್ಟ ಜನರು ಮನಸ್ಸಿನಲ್ಲಿ ಮಂತ್ರ ಪಠಿಸುತ್ತಾ ಮೋಸ ಮಾಡುತ್ತಾರೆ.

೬) ಮನಸ್ಸಿನಲ್ಲಿ ದೇವರನ್ನು ಸ್ಮರಿಸುತ್ತ ಸುಳ್ಳು ಹೇಳುವವರಿದ್ದಾರೆ.

೭) ತಂದೆ ತಾಯಿಯರಿಗೆ ತೊಂದರೆ ಕೊಡುವ ಹಾಗೂ ಮತ್ತೊಬ್ಬರಿಗೆ ಹಿಂಸೆ ಮಾಡುವವರು ಯಾತ್ರೆ ಮಾಡುವುದರಿಂದ ಹಾಗೂ ಗೀತೆ ಓದಿದರು ಪ್ರಯೋಜನವಿಲ್ಲ.

೮) ಜಪ–ತಪಗಳನ್ನು ಮಾಡಿ ಮೋಸ ಮಾಡುವ ಗುಣವಿದ್ದರೆ ಪ್ರಯೋಜನವಿಲ್ಲ.

೯) ಉಪವಾಸ ಮಾಡಿ ಸಿಟ್ಟಿನಿಂದ ಕೂಡಿರುವ ಬುದ್ಧಿಯಿದ್ದರೆ ಪ್ರಯೋಜನವಿಲ್ಲ.

೧೦) ನದಿಯಲ್ಲಿ ಪುಣ್ಯಸ್ನಾನ ಮಾಡಿ ಕೆಟ್ಟ ಕೆಲಸಗಳನ್ನು ಮಾಡುವ ಜನರಿಂದ ಸಮಾಜಕ್ಕೆ ಯಾವುದೇ ಪ್ರಯೋಜನವಿಲ್ಲ.

- **ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೋತ್ತರಗಳು:**

೧) ಪುರಂದರದಾಸರ ಅಂಕಿತನಾಮ ಯಾವುದು ?

ಉ: ಪುರಂದರದಾಸರ ಅಂಕಿತನಾಮ ಪುರಂದರ ವಿಠಲ.

೨) ಜಪದ ಫಲ ನಮಗೆ ಸಿಗಬೇಕಾದರೆ ಯಾವುದನ್ನು ಬಿಡಬೇಕು ?

ಉ: ಜಪದ ಫಲ ನಮಗೆ ಸಿಗಬೇಕಾದರೆ ಮೋಸ ಮಾಡುವುದನ್ನು ಬಿಡಬೇಕು.

೩) ಮಂತ್ರ ಪಠಣೆಯ ಫಲ ಸಿಗಬೇಕೆಂದರೆ ಮನುಷ್ಯ ಏನನ್ನು ಬಿಡಬೇಕು ?

ಉ: ಮಂತ್ರ ಪಠನೆಯ ಫಲ ಸಿಗಬೇಕೆಂದರೆ ಮನುಜ ಕುಟಿಲತೆಯನ್ನ ಬಿಡಬೇಕೆಂದು ಹೇಳಿದ್ದಾರೆ.

೪) ಗೀತೆಯನ್ನು ಓದಿದಷ್ಟು ಫಲ ಯಾವಾಗ ದೊರೆಯುತ್ತದೆ ?

ಉ: ಘಾತಕತನವನ್ನು ಬಿಡುವುದರಿಂದ ಗೀತೆಯನ್ನು ಓದಿದಷ್ಟು ಫಲ ದೊರೆಯುತ್ತದೆ.

**ಈ ಪದ್ಯ ಭಾಗದಲ್ಲಿ ಬಂದಿರುವ ಸಾಂದರ್ಭಿಕ ಹೇಳಿಕೆಗಳನ್ನು ಸ್ವಾರಸ್ಯದೊಂದಿಗೆ ಬರೆಯಿರಿ**

ಆಯ್ಕೆ: ಈ ವಾಕ್ಯವನ್ನು ಪುರಂದರದಾಸರು ರಚಿಸಿರುವ ಬೇವು ಬೆಲ್ಲದೊಳಿಡಲೇನುಫಲ ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ ಸಹಿತ ಉತ್ತರವನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ.**

| ಪದ್ಯ | ಸಾಂದರ್ಭಿಕ ಪ್ರಶ್ನೆಗಳು | ಯಾರು ? ಯಾರಿಗೆ ? | ಸಂದರ್ಭ |
|---|---|---|---|
| ಪ್ರಾರ್ಥನೆ | "ಮಂತ್ರ ಪಠನೆಯ ಮಾಡಿದರೇನು ಫಲ" | ಕೀರ್ತನೆಕಾರರು ಓದುಗರಿಗೆ | ಮನುಜ ತನ್ನ ಕುಟಿಲ ಬುದ್ಧಿಯನ್ನು ಬಿಡಬೇಕು ಎಂದು ವಿವರಿಸಿವಾಗ |
| | "ಮಾತಾಪಿತರನ್ನು ಬಳಲಿ ಸುವಾತನು" | ಕೀರ್ತನೆಕಾರರು ಓದುಗರಿಗೆ | ಮನುಷ್ಯ ಯಾತ್ರೆ ಮಾಡುತ್ತಾ ತಂದೆ ತಾಯಿಯರಿಗೆ ತೊಂದರೆ ಕೊಡಬಾರದು ಎಂದು ವಿವರಿಸುವಾಗ |
| | "ಸ್ನಾನವ ಮಾಡಿದರೇನು ಫಲ" | ಕೀರ್ತನೆಕಾರರು ಓದುಗರಿಗೆ | ಮನುಷ್ಯ ನದಿಯಲ್ಲಿ ಪುಣ್ಯ ಸ್ನಾನ ಹೀನ ಕೃತ್ಯಗಳನ್ನು ಮಾಡುವವರ ಕುರಿತು ವಿವರಿಸುವಾಗ |

ಆಯ್ಕೆ : ಈ ವಾಕ್ಯವನ್ನು ------------------------------- ಅವರು ಬರೆದಿರುವ --------------------- ---------------------- ಎಂಬ ಪದ್ಯದಿಂದ ಆಯ್ದುಕೊಳ್ಳಲಾಗಿದೆ.

- ಸಂದರ್ಭ: ಈ ಮಾತನ್ನು ಯಾರು, ಯಾರಿಗೆ, ಯಾವಾಗ, ಏಕೆ, ಹೇಳಿದರು ಎಂಬ ಅಂಶಗಳನ್ನು ಬರೆಯಬೇಕು.

------------------------------------------------------------------------------------------------

------------------------------------------------------------------------------------------------

------------------------------------------------------------------------------------------------

- ಸ್ವಾರಸ್ಯ: ಈ ಮಾತಿನ ವಿಶೇಷತೆಯನ್ನು ಮೌಲ್ಯ/ಗುಣವನ್ನು ಕುರಿತು ಬರೆಯಬೇಕು.

------------------------------------------------------------------------------------------------

------------------------------------------------------------------------------------------------

------------------------------------------------------------------------------------------------

# ಅಭ್ಯಾಸ

## ವ್ಯಾಕರಣಾಂಶಗಳು

### ನಾಮ ವಿಭಕ್ತಿಗಳು :

ಕ್ರಿಯಾ ಪದದೊಂದಿಗೆ ನಾಮಪದದ ಸಂಬಂಧವನ್ನು ತಿಳಿಸುವ ಕರ್ತೃ, ಕರ್ಮ, ಕರಣ ಮುಂತಾದವು ಕಾರಕಾರ್ಥಕಗಳು. ಕಾರಕಾರ್ಥವನ್ನು ವಿಭಜಿಸಿ ಹೇಳುವ ಪ್ರತ್ಯಯಗಳೇ ವಿಭಕ್ತಿ ಪ್ರತ್ಯಯಗಳು.

### ವಿಭಕ್ತಿಗಳ ಸ್ವರೂಪ ಮತ್ತು ಪರಸ್ಪರ ಸಂಬಂಧದ ಕೋಷ್ಟಕ

| ವಿಭಕ್ತಿಗಳು | ವಿಭಕ್ತಿ ಪ್ರತ್ಯಯಗಳು | ಕಾರಕಾರ್ಥ | ನಾಮಪದ |
|---|---|---|---|
| ಪ್ರಥಮ | ಉ | ಕರ್ತ್ರಾರ್ಥ | ಮನೆಯು |
| ದ್ವಿತೀಯ | ಅನ್ನು | ಕರ್ಮಾರ್ಥ | ಮನೆಯನ್ನು |
| ತೃತೀಯ | ಇಂದ | ಕರಣಾರ್ಥ | ಮನೆಯಿಂದ |
| ಚತುರ್ಥಿ | ಕೆ ಗೆ ಅಕ್ಕೆ | ಸಂಪ್ರದಾನ | ಮನೆಗೆ |
| ಪಂಚಮಿ | ದೆಸೆಯಿಂದ | ಅಪಾದಾನ | ಮನೆಯ ದೆಸೆಯಿಂದ |
| ಷಷ್ಠಿ | ಅ | ಸಂಬಂಧ | ಮನೆಯ |
| ಸಪ್ತಮಿ | ಅಲ್ಲಿ | ಅಧಿಕರಣ | ಮನೆಯಲ್ಲಿ |

### ಚಟುವಟಿಕೆ : ೦೧

| ವಿಭಕ್ತಿಗಳು | ವಿಭಕ್ತಿ ಪ್ರತ್ಯಯಗಳು | ಸರಿ ಉತ್ತರಗಳು |
|---|---|---|
| ಪ್ರಥಮ | ಕೆ ಗೆ ಅಕ್ಕೆ | |
| ದ್ವಿತೀಯ | ಅ | |
| ತೃತೀಯ | ಅಲ್ಲಿ | |
| ಚತುರ್ಥಿ | ಅನ್ನು | |
| ಪಂಚಮಿ | ಉ | |
| ಷಷ್ಠಿ | ದೆಸೆಯಿಂದ | |
| ಸಪ್ತಮಿ | ಇಂದ | |

### ಚಟುವಟಿಕೆ : ೦೨

| ವಿಭಕ್ತಿಗಳು | ಕಾರಕಾರ್ಥ | ಸರಿ ಉತ್ತರಗಳು |
|---|---|---|
| ಪ್ರಥಮ | ಸಂಪ್ರದಾನ | |
| ದ್ವಿತೀಯ | ಅಧಿಕರಣ | |
| ತೃತೀಯ | ಅಪಾದಾನ | |
| ಚತುರ್ಥಿ | ಕರಣಾರ್ಥ | |
| ಪಂಚಮಿ | ಕರ್ಮಾರ್ಥ | |
| ಷಷ್ಠಿ | ಸಂಬಂಧ | |
| ಸಪ್ತಮಿ | ಕರ್ತ್ರಾರ್ಥ | |

# ಘಟಕ ಪರೀಕ್ಷೆ – ೭ ( ಬೇವು ಬೆಲ್ಲದೊಳಿಡಲೇನು ಫಲ )

ನಿಗದಿಪಡಿಸಿದ ಅವಧಿ – ೧ ಅಂಕಗಳು – ೧೦

(ಅ) ಈ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಯನ್ನು ನೀಡಲಾಗಿದ್ದು ಸರಿಯಾದ ಉತ್ತರ ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.

೧. 'ಬೇವುಬೆಲ್ಲ' ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ ---------------- .

ಎ) ನುಡಿಗಟ್ಟು ಬಿ) ದ್ವಿರುಕ್ತಿ ಸಿ) ಅನುಕರಣಾವ್ಯಯ ಡಿ) ಜೋಡುನುಡಿ

೨. 'ಬುದ್ಧಿಯನು' ಪದದಲ್ಲಿ ಇರುವ ವಿಭಕ್ತಿಯ ಹೆಸರು ––––––––––––– .

ಎ) ದ್ವಿತೀಯಾ ಬಿ) ತೃತೀಯಾ ಸಿ) ಷಷ್ಠೀ ಡಿ) ಸಪ್ತಮೀ

(ಆ) ಮೊದಲೆರೆಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ .

೩.ಪಿತೃ : ಪಿತ :: ಮಾತೃ : –––––––––––––––––––––––––––––

(ಇ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ .

೪.ಜಪದ ಫಲ ನಮಗೆ ಸಿಗಬೇಕಾದರೆ ಯಾವುದನ್ನು ಬಿಡಬೇಕು ?

(ಈ) ಈ ಕೆಳಗಿನ ಪ್ರಶ್ನೆಗೆ ಮೂರು – ನಾಲ್ಕು ವಾಕ್ಯದಲ್ಲಿ ಉತ್ತರಿಸಿರಿ.

೫. . ಜಪ ಹಾಗೂ ಉಪವಾಸ ವ್ರತಗಳ ಫಲ ಯಾವಾಗ ದೊರೆಯುವುದಿಲ್ಲ ?

(ಉ) ಈ ಕೆಳಗಿನ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

೬. ಕೋಪದಿಂದ ಕೊಯ್ದ ಮೂಗು ಮತ್ತೇ ಬಂದೀತೆ ?



## ಪಠ್ಯ ಪೂರಕ ಅಧ್ಯಯನ ೩ – ಮಗಳಿಗೆ ಬರೆದ ಪತ್ರ

**ಮೂಲ : ಜವಾಹರಲಾಲ್ ನೆಹರು**

**ಅನುವಾದ : ತಿ. ತಾ. ಶರ್ಮ, ಸಿದ್ದನಹಳ್ಳಿ ಕೃಷ್ಣಶರ್ಮ**

**ನಿಗದಿಪಡಿಸಿದ ಅವಧಿಗಳು – ೧**



### ಈ ಪಾಠದ ಪ್ರಮುಖಾಂಶಗಳು :–

೧. ಭಾರತದ ಪ್ರಥಮ ಪ್ರಧಾನ ಮಂತ್ರಿ – **ಜವಾಹರಲಾಲ್ ನೆಹರು.**

೨. ಈ ಪತ್ರವನ್ನು **ನೆಹರೂರವರು** ತಮ್ಮ ಮಗಳು **ಇಂದಿರಾಗಾಂಧಿ**ಗೆ ಬರೆದಿದ್ದಾರೆ.

೩. ಇಂದಿರಾ ಪ್ರಿಯದರ್ಶಿನಿ ಹುಟ್ಟಿದ ದಿನ – **೨೬.. ೧೦. ೧೯೧೭.**

೪. ನೆಹರೂರವರು ಇಂದಿರಾಗೆ ಪತ್ರ ಬರೆದ ದಿನ – **೨೬ .೧೦. ೧೯೩೦**

೫. ನೆಹರೂರವರು ಇಂದಿರಾಗೆ '**ನೈನಿ ಸೆರೆಮನೆ**ಯಿಂದ' ಪತ್ರ ಬರೆದರು.

೬. ನೆಹರೂರವರು ಇಂದಿರಾಗೆ **ಚೀನಾ ದೇಶ**ದ ಬಹಳ ಬುದ್ಧಿವಂತನಾದ **ಹೂಯಾನ್ ತ್ಸಾಂಗ್** ನ ಕತೆ ಹೇಳುತ್ತಾರೆ.

೭. ಹೂಯಾನ್ ತ್ಸಾಂಗ್ ಭರತ ಖಂಡಕ್ಕೆ '**ಜ್ಞಾನಾರ್ಜನೆಗಾಗಿ, ವಿವೇಕ ಸಾಧನೆಗಾಗಿ**' ಬಂದಿದ್ದನು.

೮. ಹೂಯಾನ್ ತ್ಸಾಂಗ್ **ನಲಂದ ವಿಶ್ವವಿದ್ಯಾನಿಲಯದಲ್ಲಿ** ತಾನು ಕಲಿತು, ಪರರಿಗೂ ಕಲಿಸಿದ.

೯. ನಲಂದ ವಿಶ್ವವಿದ್ಯಾನಿಲಯವು '**ಪಾಟಲೀಪುತ್ರ (ಇಂದಿನ ಪಾಟ್ನಾ)**' ಬಳಿ ಇತ್ತು.

೧೦. **ದಕ್ಷಿಣ ದೇಶದ ಕರ್ಣಸುವರ್ಣ**ನೆಂಬುವನು ತನ್ನ ನಡುವಿಗೆ ಹಲಗೆಗಳನ್ನು ಬಿಗಿದು, ತಲೆಯ ಮೇಲೆ ಉರಿವ ಪಂಜನ್ನು ಹೊತ್ತಿದ್ದನು.

೧೧. ದಕ್ಷಿಣ ದೇಶದಿಂದ ಬಂದ ಯಾತ್ರಿಕನ ವೇಷದ ಬಗ್ಗೆ "ನನ್ನ ಜ್ಞಾನವಷ್ಟಿದೆ. ಈ **ತಾಮ್ರದ ರೇಕುಗಳನ್ನು ಬಿಗಿಸದೆ** ಹೋದೆನಾದರೆ ನನ್ನ **ಹೊಟ್ಟೆ ಬಿರಿದೀತು.** ನನ್ನ ಸುತ್ತ ಸುಳಿವ ಅಜ್ಞಾನಿಗಳ ಕಂಡೆನಗೆ 'ಅಯ್ಯೋ' ಅನಿಸುತ್ತದೆ. ಅವರೆಲ್ಲ ತಡವಿ ಆಡುತ್ತಿದ್ದಾರೆ. ಅವರಿಗಾಗಿ ನಾ ನನ್ನ **ನೆತ್ತಿಯ ಮೇಲೆ ದೀಪ ಹೊತ್ತಿದ್ದೇನೆ.**" ಎಂದು ಹೇಳುತ್ತಾನೆ

೧೨. ಬಾಪೂಜಿಯವರ ಬಗ್ಗೆ ನೆಹರೂರವರು ಹೀಗೆ ಹೇಳುತ್ತಾರೆ. "ಕಷ್ಟನಿಷ್ಠುರಗಳಿಗೆ ಸಿಕ್ಕಿದವರೆಂದರೆ ಆತನ **ಪ್ರೇಮ ಅಪಾರ;** ಅವರಿಗೆ ಸಹಾಯ ಮಾಡಲು ಉಗ್ರ ಆವೇಷದ ಆತುರ ಅವನಿಗೆ. ಆತ ನಮ್ಮ ಜನರಿಗೆ ಮಹತ್ಕಾರ್ಯ ಸಾಧನೆ ಮಾಡಲೂ, ಗಂಭೀರ ಬಲಿದಾನ ಮಾಡಲು ಸ್ಫೂರ್ತಿ ಕೊಡುತ್ತಿದ್ದಾನೆ. **ಬಲಿದಾನ ಮಾಡಿ** ನಾವು **ಸ್ವಾತಂತ್ರ್ಯ** ಪಡೆಯಬೇಕು, ಹಸಿವಿನಿಂದ ಕೊರಗುತ್ತಿರುವವರು, ಬಡವರು, ಅನ್ಯಾಯಕ್ಕೆ ತುತ್ತಾದವರೇ ಮೊದಲಾದವರ ದುಃಖದ ಭಾರವಿಳಿಸಬೇಕು; ಇದು **ಆತನಾಸೆ.**"

೧೩. **ತೆರೆಯಮರೆಯಲ್ಲಿ ಕೆಲಸ** ಮಾಡಬೇಕೆಂದೆನಿಸಿದರೆ ನಿನಗೆ **ಭಯವಿದೆ** ಎಂದರ್ಥ. **ಭಯವು ಒಳ್ಳೆಯದಲ್ಲ;** ಯೋಗ್ಯವಾದುದಲ್ಲ. ನಿರ್ಭಯವಾಗಿರು, ಆಗಬೇಕಾದುದ್ದೆಲ್ಲ ಆಗುತ್ತದೆ; ನಡೆಯಬೇಕಾದುದ್ದಲ್ಲ ನಡೆಯುತ್ತದೆ.

೧೪. **ನೀನು ಧೈರ್ಯಶಾಲಿ**ಯಾದರೆ ನಿನಗೆ ಭಯವಾಗುವುದಿಲ್ಲ. **ತಲೆ ತಗ್ಗಿಸುವಂತಹ ಕೆಲಸ ಮಾಡುವುದಿಲ್ಲ.**

೧೫. ನೆಹರೂರವರು ಇಂದಿರಾಗೆ "**ನೀನು ದೊಡ್ಡವಳಾಗಿ ವೀರರಮಣಿಯೆನಿಸು; ಭಾರತ ಮಾತೆಯ ಸೇವೆ ಸಲ್ಲಿಸು.**" ಎಂದು **ಹರಸುವರು.**

**ಪ್ರಮುಖಾಂಶಗಳನ್ನು ಓದುತ್ತಾ ಬರೆಯಿರಿ.**

## ಬಿಟ್ಟ ಸ್ಥಳಗಳನ್ನು ತುಂಬಿರಿ.

೧. ಭಾರತದ ಪ್ರಥಮ ಪ್ರಧಾನ ಮಂತ್ರಿ – ……………………………………..

೨. ಈ ಪತ್ರವನ್ನು ನೆಹರೂರವರು ತಮ್ಮ ಮಗಳು …………………….. ಗೆ ಬರೆದಿದ್ದಾರೆ.

೩. ಇಂದಿರಾ ಪ್ರಿಯದರ್ಶಿನಿ ಹುಟ್ಟಿದ ದಿನಾಂಕ – ………………………………………..

೪. ನೆಹರೂರವರು ಇಂದಿರಾಗೆ ಪತ್ರ ಬರೆದ ದಿನಾಂಕ – …………………………….

೫. ನೆಹರೂರವರು ಇಂದಿರಾಗೆ ……………………….. ಸೆರೆಮನೆಯಿಂದ ಪತ್ರ ಬರೆದರು.

೬. ನೆಹರೂರವರು ಇಂದಿರಾಗೆ ಚೀನಾ ದೇಶದ ಬಹಳ ಬುದ್ಧಿವಂತನಾದ …………………. ನ ಕತೆ ಹೇಳುತ್ತಾರೆ.

೭. ಹೂಯಾನತ್ಸಾಂಗ್ ಭರತ ಖಂಡಕ್ಕೆ ……………………………………… ಬಂದಿದ್ದನು.

೮. ಹೂಯಾನತ್ಸಾಂಗ್ ……………………………….. ದಲ್ಲಿ ತಾನು ಕಲಿತು, ಪರರಿಗೂ ಕಲಿಸಿದ.

೯. ನಲಂದ ವಿಶ್ವವಿದ್ಯಾನಿಲಯವು ……………………………………… ಬಳಿ ಇತ್ತು.

೧೦. ದಕ್ಷಿಣ ದೇಶದ ………… ಎನ್ನುವವನು ತನ್ನ ನಡುವಿಗೆ ಹಲಗೆಗಳನ್ನು ಬಿಗಿದು, ತಲೆಯ ಮೇಲೆ ಉರಿವ ಪಂಜನ್ನು ಹೊತ್ತಿದ್ದನು.

೧೧. ತಾಮ್ರದ ರೇಕುಗಳನ್ನು ಬಿಗಿಸದೆ ಹೋದೆನಾದರೆ …………………………… ಬಿರಿದೀತು.

೧೨. ನನ್ನ ಸುತ್ತ ಸುಳಿವ ಅಜ್ಞಾನಿಗಳ ಕಂಡೆನಗೆ ……………………………….. ಅನಿಸುತ್ತದೆ.

೧೩. ಅವರಿಗಾಗಿ ನಾ ನನ್ನ ನೆತ್ತಿಯ ಮೇಲೆ ………………………………………."

೧೪. ಕಷ್ಟ ನಿಷ್ಠುರಗಳಿಗೆ ಸಿಕ್ಕಿದವರೆಂದರೆ ಗಾಂಧೀಜಿಯವರ ………………………………. ಅಪಾರ.

೧೫. ಬಲಿದಾನ ಮಾಡಿ ನಾವು ……………………………………………….ಪಡೆಯಬೇಕು.

೧೬. ಹಸಿವಿನಿಂದ ಕೊರಗುತ್ತಿರುವವರು, ಬಡವರು, ಅನ್ಯಾಯಕ್ಕೆ ತುತ್ತಾದವರೇ ಮೊದಲಾದವರ …….. ಇದು ಬಾಪೂಜಿಯವರ ಆಸೆ.

೧೭. ತೆರೆಯಮರೆಯಲ್ಲಿ ಕೆಲಸ ಮಾಡಬೇಕೆಂದೆನಿಸಿದರೆ ನಿನಗೆ ……………………………………………… ಎಂದರ್ಥ.

೧೮. ……………………………………………….. ಒಳ್ಳೆಯದಲ್ಲ; ಯೋಗ್ಯವಾದುದಲ್ಲ.

೧೯. ನೀನು ……………………………………………… ಆದರೆ ನಿನಗೆ ಭಯವಾಗುವುದಿಲ್ಲ.

೨೦. ನೆಹರೂರವರು ಇಂದಿರಾಗೆ …………………………… ಎಂದು ಹರಸುವರು.

**ಈ ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಬರೆಯಿರಿ.**

೧. ಪಾಟಲೀಪುತ್ರದ ಬಳಿ ಇದ್ದ ವಿಶ್ವವಿದ್ಯಾಲಯ ಯಾವುದು ?

೨. ಪತ್ರವನ್ನು ನೆಹರುರವರು ಯಾರಿಗೆ ಬರೆದಿದ್ದಾರೆ ?

೩. ಹೂಯಾನ್ ತ್ಸಾಂಗ್ ಭರತ ಖಂಡಕ್ಕೆ ಏಕೆ ಬಂದನು ?

೪. ಬಾಪೂಜಿಗೆ ಯಾರೆಂದರೆ ಪ್ರೇಮ ?

೫. ನಲಂದ ವಿಶ್ವವಿದ್ಯಾಲಯವು ಎಲ್ಲಿತ್ತು ?

೬. ನೆಹರೂರವರು ಇಂದಿರಾಗೆ ಯಾರ ಸೇವೆ ಸಲ್ಲಿಸು ಎಂದು ಹರಸುತ್ತಾರೆ ?

೭. ದಕ್ಷಿಣ ದೇಶದಿಂದ ಬಂದ ಯಾತ್ರಿಕನ ವೇಷದ ಬಗ್ಗೆ ಏನು ಹೇಳುತಿದ್ದನು ?

೮. ಬಾಪೂಜಿಯವರ ವ್ಯಕ್ತಿತ್ವದ ಬಗ್ಗೆ ನೆಹರೂರವರು ಏನು ಹೇಳಿದ್ದಾರೆ ?

೯. ತೆರೆಮರೆಯಲ್ಲಿ ಕೆಲಸ ಮಾಡಿದರೆ ಯಾವ ಅರ್ಥ ಬರುತ್ತದೆ ?

*****************************************

**ಘಟಕ ಪರೀಕ್ಷೆ – ೧೧ (ಪಠ್ಯ ಪೂರಕ ಅಧ್ಯಯನ : ಮಗಳಿಗೆ ಬರೆದ ಪತ್ರ )**

**ನಿಗದಿಪಡಿಸಿದ ಅವಧಿ – ೧** **ಅಂಕಗಳು – ೧೦**

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** ೧*೬=೬

೧. ಈ ಪತ್ರವನ್ನು ನೆಹರುರವರು ಯಾರಿಗೆ ಬರೆದಿದ್ದಾರೆ ?

---------------------------------------------------------------------------------

೨. ನಲಂದ ವಿಶ್ವವಿದ್ಯಾಲಯ ಎಲ್ಲಿದೆ ?

---------------------------------------------------------------------------------

೩. ಹುಯೆನ್‌ತ್ಸಾಂಗ್ ಭರತ ಖಂಡಕ್ಕೆ ಏಕೆ ಬಂದನು ?

---------------------------------------------------------------------------------

೪. ತೆರೆಮರೆಯಲ್ಲಿ ಕೆಲಸ ಮಾಡಿದರೆ ಯಾವ ಅರ್ಥ ಬರುತ್ತದೆ ?

---------------------------------------------------------------------------------

೫. ಹುಯೆನ್‌ತ್ಸಾಂಗ್ ಯಾವ ಬಿರುದನ್ನು ಪಡೆದ ?

---------------------------------------------------------------------------------

೬. ಈ ಪತ್ರವನ್ನು ಬರೆಯುವಾಗ ನೆಹರು ಅವರು ಎಲ್ಲಿದ್ದರು ?

---------------------------------------------------------------------------------

**ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.** ೨*೨=೪

೭. ಬಾಪೂಜಿ ಅವರ ವ್ಯಕ್ತಿತ್ವದ ಬಗ್ಗೆ ನೆಹರೂರವರು ಏನು ಹೇಳಿದ್ದಾರೆ ?

೮. ದಕ್ಷಿಣ ದೇಶದಿಂದ ಬಂದ ಯಾತ್ರಿಕ ಅವನ ವೇಷದ ಬಗ್ಗೆ ಏನು ಹೇಳುತ್ತಿದ್ದನು ?

********************************

# ಗದ್ಯ–೪. ಯಶೋಧರೆ – (ಮಾಸ್ತಿ ವೆಂಕಟೇಶ ಅಯ್ಯಂಗಾರರು)

**ನಿಗದಿಪಡಿಸಿದ ಅವಧಿಗಳು – ೪**



## ಮಾಸ್ತಿ ವೆಂಕಟೇಶ ಅಯ್ಯಂಗಾರ ಪರಿಚಯ

**ಸಣ್ಣ ಕಥೆಗಳ ಜನಕ ಎಂದು ಪ್ರಸಿದ್ಧರಾದ ಮಾಸ್ತಿ ವೆಂಕಟೇಶ ಅಯ್ಯಂಗಾರ** ಅವರು ೦೬–೦೬–೧೮೯೧ ರಲ್ಲಿ **ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಮಾಸ್ತಿ ಎಂಬ ಗ್ರಾಮದಲ್ಲಿ** ಜನಿಸಿದರು. ಇವರ ಕಾವ್ಯ ನಾಮ ಶ್ರೀನಿವಾಸ. ಇವರು ಮೈಸೂರು ಸಿವಿಲ್ ಸರ್ವಿಸ ಪರೀಕ್ಷೆ ಉತ್ತೀರ್ಣರಾಗಿ ಅಸಿಸ್ಟಂಟ್ ಕಮೀಷನರ್ ಆಗಿ ಸೇವೆ ಸಲ್ಲಿಸಿದ್ದಾರೆ.

ಇವರು ಗೌತಮಿ ಹೇಳಿದ ಕತೆ, ಸಾರಿ ಪುತ್ರನ ಕೊನೆಯ ದಿನಗಳು, ಕುಚೇಲನ ಭಾಗ್ಯ, ಚಿಕ್ಕವೀರ ರಾಜೇಂದ್ರ ಮುಂತಾದ ಕೃತಿಗಳನ್ನು ಬರೆದಿದ್ದಾರೆ. ಇವರ ಚಿಕ್ಕವೀರಾಜೇಂದ್ರ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರಕಿವೆ. ಇವರು ೦೬–೦೬–೧೯೮೬ ರಲ್ಲಿ ನಿಧನರಾದರು.

## ಅಭ್ಯಾಸ

| ಹಂತ–೧ ಪ್ರಮುಖ ಅಂಶಗಳನ್ನು ಗುರ್ತಿಸುವುದು | |
|---|---|
| ಕವಿ/ಸಾಹಿತಿಗಳ ಹೆಸರು | |
| ಸ್ಥಳ –ಕಾಲ | |
| ಕಾವ್ಯ ನಾಮ | |
| ಪದವಿ – ಹುದ್ದೆ | |
| ಕೃತಿಗಳು | |
| | |
| ಬಿರುದು/ ಪ್ರಶಸ್ತಿಗಳು | |
| | |

| ಹಂತ–೨ ಬರೆಯುವ ವಿಧಾನವನ್ನು ರೂಢಿಸುವುದು |
|---|
| ಎಂದು ಪ್ರಸಿದ್ಧರಾದ ರವರು |
| ಯಲ್ಲಿ ರಲ್ಲಿ ಜನಿಸಿದರು.ಇವರ ಕಾವ್ಯನಾಮ |
| ಇವರು ಉತ್ತೀರ್ಣರಾಗಿ |
| ಸೇವೆ ಸಲ್ಲಿಸಿದ್ದಾರೆ. |
| ಇವರು |
| ಮುಂತಾದ ಕೃತಿಗಳನ್ನು ಬರೆದಿದ್ದಾರೆ. |
| ಇವರಿಗೆ |
| ಪ್ರಶಸ್ತಿ ದೊರೆತಿದೆ. ಇವರು ರಲ್ಲಿ ನಿಧನರಾದರು. |

| ಹಂತ ೪– ಸ್ವತಂತ್ರವಾಗಿ ಬರೆಯಿಸುವುದು |
|---|
| |

## ಗದ್ಯ ಪಾಠ– ಯಶೋಧರೆ – ನಾಟಕ

### ಮಕ್ಕಳಿಗೆ ಸೂಚನೆಗಳು:–

**೧. ಮಕ್ಕಳು ಮೊದಲು ಎಲ್ಲಾ ಅಂಶಗಳನ್ನು ಓದಿ ಮನದಟ್ಟು ಮಾಡಿಕೊಳ್ಳಬೇಕು.**
**೨. ಕ್ರಮ ಸಂಖ್ಯೆ ಬಿಟ್ಟು ಬರೆಯುವುದನ್ನು ರೂಢಿಗೊಳಿಸಿಕೊಳ್ಳಬೇಕು.**
**೩. ಕಥೆಯ ರೂಪದಲ್ಲಿ ಹೇಳಬೇಕು, ಹೇಳಿ ಹಾಗೆಯೇ ಬರೆಯಬೇಕು.**
**೪. ಆಯಾ ವಾಕ್ಯದಲ್ಲಿ ಪ್ರಮುಖ ಪದಗಳನ್ನು ನೆನಪಿಟ್ಟುಕೊಳ್ಳಬೇಕು.**
**೫. ಪದ್ಯಭಾಗದಲ್ಲಿ ಹಾಡನ್ನು ಮೊದಲು ಹೇಳಲು/ಹಾಡಲು ಕಲಿಯಬೇಕು.**

### ಪಾಠದ ಪ್ರಮುಖಾಂಶಗಳು

೧. ಕಪಿಲ ವಸ್ತುವಿನ ಅರಮನೆಯಲ್ಲಿ ಯಶೋಧರೆಯು ತನ್ನ ಪತಿ ಸಿದ್ಧಾರ್ಥನ ಚಿತ್ರಪಟವನ್ನು ನೋಡುತ್ತ ಕಣ್ಣೀರಿಡುತ್ತಾ ಕುಳಿತಿದ್ದಾಳೆ.

೨. ಸಿದ್ಧಾರ್ಥ ರಾಜ್ಯವನ್ನು ಪರಿತ್ಯಾಗ ಮಾಡಿ ಹೋಗಿ ಹತ್ತು ವರ್ಷಗಳು ಕಳೆದಿವೆ. ಮಗ ರಾಹುಲನು ತಂದೆಯನ್ನು ಕರೆ ತರಲು ಹೋಗುವುದಾಗಿ ಹಠ ಮಾಡುತ್ತಿದ್ದಾನೆ.

೩. ಯಶೋಧರೆಯ ಆಜ್ಞೆಯಂತೆ ಸಖಿ ಅಂಬಿಕೆಯು ಸಿದ್ಧಾರ್ಥನ ತಂದೆಯಾದ ಶುದ್ಧೋಧನನ್ನು ಕರೆದುಕೊಂಡು ಬರುತ್ತಾಳೆ.

೪. ಯಶೋಧರೆಯು ರಾಜನಿಗೆ ನಮಸ್ಕರಿಸಿ, "ಸೋದರಿಯ ಮಗಳೆಂದು ನನ್ನನ್ನು ನಿಮ್ಮ ಮನೆಯ ಸೊಸೆಯಾಗಿ ಸ್ವೀಕರಿಸಿ ಬಾಳನ್ನು ಉದ್ದರಿಸಿದ್ದೀರಿ. ಈ ಮೊದಲು ನಿಮ್ಮ ಮಗ ನನ್ನನ್ನು ಬಿಟ್ಟು ಹೋದನು. ಈಗ ನನ್ನ ಮಗ ರಾಹುಲನು ತನ್ನ ತಂದೆಯನ್ನು ಕರೆ ತರಲು ಹೋಗುವೆ ಎನ್ನುತ್ತಿರುವನು. ನೀವು ಅವನಿಗೆ ಹೋಗಲು ಅನುಮತಿ ಕೊಟ್ಟಿರುವಿರಂತೆ" ಎನ್ನುವಳು.

೫. ದಯವಿಟ್ಟು ರಾಹುಲನನ್ನು ಕಳುಹಿಸಬೇಡಿ. ಬೇಕಾದರೆ ನಾನು ಹೋಗಿ ನನ್ನ ಪತಿಯನ್ನು ಕರೆ ತರುವೆನು ಎಂದು ಯಶೋಧರೆ ಹೇಳುವಳು.

೬. ರಾಜನು ಸನ್ಯಾಸಿಯಾದ ಪತಿಯನ್ನು ಸತಿಯು ಬೇಟಿಯಾಗುವುದು ಸಂಪ್ರದಾಯಕ್ಕೆ ವಿರುದ್ಧವಾದುದು ಎನ್ನುವನು.

೭. ಹಿಂದೆಯೂ ಕೆಟ್ಟ ಕನಸು ಬಿದ್ದಾಗ ಪತಿ ನನ್ನನ್ನು ತೊರೆದು ಹೋದನು. ಇವತ್ತು ಕೂಡ ಕೆಟ್ಟ ಕನಸು ಬಿದ್ದಿದೆ ಎನ್ನುವಳು.

೮. ರಾಹುಲನು ತನ್ನ ತಂದೆಯನ್ನು ಕರೆ ತರಲು ಹೋಗುವುದಾಗಿ ಹಠ ಹಿಡಿಯುವನು. ಮತ್ತೇ ಮರಳಿ ಬರುವುದಾಗಿ ಹೇಳುವನು. ಬೇಕಾದರೆ ಜೊತೆಯಲ್ಲಿ ಅಂಬಿಕೆಯನ್ನು ಕಳುಹಿಸಿ ಎಂದು ಹೇಳುವನು.

೯. ಕೊನೆಗೆ ಅಂಬಿಕೆಯೊಂದಿಗೆ ರಾಹುಲನನ್ನು ಕಳುಹಿಸಿ ಕೊಡುವರು.

೧೦. ಯಶೋಧರೆಯ ವೇದನೆ, ರಾಜನ ಸಾಂತ್ವಾನದ ನುಡಿಗಳು ಪ್ರಕಟವಾಗುವವು

### ಅಭ್ಯಾಸ ಹಾಳೆ ೪.೧

**ಮೇಲಿನ ಪ್ರಮುಖ ಅಂಶಗಳ ಕ್ರಮಸಂಖ್ಯೆಗಳನ್ನು ತೆಗೆದುಹಾಕಿ ವಾಕ್ಯರೂಪದಲ್ಲಿ ಜೋಡಿಸಿ ಬರೆಯಿರಿ.**

## ಅಭ್ಯಾಸ- ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೆಗಳು

( ದಾಖಲು ಪುಸ್ತಕದಲ್ಲಿ ಬರೆದು ರೂಢಿಸುವುದು)

೧. ಯಶೋಧರೆ ಮತ್ತೊಮ್ಮೆ ಯಾರನ್ನು ನೀಡಬೇಕೆಂದು ರಾಜನಲ್ಲಿ ಬೇಡುತ್ತಾಳೆ?
ಉತ್ತರ:- ಯಶೋಧರೆ ಮತ್ತೊಮ್ಮೆ ಪತಿಯನ್ನು ನೀಡಬೇಕೆಂದು ರಾಜನಲ್ಲಿ ಬೇಡುತ್ತಾಳೆ.

೨. ತಂದೆಯನ್ನು ಕರೆತರಲು ಹೋಗುವೆನೆಂದು ಹೇಳಿದವರು ಯಾರು?

ಉತ್ತರ:- ತಂದೆಯನ್ನು ಕರೆತರಲು ಹೋಗುವೆನೆಂದು ಹೇಳಿದವರು ರಾಹುಲ್.

೩. ರಾಜನಿಗೆ ಕನಸಿನ ವಿಚಾರವನ್ನು ತಿಳಿಸಿದವರು ಯಾರು?

ಉತ್ತರ:- ರಾಜನಿಗೆ ಕನಸಿನ ವಿಚಾರವನ್ನು ತಿಳಿಸಿದವರು ಯಶೋಧರೆ.

೪.ಸಂಪ್ರದಾಯಕ್ಕೆ ವಿರುದ್ಧವಾದದ್ದು ಯಾವುದು?

ಉತ್ತರ:- ಸಂಪ್ರದಾಯಕ್ಕೆ ವಿರುದ್ಧವಾದದ್ದು ಸನ್ಯಾಸಿಯಾದವನು ಸತಿಯನ್ನು ನೋಡುವುದು..

೫. ಈಗ ನೀನಿರುವ ರೀತಿ ಯಾವುದೆಂದು ಯಶೋಧರೆಗೆ ರಾಜ ಕೇಳಿದನು?

ಉತ್ತರ:- ಈಗ ನೀನಿರುವ ರೀತಿ ಸನ್ಯಾಸಿಯಾಗಿರುವುದು ಎಂದು ಯಶೋಧರೆಗೆ ರಾಜ ಕೇಳಿದನು.

## ಚಟುವಟಿಕೆ

### ಈ ಕೆಳಗೆ ನೀಡಿರುವ ಉತ್ತರಗಳಲ್ಲಿನ ಬಿಟ್ಟ ಜಾಗಗಳನ್ನು ಸೂಕ್ತ ಉತ್ತರದಿಂದ ತುಂಬಿರಿ

೬) ಯಶೋಧರೆ ಮತ್ತೊಮ್ಮೆ ಯಾರನ್ನು ನೀಡಬೇಕೆಂದು ರಾಜನಲ್ಲಿ ಬೇಡುತ್ತಾಳೆ?
ಯಶೋಧರೆ ಮತ್ತೊಮ್ಮೆ ---------------------- ನೀಡಬೇಕೆಂದು ರಾಜನಲ್ಲಿ ಬೇಡುತ್ತಾಳೆ.

೭) ತಂದೆಯನ್ನು ಕರೆತರಲು ಹೋಗುವೆನೆಂದು ಹೇಳಿದವರು ಯಾರು?

ತಂದೆಯನ್ನು ಕರೆತರಲು ಹೋಗುವೆನೆಂದು ಹೇಳಿದವರು ------------------------.

೮) ರಾಜನಿಗೆ ಕನಸಿನ ವಿಚಾರವನ್ನು ತಿಳಿಸಿದವರು ಯಾರು?

ರಾಜನಿಗೆ ಕನಸಿನ ವಿಚಾರವನ್ನು ತಿಳಿಸಿದವರು ----------------------------------.

೯) ಸಂಪ್ರದಾಯಕ್ಕೆ ವಿರುದ್ಧವಾದದ್ದು ಯಾವುದು?

ಸಂಪ್ರದಾಯಕ್ಕೆ ವಿರುದ್ಧವಾದದ್ದು --------------------------------------------------------------.

೧೦) ಈಗ ನೀನಿರುವ ರೀತಿ ಯಾವುದೆಂದು ಯಶೋಧರೆಗೆ ರಾಜ ಕೇಳಿದನು?

ಈಗ ನೀನಿರುವ ರೀತಿ -------------------------------------- ಎಂದು ಯಶೋಧರೆಗೆ ರಾಜ ಕೇಳಿದನು.

## ಅಭ್ಯಾಸ – ಸಂದರ್ಭಗಳು

ಸಂದರ್ಭದ ಹೇಳಿಕೆಗಳಿದ್ದು ಆಯ್ಕೆ, ಸಂದರ್ಭ ಮತ್ತು ಸ್ವಾರಸ್ಯವನ್ನು ಅನುಸರಿಸಿ ವಾಕ್ಯರೂಪದಲ್ಲಿ ವಿವರಿಸಬೇಕು. (ಈ ಕೆಳಗಿನ ಕೋಷ್ಠಕದಲ್ಲಿರುವ ಅಂಶಗಳನ್ನಾಧರಿಸಿ ಎಲ್ಲಾ ಗದ್ಯ ಮತ್ತು ಪದ್ಯ ಪಾಠಗಳ ಸಂದರ್ಭದ ಪ್ರಶ್ನೆಗಳನ್ನು ಸುಲಭವಾಗಿ ಕೆಳಗಿನ ಮಾದರಿಯಂತೆ ಉತ್ತರಿಸಬಹುದು.)

### ಗದ್ಯಭಾಗದಲ್ಲಿ ಬಂದಿರುವ ಸಾಂದರ್ಭಿಕ ಪ್ರಶ್ನೆಗಳ ಕೋಷ್ಟಕ

**ಆಯ್ಕೆ : ಈ ವಾಕ್ಯವನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರ ಅವರು ರಚಿಸಿದ 'ಯಶೋಧರೆ' ಕೃತಿಯಿಂದ ಆಯ್ದ 'ಯಶೋಧರೆ' ಎಂಬ ಗದ್ಯ ಪಾಠದಿಂದ ಆರಿಸಲಾಗಿದೆ.**

| ಗದ್ಯ ಭಾಗ | ಸಾಂದರ್ಭಿಕ ಪ್ರಶ್ನೆಗಳು | ಯಾರು? ಯಾರಿಗೆ? | ಸಂದರ್ಭ |
|---|---|---|---|
| ಯಶೋಧರೆ | "ಸೋದರಿಯ ಸುತೆಯೆಂದು ಎಳೆತನದಲೇ ನನ್ನ ಕರೆ ತಂದು ಸಾಕಿದಿರಿ" | ಯಶೋಧರೆ ರಾಜನಿಗೆ | ಯಶೋಧರೆಯು ದುಃಖವನ್ನು ತೋಡಿಕೊಳ್ಳುವಾಗ |
| | "ಅಮ್ಮಾಜಿ, ನಿನಗೆ ಭಯ ಬೇಡಮ್ಮ ನಾ ಮರಳಿ ಬಹೆನಮ್ಮ" | ರಾಹುಲ ಯಶೋಧರೆಗೆ | ಯಶೋಧರೆಯ ಆತಂಕ ದೂರ ಮಾಡುವ ಸಲುವಾಗಿ |
| | "ನಿನ್ನ ವಿಧಿ ಕೆಟ್ಟುದೆಂದೆಣಿಸದಿರು ಅಮ್ಮಾಜಿ" | ರಾಜನು ಯಶೋಧರೆಗೆ | ಯಶೋಧರೆಯನ್ನು ಸಂತೈಸುವಾಗ |
| | "ನಿದ್ದೆಯಲ್ಲಿ ಮುಳುಗಲಿನ್ನಾವ ಕನಸಿನ ಮೊಸಳೆ ಹಿಡಿಯುವುದೋ" | ಯಶೋಧರೆ ತನಗೊದಗಿದ ದುಃಖಕ್ಕೆ | ಯಶೋಧರೆಯ ಕನಸಿನ ಆತಂಕದ ಸಮಯದಲ್ಲಿ |

### ಸಂದರ್ಭ ಬರೆಯುವ ಮಾದರಿ

**ಆಯ್ಕೆ :–** ಈ ವಾಕ್ಯವನ್ನು ಕವಿ/ಲೇಖಕರ ಹೆಸರು ---------------- ಅವರು ಬರೆದ ಕೃತಿ ---------------- ಕೃತಿ ---------------- ಎಂಬ ಕೃತಿಯಿಂದ ಆಯ್ದುಕೊಂಡ ಪಾಠದ ಹೆಸರು ---------------- ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :–** ಈ ಮಾತನ್ನು ಯಾರು, ಯಾರಿಗೆ, ಯಾವಾಗ, ಏಕೆ ಹೇಳಿದರು ಎಂಬ ಅಂಶಗಳನ್ನು ಬರೆಯಬೇಕು.
----------------------------------------

----------------------------------------

**ಸ್ವಾರಸ್ಯ :–** ಈ ಮಾತಿನ ವಿಶೇಷತೆಯನ್ನು/ ಮೌಲ್ಯವನ್ನು / ಗುಣವನ್ನು ಕುರಿತು ಬರೆಯಬೇಕು
----------------------------------------

**ಚಟುವಟಿಕೆ:– ಈ ಮೇಲಿನ ರೀತಿಯಲ್ಲಿ ಎಲ್ಲಾ ಸಂದರ್ಭಗಳನ್ನು ಈ ಕೆಳಕಾಣಿಸಿದ ಕೋಷ್ಟಕದಲ್ಲಿ ಬರೆಯಿರಿ**

೧."ಸೋದರಿಯ ಸುತೆಯೆಂದು ಎಳೆತನದಲೇ ನನ್ನ ಕರೆ ತಂದು ಸಾಕಿದಿರಿ"

**ಆಯ್ಕೆ :** ಈ ವಾಕ್ಯವನ್ನು ------------------ ಅವರು ಬರೆದ ---

ಕಎಂಬ ಕೃತಿಯಿಂದ ಆಯ್ದುಕೊಂಡ--------- ಎಂಬ ಗದ್ಯ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :** ------------------------------------------------------------

ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :** ------------------------------------------------------------

ಬಹು ಸ್ವಾರಸ್ಯಕರವಾಗಿ ವರ್ಣಿಸಲಾಗಿದೆ.

೨. "ಅಮ್ಮಾಜಿ, ನಿನಗೆ ಭಯ ಬೇಡಮ್ಮ ನಾ ಮರಳಿ ಬಹೆನಮ್ಮ"

**ಆಯ್ಕೆ** : ಈ ವಾಕ್ಯವನ್ನು ------------------ ಅವರು ಬರೆದ ------------------- ಎಂಬ ಕೃತಿಯಿಂದ ಆಯ್ದುಕೊಂಡ -------- ಎಂಬ ಗದ್ಯ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ** : ------------------------------------------------------------------------------ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ** : ------------------------------------------------------------------------------ ಬಹು ಸ್ವಾರಸ್ಯಕರವಾಗಿ ವರ್ಣಿಸಲಾಗಿದೆ.

೩. "ನಿನ್ನ ವಿಧಿ ಕೆಟ್ಟುದೆಂದೆಣಿಸದಿರು ಅಮ್ಮಾಜಿ"

**ಆಯ್ಕೆ** : ಈ ವಾಕ್ಯವನ್ನು ------------------ ಅವರು ಬರೆದ ------------------- ಎಂಬ ಕೃತಿಯಿಂದ ಆಯ್ದುಕೊಂಡ ---------- ಎಂಬ ಗದ್ಯ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ** : ------------------------------------------------------------------------------ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ** : ------------------------------------------------------------------------------ ಬಹು ಸ್ವಾರಸ್ಯಕರವಾಗಿ ವರ್ಣಿಸಲಾಗಿದೆ.

## ವ್ಯಾಕರಣಾಂಶ

### ಲಿಂಗಗಳು

| ಲಿಂಗಗಳಲ್ಲಿ ಮೂರು ಪ್ರಕಾರಗಳು | | | |
|---|---|---|---|
| ೦೧ | ಪುಲ್ಲಿಂಗ | ಪುರುಷವಾಚಕ ಪದಗಳು | ಉದಾ:- ಶ್ಯಾಮ, ಗಿರೀಶ, ಹನುಮ ಅಣ್ಣ, ಅಪ್ಪ, ರಾಜ |
| ೦೨ | ಸ್ತ್ರೀಲಿಂಗ | ಸ್ತ್ರೀವಾಚಕ ಪದಗಳು | ಉದಾ;- ಕಾವ್ಯ, ಅಂಜಲಿ, ತಂಗಿ, ರಾಣಿ, ಅಮ್ಮ, ಅಕ್ಕ |
| ೦೩ | ನಪುಂಸಕ ಲಿಂಗ | ಪುರುಷ ಮತ್ತು ಸ್ತ್ರೀ ಎರಡನ್ನೂ ಸೂಚಿಸದ ಪದಗಳು | ಉದಾ:- ಆನೆ, ಕೋಣ, ಮನೆ, ಕಲ್ಲು |

**ಚಟುವಟಿಕೆ**

**ಈ ಕೆಳಗೆ ಕೊಟ್ಟಿರುವ ಪದಗಳನ್ನು ಗಮನಿಸಿ**

| |
|---|
| ಕಾವೇರಿ, ಕೃಷ್ಣ, ಪಲ್ಲವಿ,ಕಲ್ಲು,ಆಕಾಶ, ಹೆಂಗಸು, ಗೋವು, ಹುಲಿ, ರಾಜ, ರಾಣಿ, ಮನೆ, ಪುಸ್ತಕ, ಸುರಪುರ, ಯಾದಗಿರಿ, ರಸ್ತೆ, |

## ಮೇಲಿನ ಪದಗಳನ್ನು ಓದಿಕೊಂಡು ಲಿಂಗಗಳನ್ನು ವಿಭಾಗಿಸಿ ಬರೆಯಿರಿ

| ಪುಲ್ಲಿಂಗ | ಸ್ತ್ರೀಲಿಂಗ | ನಪುಂಸಕ ಲಿಂಗ |
|---|---|---|
| | | |

## ವಚನಗಳು

ವಚನ ಎಂದರೆ ಎಣಿಕೆ ಎಂದರ್ಥ. ವಸ್ತು ಅಥವಾ ವ್ಯಕ್ತಿಗಳನ್ನು ಎಣಿಸುವಾಗ ಒಂದು ವಸ್ತವನ್ನು ಸೂಚಿಸಿದರೆ ಏಕವಚನ. ಒಂದಕ್ಕಿಂತ ಹೆಚ್ಚು ವಸ್ತುಗಳನ್ನು ಸೂಚಿಸಿದರೆ ಬಹುವಚನ.

ಉದಾ:– ೧. ಏಕವಚನ:– ನಾನು, ರಾಜ, ರಾಣಿ, ಅಣ್ಣ, ಪಟ್ಟಣ, ಹೊಲ,

೨. ಬಹುವಚನ:– ನಾವು, ರಾಜರು, ರಾಣಿಯರು, ಅಣ್ಣಂದಿರು, ಪಟ್ಟಣಗಳು, ಹೊಲಗಳು

**ಚಟುವಟಿಕೆ**

| |
|---|
| ತಮ್ಮ, ಸ್ವರ, ಲೋಕಗಳು, ಮಗು, ಬಾಲಕ, ಮಕ್ಕಳು, ಅದು, ತಮ್ಮಂದಿರು, ಗಿಡ, ಅವರು, ಅದು, ಅವು, ಮನುಷ್ಯರು, ಮನೆ, ಹೆಂಗಸು, ಶಾಲೆಗಳು |

## ಮೇಲಿನ ಪದಗಳನ್ನು ಓದಿಕೊಂಡು ವಚನಗಳನ್ನು ವಿಭಾಗಿಸಿ ಬರೆಯಿರಿ

| ಏಕವಚನ | ಬಹುವಚನ |
|---|---|
| | |

## ವಾಕ್ಯಗಳು

ಕರ್ತೃ, ಕರ್ಮ, ಕ್ರಿಯಾಪದಗಳಿಂದ ವ್ಯವಸ್ಥಿತವಾಗಿ ಕೂಡಿರುವ ಪದ ಸಮೂಹಕ್ಕೆ ವಾಕ್ಯ ಎನ್ನುವರು.

| ವಾಕ್ಯಗಳಲ್ಲಿ ಮೂರು ಪ್ರಕಾರಗಳು | | | |
|---|---|---|---|
| ೦೧ | ಸಾಮಾನ್ಯ ವಾಕ್ಯ | ಪೂರ್ಣ ಕ್ರಿಯಾಪದದೊಡನೆ ಕೂಡಿರುವ ಸ್ವತಂತ್ರ ವಾಕ್ಯ. | ಉದಾ:– ರಾಹುಲನು ತಂದೆಯನ್ನು ಕರೆ ತರಲು ಹೋಗುವನು. |
| ೦೨ | ಸಂಯೋಜಿತ ವಾಕ್ಯ | ಎರಡು ಅಥವಾ ಹೆಚ್ಚು ಉಪ ವಾಕ್ಯಗಳು ಸೇರಿ ಆಗುವ ವಾಕ್ಯ | ಉದಾ;– ಸಿದ್ದಾರ್ಥನು ರಾಜ್ಯ ಪರಿತ್ಯಾಗ ಮಾಡಿ ಹೋಗಿದ್ದನು ಆದ್ದರಿಂದ ಯಶೋಧರೆ ಬಹಳ ನೊಂದಿದ್ದಳು. |
| ೦೩ | ಮಿಶ್ರವಾಕ್ಯ | ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅಂತಹ ವಾಕ್ಯ | ಉದಾ:– ರಾಹುಲನು ತಂದೆಯನ್ನು ಕರೆತರಲು ಹೋಗುವೆನೆಂದಾಗ, ಆ ಸುದ್ಧಿಯನ್ನು ಕೇಳಿ ಯಶೋಧರೆಯು ಬಹಳ ನೊಂದಿದ್ದಳು. |

**ಚಟುವಟಿಕೆ**

**ಈ ಕೆಳಗಿನ ವಾಕ್ಯಗಳನ್ನು ಗಮನಿಸಿ**

| |
|---|
| ಅವಳು ಚೆನ್ನಾಗಿ ಹಾಡಿದಳು, ಅವಳು ಚೆನ್ನಾಗಿ ಹಾಡಿದಳು ಆದರೆ ಬಹುಮಾನ ಸಿಗಲಿಲ್ಲ. ಅವಳು ಚೆನ್ನಾಗಿ ಹಾಡಿದಳಾದರೂ, ಅವಳಿಗೆ ಬಹುಮಾನ ಸಿಗದಿದ್ದಾಗ ಅವಳು ಬಹಳ ನೊಂದುಕೊಂಡಳು. |

**ಮೇಲಿನ ವಾಕ್ಯವನ್ನು ಗಮನಿಸಿ ವಿಂಗಡಿಸಿ ಬರೆಯಿರಿ**

| ವಾಕ್ಯಗಳಲ್ಲಿ ಮೂರು ಪ್ರಕಾರಗಳು | | |
|---|---|---|
| ೦೧ | ಸಾಮಾನ್ಯ ವಾಕ್ಯ | |
| ೦೨ | ಸಂಯೋಜಿತ ವಾಕ್ಯ | |
| ೦೩ | ಮಿಶ್ರವಾಕ್ಯ | |

## ಘಟಕ ಪರೀಕ್ಷೆ– ಯಶೋಧರೆ

ಅಂಕಗಳು: ೧೦ ನಿಗದಿಪಡಿಸಿದ ಸಮಯ:–೩೦

**I. ಸೂಕ್ತ ಉತ್ತರಗಳನ್ನು ಆರಿಸಿ ಬರೆಯಿರಿ** ೩X೧=೩

೧. 'ಪಲ್ಲವಿ' ಪದದಲ್ಲಿರುವ ಲಿಂಗ

ಎ) ಪುಲ್ಲಿಂಗ ಬಿ) ಸ್ತ್ರೀಲಿಂಗ ಸಿ) ನಪುಂಸಕ ಲಿಂಗ ಡಿ) ಮಹಾಲಿಂಗ ಉತ್ತರ:– ————————

೨. 'ರಾಜ'– ಈ ಪದದ ಬಹುವಚನ ರೂಪ ಬರೆಯಿರಿ.

ಎ) ರಾಜರಿಗೆ ಬಿ) ರಾಜನು ಸಿ) ರಾಜರು ಡಿ) ರಾಜನನ್ನು ಉತ್ತರ:– ————————

೩. ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಅಂತಹ ವಾಕ್ಯ ——

ಎ) ಮಿಶ್ರ ವಾಕ್ಯ ಬಿ) ಸಾಮಾನ್ಯ ವಾಕ್ಯ ಸಿ) ಸಂಯೋಜಿತ ವಾಕ್ಯ ಡಿ) ಉಪ ವಾಕ್ಯ ಉತ್ತರ:– ————————

**II. ಒಂದು ವಾಕ್ಯದಲ್ಲಿ ಉತ್ತರಿಸಿ.** ೨X೧=೨

೪.ತಂದೆಯನ್ನು ಕರೆತರಲು ಹೋಗುವೆನೆಂದು ಹೇಳಿದವರು ಯಾರು?

ಉತ್ತರ:– ————————————————————————————

೧. ರಾಜನಿಗೆ ಕನಸಿನ ವಿಚಾರವನ್ನು ತಿಳಿಸಿದವರು ಯಾರು?

ಉತ್ತರ:– ————————————————————————————

**III. ಸಂದರ್ಭದೊಡನೆ ಸ್ವಾಸ್ಯ ಬರೆಯಿರಿ** ೧X೨=೨

೨. 'ಅಮ್ಮಾಜಿ, ನಿನಗೆ ಭಯ ಬೇಡಮ್ಮ ನಾ ಮರಳಿ ಬಹೆನಮ್ಮ"

ಉತ್ತರ:– ————————————————————————————

**IV. ಹೊಂದಿಸಿ ಬರೆಯಿರಿ.** ೩X೧=೩

| ಅ | ಬ | ಉತ್ತರ |
|---|---|---|
| ೩. ಶುದ್ಧೋದನ | ಸಖಿ | ೧. ———————— |
| ೪. ಸಿದ್ಧಾರ್ಥ | ರಾಜ | ೨. ———————— |
| ೫. ಅಂಬಿಕೆ | ಗೌತಮ ಬುದ್ಧ | ೩. ———————— |

*******************************************

# ಪದ್ಯ-೪. ಸೋಮೇಶ್ವರ ಶತಕ – (ಪುಲಿಗೆರೆ ಸೋಮನಾಥ)

## ನಿಗದಿಪಡಿಸಿದ ಅವಧಿಗಳು – ೩



**ಪುಲಿಗೆರೆ ಸೋಮನಾಥ** ಅವರು ಸಾ.ಶ. ೧೨೯೯ ರಲ್ಲಿ ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಪುಲಿಗೆರೆಯಲ್ಲಿ ಜನಿಸಿದರು. ಕನ್ನಡ ಸಂಸ್ಕೃತ ಭಾಷಾ ಪಂಡಿತನಾದ ಈತನ ಅಂಕಿತನಾಮ ಹರಹರಾ ಶ್ರೀ ಚೆನ್ನಸೋಮೇಶ್ವರ ಎಂಬುದಾಗಿದೆ. ಇವರು ಸೋಮೇಶ್ವರ ಶತಕ ಎಂಬ ಕೃತಿಯನ್ನು ರಚಿಸಿದ್ದಾನೆ. ಈ ಕೃತಿಯು ಚೌಪದಿ ರೂಪದಲ್ಲಿದ್ದು, ವೃತ್ತ ಛಂದಸ್ಸಿನಿಂದ ಕೂಡಿದೆ.

### ಅಭ್ಯಾಸ

| | |
|---|---|
| **ಹಂತ-೧ ಪ್ರಮುಖ ಅಂಶಗಳನ್ನು ಗುರ್ತಿಸುವುದು** | |
| ಕವಿ/ಸಾಹಿತಿಗಳ ಹೆಸರು | |
| ಕಾಲ | |
| ಸ್ಥಳ | |
| ಅಂಕಿತನಾಮ | |
| ಕೃತಿಗಳು | |
| | |
| **ಹಂತ-೨ ಬರೆಯುವ ವಿಧಾನವನ್ನು ರೂಢಿಸುವುದು** | |
| ರವರು | |
| ಯಲ್ಲಿ ಸಾ.ಶ ರಲ್ಲಿ ಜನಿಸಿದರು. | |
| ಇವರು | |
| ಇವರ ಅಂಕಿತನಾಮ . | |
| ಮುಂತಾದ ಕೃತಿ ಬರೆದಿದ್ದಾರೆ | |
| | |
| **ಹಂತ ೪- ಸ್ವತಂತ್ರವಾಗಿ ಬರೆಯಿಸುವುದು** | |
| | |

## ಪದ್ಯ ಪಾಠ– ಸೋಮೇಶ್ವರ ಶತಕ

### ಮಕ್ಕಳಿಗೆ ಸೂಚನೆಗಳು:–

೧. ಮಕ್ಕಳು ಮೊದಲು ಎಲ್ಲಾ ಅಂಶಗಳನ್ನು ಓದಿ ಮನದಟ್ಟು ಮಾಡಿಕೊಳ್ಳಬೇಕು.
೨. ಕ್ರಮ ಸಂಖ್ಯೆ ಬಿಟ್ಟು ಬರೆಯುವುದನ್ನು ರೂಢಿಗೊಳಿಸಿಕೊಳ್ಳಬೇಕು.
೩. ಕಥೆಯ ರೂಪದಲ್ಲಿ ಹೇಳಬೇಕು, ಹೇಳಿ ಹಾಗೆಯೇ ಬರೆಯಬೇಕು.
೪. ಆಯಾ ವಾಕ್ಯದಲ್ಲಿ ಪ್ರಮುಖ ಪದಗಳನ್ನು ನೆನಪಿಟ್ಟುಕೊಳ್ಳಬೇಕು.
೫. ಪದ್ಯಭಾಗದಲ್ಲಿ ಹಾಡನ್ನು ಮೊದಲು ಹೇಳಲು/ಹಾಡಲು ಕಲಿಯಬೇಕು.

### ಪಾಠದ ಪ್ರಮುಖಾಂಶಗಳು

೧. ಹಿತವನ್ನು ತೋರುವವನು ಬಂಧು, ನಮ್ಮನ್ನು ರಕ್ಷಿಸುವಾತನೇ ತಂದೆ, ಸತ್ಯ ಧರ್ಮದಲ್ಲಿ ನಡೆಯುವವಳೇ ಸತಿ, ಅಕ್ಷರವನ್ನು ಕಲಿಸುವಾತನೇ ಗುರು. ಯಾವಾಗಲೂ ವೇದ ಧ್ಯಾನ ಮಾಡುತ್ತ ವ್ರತ ನಿಯಮ ಪಾಲಿಸುವಾತನೇ ಸುವ್ರತಿ. ಸದ್ವಿದ್ಯೆಯೇ ಪುಣ್ಯ. ತಂದೆಗೆ ಸದ್ಗತಿಯ ಕ್ರಿಯಾ ಕರ್ಮಗಳನ್ನು ನಡೆಸುವವನೇ ಮಗ.

೨. ಪ್ರಜೆಗಳನ್ನು ಪಾಲಿಸುವವನೇ ಅರಸ, ಲಂಚಕ್ಕೆ ಕೈ ಒಡ್ಡದವನೇ ನಿಜವಾದ ಮಂತ್ರಿ, ತಂದೆ ತಾಯಿ ಸಲುಹುವವನೇ ನಿಜವಾದ ಧಾರ್ಮಿಕ, ಸದಾಕಾಲ ದೇವರನ್ನು ಪೂಜಿಸುವವನೇ ನಿಜವಾದ ಭಕ್ತ. ಧೈರ್ಯದಿಂದ ಇರುವವನೇ ಭಟ. ಉತ್ತಮವಾದ ಚಾರಿತ್ರ್ಯ ಉಳ್ಳವನೇ ದ್ವಿಜ.

೩. ಬಹಳ ಗಂಭೀರನಾದವನು, ದಾನಶೀಲನಾದವನು, ಧೈರ್ಯಶಾಲಿಯಾದವನು, ಗುಣಶಾಲಿಯಾದವನು, ಸತ್ಯವಂತನಾದವನು, ಅನೇಕ ಲಿಪಿ,ಭಾಷೆಗಳನ್ನು ತಿಳಿದುಕೊಂಡವನು, ಲಂಚಕ್ಕೆ ಆಸೆ ಪಡದವನು, ಧರ್ಮಿಷ್ಠನು, ವಿಚಾರಶಾಲಿಯೂ, ಚತುರೋಪಾಯಗಳನ್ನು ಬಲ್ಲವನು, ಸ್ವಾಮಿಕಾರ್ಯದಲ್ಲಿ ಆಸಕ್ತಿ ಉಳ್ಳವನು, ಇವೆಲ್ಲವುಗಳನ್ನು ಹೊಂದಿದವನು ಶ್ರೇಷ್ಠವಾದ ಮಂತ್ರಿಯಾಗಿದ್ದಾನೆ.

೪. ಚಂದ್ರನು ಅಮವಾಸ್ಯೆಯ ದಿನಗಳಲ್ಲಿ ಕಳೆಗುಂದಿದರೂ ಮತ್ತೆ ಹುಣ್ಣಿಮೆಯ ದಿನಗಳಲ್ಲಿ ವೃದ್ಧಿಹೊಂದುವುದಿಲ್ಲವೇ? ಬಹಳ ಚಿಕ್ಕದಾಗಿರುವ ಆಲದ ಬೀಜವು ನೆಲದ ಮೇಲೆ ಸಿಡಿದು ಬಿದ್ದು ದೊಡ್ಡಮರವಾಗುವುದಿಲ್ಲವೇ? ಸಣ್ಣ ಮಿಡಿಗಾಯಿ ಬಲಿತು ಹಣ್ಣಾಗುವುದಿಲ್ಲವೇ? ದೇವರ ಒಲುಮೆಯಿದ್ದರೆ ಮುಂದೊಂದು ದಿನ ಬಡವ ಶ್ರೀಮಂತನಾಗುತ್ತಾನೆ.

## ಅಭ್ಯಾಸ ಹಾಳೆ

**ಮೇಲಿನ ಪ್ರಮುಖ ಅಂಶಗಳ ಕ್ರಮಸಂಖ್ಯೆಗಳನ್ನು ತೆಗೆದುಹಾಕಿ ವಾಕ್ಯರೂಪದಲ್ಲಿ ಜೋಡಿಸಿ ಬರೆಯಿರಿ.**

## ಅಭ್ಯಾಸ– ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೆಗಳು

( ದಾಖಲು ಪುಸ್ತಕದಲ್ಲಿ ಬರೆದು ರೂಢಿಸುವುದು)

೧) ನಿಜವಾದ ಬಂಧು ಯಾರು?

ಉತ್ತರ:– ನಿಜವಾದ ಬಂಧು ಹಿತವನ್ನು ಉಂಟು ಮಾಡುವವನು.

೨) ಧಾರ್ಮಿಕನೆಂದು ಯಾರನ್ನು ಕರೆಯಲಾಗಿದೆ?

ಉತ್ತರ:– ತಂದೆ ತಾಯಿಯರನ್ನು ಸಲಹಲು ಬಲ್ಲವನನ್ನು ಧಾರ್ಮಿಕನೆಂದು ಕರೆಯಲಾಗಿದೆ.

೩) ರಾಜನಾದವನ ಕರ್ತವ್ಯವೇನು?

ಉತ್ತರ:– ರಾಜನಾದವನ ಕರ್ತವ್ಯ ಪ್ರಜೆಗಳನ್ನು ಪಾಲಿಸುವುದು.

೪) ಆಲದ ಮರದ ಬೀಜ ಸಿಡಿದು ಭೂಮಿಗೆ ಬಿದ್ದು ಏನಾಗುತ್ತದೆ?

ಉತ್ತರ:– ಆಲದ ಮರದ ಬೀಜ ಸಿಡಿದು ಭೂಮಿಗೆ ಬಿದ್ದು ದೊಡ್ಡ ಮರವಾಗಿ ಬೆಳೆಯುತ್ತದೆ.

೫) ಪುಲಿಗೆರೆ ಸೋಮನಾಥನ ಅಂಕಿತನಾಮವೇನು?

ಉತ್ತರ:– ಪುಲಿಗೆರೆ ಸೋಮನಾಥನ ಅಂಕಿತನಾಮ ಹರಹರಾ ಶ್ರೀ ಚೆನ್ನಸೋಮೇಶ್ವರ.

ಸೂಚನೆ:– ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ನಾಲ್ಕನೇ ಪದವನ್ನು ಬರೆಯಿರಿ.

| | | |
|---|---|---|
| ೦೧ | ಮಿಡಿಗಾಯಿ : ಪಣ್ಣಾಗದೆ :: | ಎಳಗರು : ------------ |
| ೦೨ | ನ್ಯಗ್ರೋಧ : ಆಲದಮರ :: | ಉಡುರಾಜ : ----------- |
| ೦೩ | ಹೊಸಗನ್ನಡ: ಆದೇಶ ಸಂಧಿ | :: ಮನೆಯನ್ನು : ----------- |
| ೦೪ | ಧರ್ಮ : ಅಧರ್ಮ :: | ಬಡವ : ----------- |

## ಅಭ್ಯಾಸ – ಸಂದರ್ಭಗಳು

ಮೂರು ಸಂದರ್ಭದ ಹೇಳಿಕೆಗಳಿದ್ದು ಆಯ್ಕೆ, ಸಂದರ್ಭ ಮತ್ತು ಸ್ವಾರಸ್ಯವನ್ನು ಅನುಸರಿಸಿ ವಾಕ್ಯರೂಪದಲ್ಲಿ ವಿವರಿಸಬೇಕು. (ಈ ಕೆಳಗಿನ ಕೋಷ್ಟಕದಲ್ಲಿರುವ ಅಂಶಗಳನ್ನಾಧರಿಸಿ ಎಲ್ಲಾ ಗದ್ಯ ಮತ್ತು ಪದ್ಯ ಪಾಠಗಳ ಸಂದರ್ಭದ ಪ್ರಶ್ನೆಗಳನ್ನು ಸುಲಭವಾಗಿ ಕೆಳಗಿನ ಮಾದರಿಯಂತೆ ಉತ್ತರಿಸಬಹುದು.)

### ಪದ್ಯ ಭಾಗದಲ್ಲಿ ಬಂದಿರುವ ಸಾಂದರ್ಭಿಕ ಪ್ರಶ್ನೆಗಳ ಕೋಷ್ಟಕ

**ಆಯ್ಕೆ : ಈ ವಾಕ್ಯವನ್ನು ಪುಲಿಗೆರೆ ಸೋಮನಾಥ ಅವರು ರಚಿಸಿದ 'ಸೋಮೇಶ್ವರ ಶತಕ' ಕೃತಿಯಿಂದ ಆಯ್ದ 'ಸೋಮೇಶ್ವರ ಶತಕ' ಎಂಬ ಪದ್ಯ ಪಾಠದಿಂದ ಆರಿಸಲಾಗಿದೆ.**

| ಗದ್ಯ ಭಾಗ | ಸಾಂದರ್ಭಿಕ ಪ್ರಶ್ನೆಗಳು | ಯಾರು? ಯಾರಿಗೆ? | ಸಂದರ್ಭ |
|---|---|---|---|
| ಸೋಮೇಶ್ವರ ಶತಕ | "ಸದ್ಧರ್ಮದಾ ಸತಿಯೇ ಸರ್ವಕ್ಕೆ ಸಾಧನಂ" | ಕವಿಯು ಓದುಗರಿಗೆ | ಲೋಕದಲ್ಲಿ ಸತಿಯು ಹೇಗಿರಬೇಕೆಂಬ ಸಂದರ್ಭದಲ್ಲಿ |
| | "ಅತಿ ಗಂಭೀರನುದಾರ ಧೀರನು" | ಕವಿಯು ಓದುಗರಿಗೆ | ಶ್ರೇಷ್ಠ ಮಂತ್ರಿಯಾದವನ ಲಕ್ಷಣ ಹೇಳುವ ಸಂದರ್ಭದಲ್ಲಿ |
| | "ಉಡುರಾಜಂ ಕಳೆಗುಂದಿ ಪೆರ್ಚದಿಹನೇ" | ಕವಿಯು ಓದುಗರಿಗೆ | ದೇವರ ಕೃಪೆಯಿದ್ದರೆ ಎಲ್ಲವೂ ಸಾಧ್ಯ ಎಂದು ಹೇಳುವ ಸಂದರ್ಭದಲ್ಲಿ |

## ಸಂದರ್ಭ ಬರೆಯುವ ಮಾದರಿ

**ಆಯ್ಕೆ** :– ಈ ವಾಕ್ಯವನ್ನು ಕವಿ/ಲೇಖಕರ ಹೆಸರು ---------------------------------------- ಅವರು ಬರೆದ ಕೃತಿ ----------------------------------------
ಕೃತಿ ಎಂಬ ಕೃತಿಯಿಂದ ಆಯ್ದುಕೊಂಡ ಪಾಠದ ಹೆಸರು -------------------- ಪಾಠದಿಂದ ----------------------------------------
ಆರಿಸಿಕೊಳ್ಳಲಾಗಿದೆ.

**ಸಂದರ್ಭ** :–ಈ ಮಾತನ್ನು ಯಾರು, ಯಾರಿಗೆ, ಯಾವಾಗ, ಏಕೆ ಹೇಳಿದರು ಎಂಬ ಅಂಶಗಳನ್ನು ಬರೆಯಬೇಕು. ----------------------------------------

----------------------------------------

**ಸ್ವಾರಸ್ಯ** :–ಈ ಮಾತಿನ ವಿಶೇಷತೆಯನ್ನು/ ಮೌಲ್ಯವನ್ನು / ಗುಣವನ್ನು ಕುರಿತು ಬರೆಯಬೇಕು ----------------------------------------

## ಮಾದರಿ ಸಂದರ್ಭಗಳು

೧. "ಸದ್ಧರ್ಮದಾ ಸತಿಯೇ ಸರ್ವಕ್ಕೆ ಸಾಧನಂ".

**ಆಯ್ಕೆ** : ಈ ವಾಕ್ಯವನ್ನು ------------------ ಅವರು ಬರೆದ ------------------
ಕೃತಿ ಎಂಬ ಕೃತಿಯಿಂದ ಆಯ್ದುಕೊಂಡ ------------ ಎಂಬ ಗದ್ಯ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ** : ----------------------------------------------------------------
ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ** : ---------------------------------------- ಬಹು ಸ್ವಾರಸ್ಯಕರವಾಗಿ ವರ್ಣಿಸಲಾಗಿದೆ.

೨. "ಅತಿ ಗಂಭೀರನುದಾರ ಧೀರನು"

**ಆಯ್ಕೆ** : ಈ ವಾಕ್ಯವನ್ನು ------------------ ಅವರು ಬರೆದ ------------------
ಕೃತಿ ಎಂಬ ಕೃತಿಯಿಂದ ಆಯ್ದುಕೊಂಡ ------------ ಎಂಬ ಗದ್ಯ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ** : ----------------------------------------------------------------
ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ** : ----------------------------------------------------------------
ಬಹು ಸ್ವಾರಸ್ಯಕರವಾಗಿ ವರ್ಣಿಸಲಾಗಿದೆ.

## ಅಭ್ಯಾಸ :– ಪದ್ಯ ಕಂಠಪಾಠ

### ಕಂಠಪಾಠಕ್ಕಾಗಿ ನಿಗದಿಪಡಿಸಿದ ಪದ್ಯ.

ಪ್ರಜೆಯಂ ಪಾಲಿಸಬಲ್ಲೊಡಾತನರಸಂ ಕೈಯಾಸೆಯಂ ಮಾಡದಂ।
ನಿಜ ಮಂತ್ರೀಶ್ವರ ತಂದೆ ತಾಯ ಸಲಹಲ್ ಬಲ್ಲಾತನೇ ಧಾರ್ಮಿಕಂ।।
ಭಜಕಂ ದೈವದ ಭಕ್ತಿಯುಳ್ಳೊಡೆ ಭಟಂ ನಿರ್ಭೀತ ತಾನಾದವಂ।
ದ್ವಿಜನಾಚಾರತೆಯುಳ್ಳವಂ ಹರಹರಾ ಶ್ರೀ ಚೆನ್ನಸೋಮೇಶ್ವರಾ।।

# ಅಲಂಕಾರಗಳು

.

## ವ್ಯಾಕರಣಾಂಶಗಳು

### ಪರಿಚಯಾತ್ಮಕ ವಿವರ

**ಮನುಷ್ಯನು ತನ್ನ ದೇಹದ ಸೌಂದರ್ಯವನ್ನು ಹೆಚ್ಚಿಸಿಕೊಳ್ಳಲು ಹೇಗೆ ಅಲಂಕಾರ ಮಾಡಿಕೊಳ್ಳುವನೋ ಹಾಗೆಯೇ ತನ್ನ ಮಾತುಗಳು ಇತರರಿಗೆ ಇಂಪಾಗಿ ಕೇಳುವಂತೆ ಮಾಡುವ ಸಲುವಾಗಿ ಚಮತ್ಕಾರದಿಂದ ಮಾತನಾಡುವನು.**

ಕಾವ್ಯದ ಸೌಂದರ್ಯವನ್ನು ಹೆಚ್ಚಿಸುವ ಚಮತ್ಕಾರದ ಮಾತುಗಳೇ ಅಲಂಕಾರಗಳು. ಅಲಂಕಾರಗಳಲ್ಲಿ **ಶಬ್ದಾಲಂಕಾರ** ಮತ್ತು **ಅರ್ಥಾಲಂಕಾರ**ಗಳೆಂಬ ಎರಡು ಪ್ರಕಾರಗಳಿವೆ

**ಶಬ್ದಾಲಂಕಾರ :** ಶಬ್ಧಗಳ ಜೋಡಣೆಯ ಚಮತ್ಕಾರದಿಂದ ಕಾವ್ಯದ ಸೌಂದರ್ಯ ಹೆಚ್ಚಿದರೆ ಅದನ್ನು ಶಬ್ದಾಲಂಕಾರ ಎನ್ನುವರು.

**ಅರ್ಥಾಲಂಕಾರ :** ಕಾವ್ಯದಲ್ಲಿ ಬಳಸಲಾದ ಪದಗಳ ಅರ್ಥ ಚಮತ್ಕಾರದಿಂದ ಕಾವ್ಯದ ಸೌಂದರ್ಯ ಹೆಚ್ಚಾದರೆ ಅದನ್ನು ಅರ್ಥಾಲಂಕಾರ ಎನ್ನುವರು.

- **ಉಪಮೇಯ;** ವರ್ಣಿಸುವ ವಸ್ತು
- **ಉಪಮಾನ:** ಯಾವ ವಸ್ತುವನ್ನು ಆಧರಿಸಿ ಅಥವಾ ಮಾನವಾಗಿಟ್ಟುಕೊಂಡು ವರ್ಣಿಸುತ್ತವೆಯೋ ಆ ವಸ್ತು
- **ಉಪಮ ವಾಚಕ :** ಅಂತೆ, ಹಾಂಗ, ವೋಲ್ ಎನ್ನುವ ವಾಚಕಪದಗಳು.
- **ಸಮಾನಧರ್ಮ :** ಉಪಮೇಯಕ್ಕೂ ಉಪಮಾನಕ್ಕೂ ಹೊಂದಿಕೆಯಾಗುವ ಕ್ರಿಯಾಪದ
- **ಸಮನ್ವಯ :** ವಿವರಿಸಿ ಹೇಳುವದು

- **ಉಮಾಲಂಕಾರ**

ಉಪಮೇಯ ಮತ್ತು ಉಪಮಾನ ಇವೆರಡರ ಮಧ್ಯ ಹೋಲಿಕೆ ಮಾಡುವ ಅಲಂಕಾರ

**ಪೂರ್ಣೋಪಮಾಲಂಕಾರ :** ಈ ಅಲಂಕಾರದಲ್ಲಿ ಉಪಮೇಯ, ಉಪಮಾನ, ಉಪಮವಾಚಕ, ಸಮಾನಧರ್ಮ ನಾಲ್ಕು ಅಂಶಗಳು ಇರುತ್ತವೆ. **ಲುಪ್ತೋಪಮಾಲಂಕಾರ :** ಮೇಲಿನ ನಾಲ್ಕು ಅಂಶಗಳಲ್ಲಿ ಒಂದು ಇರದಿದ್ದರೆ

**ಮನೋರಮೆಯ ಹಣೆ ಬಾಲ ಚಂದ್ರನಂತೆ ಆಕರ್ಷಣೀಯವಾಗಿತ್ತು**

- **ಅಲಂಕಾರದ ಹೆಸರು :** ಉಪಮಾಲಂಕಾರ
- **ಲಕ್ಷಣ** : ಎರಡು ವಸ್ತುಗಳ ಮಧ್ಯ ಹೋಲಿಕೆ ಮಾಡುವದು
- **ಉಪಮೇಯ** : ಮನೋರಮೆಯ ಹಣೆ
- **ಉಪಮಾನ** : ಬಾಲಚಂದ್ರ
- **ಉಪಮ ವಾಚಕ** : ಅಂತೆ,
- **ಸಮಾನಧರ್ಮ** : ಆಕರ್ಷಣೀಯವಾಗಿತ್ತು

**ಸಮನ್ವಯ** : ಇಲ್ಲಿ ಉಪಮೇಯವಾದ ಮನೋರಮೆಯ ಹಣೆಯನ್ನು ಉಪಮಾನವಾದ ಬಾಲಚಂದ್ರನಿಗೆ ಹೋಲಿಸಲಾಗಿದ್ದು, ಇಲ್ಲಿ ಅಂತೆ ಎಂಬ ಉಪಮವಾಚಕವಿದ್ದು, ಆಕರ್ಷಣೀಯವಾಗಿತ್ತು ಎಂಬ ಸಮಾನಧರ್ಮವಿದೆ, ಇದು

# ಮೌಲ್ಯಮಾಪನ

## ಘಟಕ ಪರೀಕ್ಷೆ

ಅಂಕಗಳು:೧೦ ಸಮಯ: ೪೫ ನಿಮಿಷ

---

**ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೇ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.** ೩x೧ = ೩

೧. ಶೃತಿ : ವೇದ :: ಭಟ :----------------

೨. ಕುಮಾರ : ಕುಮಾರಿ :: ರಾಜ : ---------------

೩. ಭಕ್ತಿ : ಭಕುತಿ :: ವರ್ಣ : ------------

**ಒಂದು ವಾಕ್ಯದಲ್ಲಿ ಉತ್ತರಿಸಿರಿ** ೩x೧=೩

೪. ನಿಜವಾದ ಬಂಧು ಯಾರು ?

೫. ಆಲದ ಮರದ ಬೀಜ ಭೂಮಿಗೆ ಬಿದ್ದು ಏನಾಗುತ್ತದೆ ?

೬. ರಾಜನಾದವನ ಕರ್ತವ್ಯವೇನು ?

**ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ** ೧x೨=೨

ಪ್ರಜೆಯಂ ----------------------------------------------

----------------------------------------------

----------------------------------------------

----------------------------------------------

----------------------------------------------

--------------------------ಹರಹರಾ ಶ್ರೀ ಚೆನ್ನಸೋಮೇಶ್ವರಾ।।

**ಈ ಕೆಳಗಿನ ಅಲಂಕಾರವನ್ನು ಸಮನ್ವಯಗೊಳಿಸಿ ಅಲಂಕಾರದ ಹೆಸರು ತಿಳಿಸಿ** ೧x೨=೨

೮. ಸೀತೆಯ ಮುಖವು ಕಮಲದ ಹೂವಿನಂತೆ ಮನೋಹರವಾಗಿದೆ.

*******************************************************

ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ

ರೂಪಣಾತ್ಮಕ ಮೌಲ್ಯಮಾಪನ – ೨ ೮ ನೆಯ ತರಗತಿ ಪ್ರಥಮ ಭಾಷೆ ಕನ್ನಡ

ಸಾಧನಾ ಪರೀಕ್ಷೆ – ೨ ಸಮಯ : ೧.೦೦ ಗಂ ಗರಿಷ್ಠ ಅಂಕಗಳು : ೨೦

**ಕೊಟ್ಟಿರುವ ಪ್ರತಿಪ್ರಶ್ನೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಸರಿಯುತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ** **೩x೧=೩**

೧. ಕೊಟ್ಟಿರುವ ಪದಗಳಲ್ಲಿರುವ ಅನ್ಯದೇಶಿಯ ಪದ......

(ಎ) ದೊಡ್ಡದು (ಬಿ) ಬಸ್ಸು (ಸಿ) ಸಣ್ಣ (ಡಿ) ಕಡಿಮೆ

೨. ಕೊಟ್ಟಿರುವ ಪದಗಳಲ್ಲಿ ತದ್ಭವ ರೂಪ ಗುರುತಿಸಿ

(ಎ) ಭಕುತಿ (ಬಿ) ವರ್ಷ (ಸಿ) ಪುಣ್ಯ (ಡಿ) ಪ್ರಾಣ

೩. 'ರಾಜ' ಪದದ ಬಹು ವಚನ ರೂಪ..

(ಎ) ರಾಜಾ (ಬಿ) ರಾಜನು (ಸಿ) ರಾಜರು (ಡಿ) ರಾಜಂಗೆ

**ಕೊಟ್ಟಿರುವ ಪ್ರತಿಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.** **೩x೧=೩**

೪. ವಿದೇಶಗಳಲ್ಲಿ ಅಗ್ಗವಾಗಿ ಸಿಗುವದೇನು ?

೫. ನಿಜವಾದ ಬಂಧು ಯಾರು ?

೬. ಪುರಂದರದಾಸರ ಅಂಕಿತ ಯಾವುದು ?

**ಕೊಟ್ಟಿರುವ ಪ್ರತಿಪ್ರಶ್ನೆಗೂ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.** **೨x೨=೪**

೭.ನಾಗರೀಕತೆಯ ದೊಡ್ಡ ಅನಾಹುತಗಳಾಗಿ ಕಾಣಿಸಿಕೊಳ್ಳುವ ಆಚರಣೆಗಳಾವುವು ?

೮. ಜಪ ಹಾಗೂ ಉಪವಾಸ ವ್ರತಗಳ ಫಲ ಯಾವಾಗ ದೊರೆಯುವದಿಲ್ಲಾ ?

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ, ಕೃತಿಯನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **೧*೨=೨**

೯. ನೇಮಿಚಂದ್ರ

**ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ** **೧x೩=೩**

೧೦."ಸೋದರಿಯ ಸುತೆಯೆಂದು ಎಳೆತನದಲೇ ನನ್ನ ಕರೆತಂದು ಸಾಕಿದಿರಿ"

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **೧x೨=೨**

೧೧.ಪ್ರಜೆಯಂ ಪಾಲಿಸ ------------------------

--------------------------------------

--------------------------------------

----------------------ಶ್ರೀ ಚೆನ್ನ ಸೋಮೇಶ್ವರ

**ಈ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ** **೧x೩=೩**

೧೨. ಮನೋರಮೆಯ ಹಣೆ ಬಾಲಚಂದ್ರನಂತೆ ಆಕರ್ಷಣೀಯವಾಗಿತ್ತು.

*******************************************

## ಸಂಕಲನಾತ್ಮಕ ಮೌಲ್ಯಂಕನ ಪ್ರಶ್ನೆಪತ್ರಿಕೆ – ೧

**ನಿಗದಿಪಡಿಸಿದ ಅವಧಿ – ೨** **ಅಂಕಗಳು – ೪೦**

**( ಈ ಪ್ರಶ್ನೆ ಪತ್ರಿಕೆಯನ್ನು ಮಾದರಿಯಾಗಿ ಬಳಸಬಹುದು )**

---

**ಈ ಕೆಳಗಿನ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರ ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **೩*೧=೩**

೧. 'ಧನವಂತ' ಪದದಲ್ಲಿರುವ ಮಹಾಪ್ರಾಣಕ್ಷರವನ್ನು ಗುರುತಿಸಿ ಬರೆಯಿರಿ. ---------------------------

ಎ) ಧ ಬಿ) ನ ಸಿ) ವ ಡಿ) ತ

೨. 'ಬಂಡಿಯಲ್ಲಿ' ಪದದಲ್ಲಿರುವ ವಿಭಕ್ತಿಯನ್ನು ಹೆಸರಿಸಿ. ---------------------------------

ಎ) ಪ್ರಥಮ ಬಿ) ಚತುರ್ಥಿ ಸಿ) ಷಷ್ಠಿ ಡಿ) ಸಪ್ತಮಿ

೩. ಅಬ್ದುಲ್ ರಹೀಮನಿಗೆ ಮೂವರು ಗಂಡು ಮಕ್ಕಳು. ಗೆರೆ ಎಳೆದ ಪದವು -------------------------

ಎ) ರೂಢನಾಮ ಬಿ) ಸಂಖ್ಯಾವಾಚಕ ಸಿ) ಪ್ರಕಾರವಾಚಕ ಡಿ) ಸಂಖ್ಯೇಯವಾಚಕ

**ಮೊದಲೆರಡು ಪದಗಳಿಗಿರುವ ಸಂಬಂಧ ಗುರುತಿಸಿ ಮೂರನೇ ಪದಕ್ಕೆ ಹೊಂದುವ ನಾಲ್ಕನೇ ಪದ ಬರೆಯಿರಿ.** **೨*೧=೨**

೪. ನ್ಯಗ್ರೋಧ : ಆಲದಮರ : : ಉಡುರಾಜ : ---------------------

೫. ವರ್ಷ : ವರುಷ : : ಪ್ರಾಣ : ----------------------

**ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.** **೧*೩=೩**

೬. ತಂದೆಯನ್ನು ಕರೆತರಲು ಹೋಗುವೆನೆಂದು ಹೇಳಿದವರು ಯಾರು ?

-----------------------------------------------------------------------------------------

೭. ಕನ್ನಡ ತಾಯಿಯ ಬಸಿರ ಹೊನ್ನಗನಿ ಯಾರು ?

-----------------------------------------------------------------------------------------

೮. ನಲಂದ ವಿಶ್ವವಿದ್ಯಾಲಯ ಎಲ್ಲಿತ್ತು ?

-----------------------------------------------------------------------------------------

**ಈ ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **೪*೨=೮**

೯. ಶಾಲಾ ವಾರ್ಷಿಕೋತ್ಸವದಂದು ಕರೀಮ ಮಾಡಿದ ಕೆಲಸವೇನು ?

-----------------------------------------------------------------------------------------

-----------------------------------------------------------------------------------------

-----------------------------------------------------------------------------------------

೧೦. ಗುರುದ್ವಾರಗಳ ಬಳಿ ಸ್ವಯಂಸೇವಕರು ಏನು ಮಾಡುತ್ತಿದ್ದರು ?

-----------------------------------------------------------------------------------------

-----------------------------------------------------------------------------------------

-----------------------------------------------------------------------------------------

೧೧. ಜಪ ಹಾಗೂ ಉಪವಾಸ ವ್ರತಗಳ ಫಲ ಯಾವಾಗ ದೊರೆಯುವುದಿಲ್ಲ ?

-----------------------------------------------------------------------------------------

-----------------------------------------------------------------------------------------

೧೨. ಯುವಕನು ಬಡವರ ಹುಡುಗಿಯನ್ನು ಮದುವೆಯಾಗದಿರಲು ಕಾರಣಗಳೇನು ?

**ಈ ಕೆಳಗೆ ಕೊಟ್ಟ ವಾಕ್ಯಗಳಿಗೆ ಸಂದರ್ಭದೊಡನೆ ವಿವರಿಸಿ.** **೨*೩=೬**

೧೩. "ನನ್ನ ಹತ್ತಿರ ಇರುವುದು ಇದೊಂದೇ ಸೀರೆ" .

೧೪. ಉಡುರಾಜ ಕಳೆಗುಂದಿ ಪೆರ್ಚದಿಹನೇ?

**ಕಾಲ, ಸ್ಥಳ, ಕೃತಿಗಳು ಮತ್ತು ಪ್ರಶಸ್ತಿಗಳೊಂದಿಗೆ ಕೃತಿಕಾರರ ಪರಿಚಯವನ್ನು ವಾಕ್ಯ ರೂಪದಲ್ಲಿ ಬರೆಯಿರಿ.** **೧*೩=೩**

೧೫. ಮಾಸ್ತಿ ವೆಂಕಟೇಶ್ ಅಯ್ಯಂಗಾರ

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ.** **೧*೪=೪**

೧೬. ನಾಡಿಗಾಗಿ ------------------------------------------

--------------------------------------------------

--------------------------------------------------

---------------------------------------- ಪಯಣದಲ್ಲಿ

**ಕೊಟ್ಟಿರುವ ವಾಕ್ಯದ ಅಲಂಕಾರ ಗುರುತಿಸಿ ಸಮನ್ವಯಿಸಿ.** **೧*೩=೩**

೧೮. ಸೀತೆಯ ಮುಖ ಕಮಲದಂತೆ ಅರಳಿತು.

**ಕೆಳಗಿನವುಗಳಲ್ಲಿ ಒಂದರ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.** **೧*೩=೩**

೧೯. ಹಾಸಿಗೆ ಇದ್ದಷ್ಟು ಕಾಲು ಚಾಚು ಅಥವಾ ಅತಿ ಆಸೆ ಗತಿಗೇಡು

**೨೦. ನಿಮ್ಮನ್ನು ಧಾರವಾಡದ ಸರ್ಕಾರಿ ಪ್ರೌಢಶಾಲೆಯ ಸಂಗೀತ / ಸಂಜಯ್ ಎಂದು ಭಾವಿಸಿಕೊಂಡು ಶಾಲೆಯಲ್ಲಿ ಶೌಚಾಲಯ ವ್ಯವಸ್ಥೆ ಮಾಡಿಕೊಡಬೇಕೆಂದು ಕೋರಿ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಒಂದು ಮನವಿ ಪತ್ರ ಬರೆಯಿರಿ.** **೧*೫=೫**

************************************************

# ಭಾಗ – 2

**ಗದ್ಯ – ೫ . ಹೂವಾದ ಹುಡುಗಿ – ( ಎ. ಕೆ . ರಾಮಾನುಜನ್ )**

**ನಿಗದಿಪಡಿಸಿದ ಅವಧಿಗಳು – ೭**



## ಕೃತಿಕಾರರ ಪರಿಚಯ :

ಎ.ಕೆ.ರಾಮಾನುಜನ : ಕವಿ, ಚಿಂತಕ, ಪ್ರಾಧ್ಯಾಪಕ, ಜಾನಪದ ತಜ್ಞ. ಇವರು ಪೂರ್ಣ ಹೆಸರು ಅತ್ತಿಪಟ ಕೃಷ್ಣಸ್ವಾಮಿ, ರಾಮಾನುಜನ್. ಇವರು ಮಾರ್ಚ-೧೬-೧೯೨೯ರಲ್ಲಿ ಮೈಸೂರಿನಲ್ಲಿ ಜನಿಸಿದರು. 'ಹೊಕ್ಕಳಲ್ಲಿ ಹೂವಿಲ್ಲ ಮತ್ತು ಇತರ ಕವಿತೆಗಳು; 'ಕುಂಟೋಬಿಲ್ಲೆ; ಮತ್ತೊಬ್ಬನ ಆತ್ಮ ಚರಿತ್ರೆ' ಪ್ರಸಿದ್ಧ ಕೃತಿಗಳು. ಕನ್ನಡ ವಚನ ಸಾಹಿತ್ಯವನ್ನು ' ಸ್ಪೀಕಿಂಗ್ ಆಫ್ ಶಿವ' ಎಂದು ಅನುವಾದಿಸಿದ್ದಾರೆ. ೧೯೭೬ರಲ್ಲಿ ಭಾರತ ಸರ್ಕಾರವು ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ೧೯೮೩ರಲ್ಲಿ ಪ್ರಸಿದ್ಧ 'ಮ್ಯಾಕ್ ಅರ್ಥರ್ ಪೆಲೋಷಿಫ್' ಗೌರವ ಸಂದಿದೆ. ಪ್ರಸ್ತುತ 'ಹೂವಾದ ಹುಡುಗಿ' ಜನಪದ ಕಥೆಯನ್ನು ಸಾಲು ಸಂಪಿಗೆ ನೆರಳು' ಕೃತಿಯಿಂದ ಆಯ್ದು ನಿಗಧಿಪಡಿಸಿದೆ. ಇವರು ೧೯೯೩ರಲ್ಲಿ ನಿಧನರಾದರು.

## ಅಭ್ಯಾಸ ಮಾದರಿ

| ಹಂತ–೧ ಪ್ರಮುಖ ಅಂಶಗಳನ್ನು ಗುರ್ತಿಸುವುದು | |
|---|---|
| ಲೇಖಕರ ಹೆಸರು | ಎ.ಕೆ.ರಾಮಾನುಜನ್<br>ಅತ್ತಿಪಟ ಕೃಷ್ಣಸ್ವಾಮಿ, ರಾಮಾನುಜನ್. |
| ಸ್ಥಳ –ಕಾಲ | ಮೈಸೂರು ಜಿಲ್ಲೆಯಲ್ಲಿ ಮಾರ್ಚ-೧೬-೧೯೨೯ರಲ್ಲಿ |
| ಕೃತಿಗಳು | 'ಹೊಕ್ಕುಳಲ್ಲಿ ಹೂವಿಲ್ಲ ಮತ್ತು ಇತರ ಕವಿತೆಗಳು' ' ಕುಂಟೋ ಬಿಲ್ಲೆ; ಮತ್ತೋಬ್ಬನ ಆತ್ಮ ಚರಿತ್ರೆ; |
| ಪ್ರಶಸ್ತಿಗಳು | ಪದ್ಮಶ್ರೀ, ಮ್ಯಾಕ್ ಅರ್ಥರ ಫೆಲೋಷಿಪ್, ಗೌರವ |

| ಹಂತ–೨ ಬರೆಯುವ ವಿಧಾನವನ್ನು ರೂಢಿಸುವುದು |
|---|
| ಅತ್ತಿಪಟ ಕೃಷ್ಣಸ್ವಾಮಿ, ರಾಮಾನುಜನ್ ಎಂದೇ ಪ್ರಸಿದ್ಧರಾದ ಎ.ಕೆ ರಾಮಾನುಜನ್ ಅವರು |
| ಮೈಸೂರು ಜಿಲ್ಲೆಯಲ್ಲಿ ಮಾರ್ಚ-೧೬-೧೯೨೯ರಲ್ಲಿ ಜನಿಸಿದರು. 'ಹೊಕ್ಕುಳಲ್ಲಿ ಹೂವಿಲ್ಲ |
| ಮತ್ತು ಇತರ ಕವಿತೆಗಳು' ' ಕುಂಟೋ ಬಿಲ್ಲೆ; ಮತ್ತೋಬ್ಬನ ಆತ್ಮ ಚರಿತ್ರೆ ಪ್ರಮುಖ ಕೃತಿಗಳಾಗಿವೆ. |
| ಪದ್ಮಶ್ರೀ, ಮ್ಯಾಕ್ ಅರ್ಥರ ಫೆಲೋಷಿಪ್, ಗೌರವ ಸಂದಿದೆ |

## ಹಂತ ೩– ಸ್ವತಂತ್ರವಾಗಿ ಬರೆಯುವುದು

ಎ.ಕೆ.ರಾಮಾನುಜನ : ಕವಿ, ಚಿಂತಕ, ಪ್ರಾಧ್ಯಾಪಕ, ಜಾನಪದ ತಜ್ಞ. ಇವರು ಪೂರ್ಣ ಹೆಸರು ಅತ್ತಿಪಟ ಕೃಷ್ಣಸ್ವಾಮಿ, ರಾಮಾನುಜನ್. ಇವರು ಮಾರ್ಚ-೧೬-೧೯೨೯ರಲ್ಲಿ ಮೈಸೂರಿನಲ್ಲಿ ಜನಿಸಿದರು. 'ಹೊಕ್ಕಳಲ್ಲಿ ಹೂವಿಲ್ಲ ಮತ್ತು ಇತರ ಕವಿತೆಗಳು; 'ಕುಂಟೋಬಿಲ್ಲೆ; ಮತ್ತೊಬ್ಬನ ಆತ್ಮ ಚರಿತ್ರೆ' ಪ್ರಸಿದ್ಧ ಕೃತಿಗಳು. ಕನ್ನಡ ವಚನ ಸಾಹಿತ್ಯವನ್ನು ' ಸ್ಪೀಕಿಂಗ್ ಆಫ್ ಶಿವ' ಎಂದು ಅನುವಾದಿಸಿದ್ದಾರೆ. ೧೯೭೬ರಲ್ಲಿ ಭಾರತ ಸರ್ಕಾರವು ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ೧೯೮೩ರಲ್ಲಿ ಪ್ರಸಿದ್ಧ 'ಮ್ಯಾಕ್ ಅರ್ಥರ್ ಪೆಲೋಷಿಫ್' ಗೌರವ ಸಂದಿದೆ. ಪ್ರಸ್ತುತ 'ಹೂವಾದ ಹುಡುಗಿ' ಜನಪದ ಕಥೆಯನ್ನು ಸಾಲು ಸಂಪಿಗೆ ನೆರಳು' ಕೃತಿಯಿಂದ ಆಯ್ದು ನಿಗಧಿಪಡಿಸಿದೆ. ಇವರು ೧೯೯೩ರಲ್ಲಿ ನಿಧನರಾದರು.

## ಅಭ್ಯಾಸ ಹಾಳೆ

| ಹಂತ ೧ –ಪ್ರಮುಖ ಅಂಶಗಳನ್ನು ಗುರುತಿಸುವುದು | |
|---|---|
| ಲೇಖಕರ ಹೆಸರು | |
| ಸ್ಥಳಕಾಲ – | |
| ಕೃತಿಗಳು | |
| | |
| ಪ್ರಶಸ್ತಿಗಳುಗೌರವ/ | |

### ಹಂತ ೨ ಬರೆಯುವ ವಿಧಾನವನ್ನು ರೂಡಿಸುವುದು

…………………………………………………….ಜಾನಪದ ತಜ್ಞ……………………….ರವರು

ಮಾರ್ಚ್…………….ರಲ್ಲಿ, ,ಜನಿಸಿದರು………………………….ಇವರು……………………..……..ಮುಂತಾದ

ಕೃತಿಗಳನ್ನು ಬರೆದಿದ್ದಾರೆ. ಇವರಿಗೆ…………………………………………………………………….ಮುಂತಾದ

ಪ್ರಶಸ್ತಿಗಳು ಬಂದಿವೆ.

### ಹಂತ ೩–ಸ್ವತಂತ್ರವಾಗಿ ಬರೆಯುವುದು

| |
|---|
| |
| |
| |
| |
| |
| |
| |

## ಪಾಠದ ಪ್ರಮುಖ ಅಂಶಗಳು

1. ಒಂದು ಪಟ್ಟಣ, ಅಲ್ಲೊಬ್ಬ ದೊರೆಯಿದ್ದ. ಆತನಿಗೆ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಮಗ ಇದ್ದನು .ದೊರೆಯ ಮೊದಲನೆಯ ಹೆಣ್ಣು ಮಗಳಿಗೆ ಲಗ್ನವಾಗಿತ್ತು.
2. ಅದೇ ಊರಿನಲ್ಲಿ ಒಬ್ಬ ಮುದುಕಿ ಇದ್ದಳು ಅವಳಿಗೆ ಇಬ್ಬರು ಹೆಣ್ಣು ಮಕ್ಕಳಿದ್ದರು.
3. ಅವರದು ಬಡತನ ಕುಟುಂಬವಾಗಿತ್ತು. ಅವರು ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದರು.
4. ಅವರು ಒಂದು ಉಪಾಯ ಮಾಡಿ ಹೂವಿನ ಗಿಡವಾಗಿ ಅದರಿಂದ ಬಂದ ಹಣವನ್ನು ಜೋಪಾನ ಮಾಡಿ ಇಡುತ್ತಿದ್ದರು.
5. ಹೂವಿನ ಗಿಡವಾಗುವ ಹುಡುಗಿಯು ಮರದ ಮೇಲೆ ಕೂತಾಗ ದೊರೆಯ ಮಗ ನೋಡಿ ಆ ಹುಡುಗಿಯನ್ನು ಮದುವೆಯಾಗಿ ಸಂತೋಷವಾಗಿದ್ದರು.
6. ಒಂದು ದಿವಸ ದೊರೆಯ ಕಿರಿಯ ಮಗಳು ಸುರೆ ಹೊನ್ನೆಯ ತೋಟಕ್ಕೆ ಉಯ್ಯಾಲೆಯಾಡಲು ಹೋದರು.
7. ಅಲ್ಲಿ ಜೋರಾದ ಗಾಳಿ ಮಳೆಗೆ ಹೂವಿನ ಗಿಡವಾಗಿದ್ದ ಅತ್ತೆಯು ಆ ಮಳೆಗೆ ತನ್ನ ದೇಹವೆಲ್ಲಾ ಅರ್ಧಂಬರ್ಧವಾಗಿ ಒಂದು ಮೋರಿಯಲ್ಲಿ ಹೋಗಿ ಬಿದ್ದಳು.
8. ಅದನ್ನು ನೋಡಿ ಒಬ್ಬ ದಾರಿಹೋಕ ತಂದು ಅರಮನೆ ಮಂಟಪದಲ್ಲಿ ಬಿಟ್ಟುಹೋದ.
9. ಅವಳನ್ನು ನೋಡಿದ ದಾದಿಯರು ಅವಳನ್ನು ಕರೆತಂದು ಔಷದ ಹಾಕಿ ವಾಸಿ ಮಾಡಿದರು.
10. ದೊರೆಯ ಮಗ ದೇಶ ದೇಶವೆಲ್ಲ ತಿರುಗಿ ತನ್ನ ಅಕ್ಕನ ಪಟ್ಟಣಕ್ಕೆ ಬಂದನು.
11. ಮಾರನೆಯ ದಿನ ದಾದಿಯರೆಲ್ಲ ಸೇರಿ ಇಬ್ಬರನ್ನು ಶೃಂಗಾರ ಮಾಡಿ ಮಂಚದ ಮೇಲೆ ಕೂರಿಸಿದರು.
12. ಆಗ ದೊರೆಯ ಮಗ ನೋಡಿ ಆಗ ಅವಳು .ಇವಳೆ ನನ್ನ ಹೆಂಡತಿ ಎಂದು ಗೊತ್ತಾಗಿ ಎರಡು ತಂಬಿಗೆ ನೀರು ತಂದು ಹಾಕಿದ ಹೂವಿನ ಗಿಡವಾಗಿ ಮತ್ತೆ ಎಲೆಗಳನ್ನು ಸೇರಿಸಿದ.

**ಅಭ್ಯಾಸ ಹಾಳೆ:** ಮೇಲಿನ ಪ್ರಮುಖ ಅಂಶಗಳ ಕ್ರಮ ಸಂಖ್ಯೆಗಳನ್ನು ತೆಗೆದು ಹಾಕಿ ವಾಕ್ಯ ರೂಪದಲ್ಲಿ ಜೋಡಿಸಿ ಬರೆಯಿರಿ.

## ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೋತ್ತರಗಳು

೧. ಹೂವಿನ ಗಿಡವಾದವಳು ಯಾರು?

ಉತ್ತರ:- ಮುದುಕಿಯ ಕಿರಿ ಮಗಳು.

೨. ದೊರೆಯ ಹೆಂಡತಿ ಹೂವಿಗೆ ಎಷ್ಟು ಹಣ ಕೊಟ್ಟಳು?

ಉತ್ತರ:- ದೊರೆಯ ಹೆಂಡತಿ ಹೂವಿಗೆ ಒಂದು ಮೊಗೆ ಹಣ ಕೊಟ್ಟಳು.

೩. ಹೂವಾಗುವ ಹುಡುಗಿಯ ವಿಚಾರವನ್ನು ದೊರೆಯ ಮಗ ಯಾರ ಬಳಿ ಹೇಳಿದ?

ಉತ್ತರ:-ದೊರೆಯ ಮಗ ಹೂವಾಗುವ ಹುಡುಗಿಯ ವಿಚಾರವನ್ನು ಮಂತ್ರಿ ಮಗನ ಬಳಿ ಹೇಳಿದ.

೪. ದೊರೆಯ ಚಿಕ್ಕ ಮಗಳು ಗೆಳತಿಯರೊಂದಿಗೆ ಎಲ್ಲಿಗೆ ಹೋದಳು?

ಉತ್ತರ:-ದೊರೆಯ ಚಿಕ್ಕ ಮಗಳು ಗೆಳತಿಯರೊಂದಿಗೆ ಸುರೆ ಹೊನ್ನೆಯ ತೋಟಕ್ಕೆ ಹೋದಳು.

೫. ಪಟ್ಟಣಕ್ಕೆ ಹಿಂದಿರುಗುವಾಗ ಅಕ್ಕ ತಮ್ಮನಿಗೆ ಏನು ಉಡುಗೊರೆ ನೀಡಿದಳು?

ಉತ್ತರ:-ಪಟ್ಟಣಕ್ಕೆ ಹಿಂದಿರುಗುವಾಗ ಅಕ್ಕ ತಮ್ಮನಿಗೆ ಬೇಕಾದಷ್ಟು ಐಸಿರಿಯ ಉಡುಗೊರೆ ನೀಡಿದಳು.

| ಒಂದು ಮೊಗೆ, ಮಂತ್ರಿ ಮಗ, ಕಿರಿಯ ಮಗಳು, ಸುರ ಹೊನ್ನೆ, ಐಸಿರಿ. |
|---|

### ಚಟುವಟಿಕೆ

- ಮೇಲಿನ ಅಂಶಗಳನ್ನು ಆಯ್ದುಕೊಂಡು ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಉತ್ತರಗಳಲ್ಲಿ ನೀಡಿದ ಬಿಟ್ಟ ಸ್ಥಳಗಳನ್ನು ತುಂಬಿರಿ.

೧. ಹೂವಿನ ಗಿಡವಾದಳು -------------------------

೨. ದೊರೆಯ ಹೆಂಡತಿ ಹೂವಿಗೆ ---------------------- ಹಣ ಕೊಟ್ಟಳು.

೩. ದೊರೆಯ ಮಗ ಹೂವಾಗುವ ಹುಡುಗಿಯ ವಿಚಾರವನ್ನು --------------------- ಬಳಿ ಹೇಳಿದನು.

೪. ದೊರೆಯ ಚಿಕ್ಕ ಮಗಳು ಗೆಳತಿಯರೊಂದಿಗೆ -------------------------- ತೋಟಕ್ಕೆ ಹೊದಳು.

೫. ಪಟ್ಟಣಕ್ಕೆ ಹಿಂದಿರುಗುವಾಗ ಅಕ್ಕ ತಮ್ಮನಿಗೆ --------------------- ಉಡುಗೊರೆ ನೀಡಿದಳು.

### ಈ ಗದ್ಯಭಾಗದಲ್ಲಿ ಬಂದಿರುವ ಸಾಂದರ್ಭಿಕ ಹೇಳಿಕೆಗಳು

ಆಯ್ಕೆ :- ಪ್ರಸ್ತುತ 'ಹೂವಾದ ಹುಡುಗಿ' ಜನಪದ ಕಥೆಯನ್ನು ಶ್ರೀ ಎ.ಕೆ. ರಾಮಾನುಜನ್ ಅವರು ಸಂಪಾದಿಸಿರುವ 'ಸಾಲು ಸಂಪಿಗೆ ನೆರಳು' ಕೃತಿಯಿಂದ ಆಯ್ದು ನಿಗದಿ ಪಡಿಸಿದೆ.

| ಗದ್ಯ | ಸಾಂದರ್ಭಿಕ ಪ್ರಶ್ನೆಗಳು | ಯಾರು? ಯಾರಿಗೆ? | ಸಂದರ್ಭ |
|---|---|---|---|
| ಹೂವಾದ ಹುಡುಗಿ | "ಅಕ್ಕಯ್ಯ ಅಮ್ಮನಿಗೆ ಹೇಳಬೇಡ ಮುಚ್ಚಿಡು" | ತಂಗಿ, ಅಕ್ಕನಿಗೆ | ತಾಯಿಯು ಕೂಲಿ ಮಾಡಿ ಸಾಕಲು ಕಷ್ಟ ಪಡುತ್ತಿದ್ದಾಗ |
| | " ಈ ಸಂಪತ್ತಿಗೇಕೆ ನನ್ನ ಮದುವೆ ಆದಿರಿ? " | ಹೂವಾಗುವ ಹುಡುಗಿ, ದೊರೆಯ ಮಗನಿಗೆ | ಏಕಾಂತದಲ್ಲಿ ಏನು ಮಾತಾನಾಡದೇ ಮೌನವಾಗಿದ್ದು ಕಂಡು |
| | " ಯಾರಾದರು ಅನ್ನ ನೀರು ಕೊಟ್ಟರೆ ಜೀವ ಉಳಿಸಿಕೊ " | ಗಾಡಿಯೊಬ್ಬನು, ಹೂವಾದ ಹುಡುಗಿಗೆ | ಗಾಡಿಯೊಬ್ಬನು ಊರಿನ ಹಾಳು ಮಂಟಪದಲ್ಲಿ ಬಿಟ್ಟಾಗ |
| | "ಅವಳನ್ನು ನೋಡಿದರೆ ನಿಮ್ಮ ತಮ್ಮನ ಹೆಂಡತಿಯಂತೆ ಕಾಣ್ತಾಳೆ " | ದಾದಿಯರು, ರಾಣಿಗೆ | ಅರ್ಧಂಬರ್ಧ ದೇಹವಾಗಿ ಬಿದ್ದಿದ್ದ ಹುಡುಗಿಯನ್ನು ಕಂಡಾಗ |

೧. "ಈ ಸಂಪತ್ತಿಗೇಕೆ ನನ್ನ ಮದುವೆ ಆದಿರಿ"?

ಆಯ್ಕೆ:- ಈ ಮೇಲಿನ ವಾಕ್ಯವನ್ನು ಶ್ರೀ ಎ ಕೆ ರಾಮಾನುಜನ್ ರವರು ಸಂಪಾದಿಸಿರುವ ಸಾಲು ಸಂಪಿಗೆ ನೆರಳು ಕೃತಿಯಿಂದ ಆಯ್ದು ಹೂವಾದ ಹುಡುಗಿ ಎಂಬ ಜನಪದ ಕಥೆಯಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ:- ಹೂವಿನ ಗಿಡವಾಗಿ ಪರಿವರ್ತನೆ ಗೊಳ್ಳುತ್ತಿದ್ದ ಹುಡುಗಿಯನ್ನು ಆಸೆಪಟ್ಟು ದೊರೆಯ ಮಗನು ಏಕಾಂತದಲ್ಲಿ ಏನು ಮಾತನಾಡದೆ . ಮೌನವಾಗಿ ಅವನಷ್ಟಕ್ಕೆ ಅವನಿದ್ದುದ್ದನ್ನು ಕಂಡು ಹುಡುಗಿಯು ಈ ಮೇಲಿನಂತೆ ಹೇಳುತ್ತಾಳೆ. .

ಸ್ವಾರಸ್ಯ:- ಮದುವೆಯಾದರೂ ಏಕಾಂತದಲ್ಲಿ ಮಾತನಾಡದೆ ಮೌನವಾಗಿದ್ದ ದೊರೆಯ ಮಗನ ಬಗೆಗಿನ ಹುಡುಗಿಯ ಬೇಸರ ಬಹು ಸ್ವಾರಸ್ಯ ಪೂರ್ಣವಾಗಿದೆ.

೧. ಅಭ್ಯಾಸ ಚಟುವಟಿಕೆಗಳು ಕೊಟ್ಟಿರುವ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ

ಮಾದರಿ:- **ಆಸಕ್ತಿ** :- ನನಗೆ ಓದುವುದರಲ್ಲಿ ತುಂಬಾ ಆಸಕ್ತಿಯಿದೆ.

| | |
|---|---|
| ೧. ಧ್ಯಾನ ಮಾಡು | |
| ೨. ಬಡವರು | |
| ೩. ಸಂಪಾದನೆ | |
| ೪. ಉಡುಗೊರೆ | |

೨. ಕೆಳಗಿನ ಸೂಚನೆಗಳನ್ನು ಗಮನಿಸಿ ಪದಗಳಿಗೆ ಗ್ರಾಂಥಿಕ ರೂಪವನ್ನು ಆರಿಸಿ ಬರೆಯಿರಿ

೧. 'ತಕ್ಕೊಂಡು' ಪದದ ಗ್ರಾಂಥಿಕ ರೂಪ------------------

ಎ) ತೆಗೆದುಕೊಂಡು ಬಿ) ತಗಿದುಕೊಂಡು ಸಿ) ತೆಗೆದುಕೊಂಡು ಡಿ) ತೆಗೆದು

೨. 'ಮಾರ್ಕೊಂಡು' ಪದದ ಗ್ರಾಂಥಿಕ ರೂಪ --------------

ಎ) ಮಾರಿ ಬಿ) ಮಾರಕೊಂಡ ಸಿ) ಮಾರಿಕೊಂಡು ಡಿ) ಮಾರಗೊಂಡ

೩. 'ಒಪ್ಕತಾಳೆ' ಪದದ ಗ್ರಾಂಥಿಕ ರೂಪ --------------

ಎ) ಒಪ್ಪು ಬಿ) ಒಪ್ಪಿಕೊ ಸಿ) ಒಪ್ಪಿಕೊಳ್ಳು ಡಿ) ಒಪ್ಪಿಕೊಳ್ಳುತ್ತಾಳೆ.

೪. ' ಕೇಳ್ಕೊಂಡು' ಪದದ ಗ್ರಾಂಥಿಕ ರೂಪ --------------

ಎ) ಕೇಳು ಬಿ) ಕೇಳಿಗೊಂಡು ಸಿ) ಕೇಳಿಕೊಂಡು ಡಿ) ಕೇಳಿಕೊ

## ಘಟಕ ಪರೀಕ್ಷೆ – ೧೨ ( ಹೂವಾದ ಹುಡುಗಿ )

ನಿಗದಿಪಡಿಸಿದ ಅವಧಿ – ೧

ಅಂಕಗಳು – ೧೦

---

ಅ. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. ೨*೧=೨

೧.ಅನ್ವರ್ಥನಾಮಕ್ಕೆ ಒಂದು ಉದಾಹರಣೆ

ಎ) ಕಾಲ ಬಿ) ನಕುಲ ಸಿ) ವ್ಯಾಪಾರಿ ಡಿ) ಬೆಟ್ಟ

ಉತ್ತರ : ------------------------------------

೨.ಇದು ಉತ್ತಮ ಪುರುಷ ಸರ್ವನಾಮ ಪದವಾಗಿದೆ.

ಎ) ಅವನು ಬಿ) ನಾನು ಸಿ) ರಾಜ ಡಿ) ನೀವು

ಉತ್ತರ: ------------------------------------

ಆ. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ. ೧*೧=೧

೩. ಗುಮ್ಮಾಗಿ : ಸುಮ್ಮನೆ : : ಗೋಸಾಯಿ :-------------

ಇ. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. ೨*೧=೨

೪. ದೊರೆಯ ಹೆಂಡತಿ ಹೂವಿಗೆ ಎಷ್ಟು ಹಣ ಕೊಟ್ಟಳು ?

ಉತ್ತರ :--------------------------------------------------------------------------------------------

೫. ದೊರೆಯ ಚಿಕ್ಕ ಮಗಳು ಗೆಳತಿಯರೊಂದಿಗೆ ಎಲ್ಲಿಗೆ ಹೋದಳು ?

ಉತ್ತರ :--------------------------------------------------------------------------------------------

ಈ .ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. ೧*೨=೨

೬. ತಂಗಿ ಹೇಗೆ ಹೂವಿನ ಗಿಡವಾಗುತ್ತಿದ್ದಳು ?

ಉತ್ತರ :--------------------------------------------------------------------------------------------

------------------------------------------------------------------------------------------------------

ಉ . ಕೊಟ್ಟಿರುವ ವಾಕ್ಯಕ್ಕೆ ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿರಿ. ೧*೩=೩

೭. "ಯಾರಾದರೂ ಅನ್ನ ನೀರು ಕೊಟ್ಟರೆ ಜೀವ ಉಳಿಸಿಕೋ"

ಆಯ್ಕೆ:--------------------------------------------------------------------------------------------

ಸಂದರ್ಭ:--------------------------------------------------------------------------------------------

------------------------------------------------------------------------------------------------------

ಸ್ವಾರಸ್ಯ:--------------------------------------------------------------------------------------------

------------------------------------------------------------------------------------------------------

------------------------------------------------------------------------------------------------------

********

# ಪದ್ಯ ೫ : ಬಹುಮಾನ – ( ಕುವೆಂಪು )

## ನಿಗದಿಪಡಿಸಿದ ಅವಧಿಗಳು – ೭



ಕೃತಿಕಾರರ ಪರಿಚಯ

**ರಾಷ್ಟ್ರ ಕವಿ ಕುವೆಂಪು** ಅವರು ೨೯ ಡಿಸೆಂಬರ್ **೧೯೦೪ ರಂದು** ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ **ಕುಪ್ಪಳ್ಳಿಯಲ್ಲಿ** ಜನಿಸಿದರು. **ಪಾಂಚಜನ್ಯ, ಪಕ್ಷಿಕಾಶಿ, ಕೊಳಲು, ಅಗ್ನಿಹಂಸ , ಅನಿಕೇತನ** ಮುಂತಾದ **ಕವನ ಸಂಕಲನಗಳ**ನ್ನು ರಚಿಸಿದ್ದಾರೆ.

**ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು** ಇವರ **ಎರಡು ಕಾದಂಬರಿಗಳು,** ಇವರ **'ಶ್ರೀ ರಾಮಾಯಣ ದರ್ಶನಂ' ಕೃತಿಗೆ ಜ್ಞಾನಪೀಠ ಪ್ರಶಸ್ತಿ** ಲಭಿಸಿದೆ. ಕರ್ನಾಟಕ ರತ್ನ, ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪದ್ಮಭೂಷಣ ಮುಂತಾದ ಹಲವು ಪ್ರಶಸ್ತಿಗಳು ಇವರಿಗೆ ದೊರಕಿವೆ. ರಾಷ್ಟ್ರಕವಿ ಎಂಬ ಹೆಸರುವಾಸಿಯಾಗಿದ್ದಾರೆ. ಪ್ರಸ್ತುತ ಕವಿತೆಯನ್ನು ಕುವೆಂಪು ಅವರ ನವಿಲು ಕವನ ಸಂಕಲನದಿಂದ ತೆಗೆದುಕೊಳ್ಳಲಾಗಿದೆ.

### ಅಭ್ಯಾಸಕ್ಕಾಗಿ :

| ಹಂತ ೧– | |
|---|---|
| ಕವಿ ಸಾಹಿತಿಗಳ ಹೆಸರು/ | |
| ಸ್ಥಳಕಾಲ – | |
| ಕೃತಿಗಳು | |
| | |
| ಬಿರುದು/ ಪ್ರಶಸ್ತಿಗಳು/ | |
| | |

### ಹಂತ ೨ –

----------------ರಾಷ್ಟ್ರಕವಿ------------------------- ರವರು ರ----------------------------

ರಲ್ಲಿ----------------------ಜನಿಸಿದರು. ತಾವು ಬರೆದ ಕೃತಿಗೆ ----------------------------------

---------------------------ಪ್ರಶಸ್ತಿಯನ್ನು ಪಡೆದರು--------------------------- .

ಸಂಕಲ---------------------------------, ಮುಂತಾದ ಕವನ ಸಂಕಲನಗಳನ್ನು ಪ್ರಕಟಿಸಿದರು--------------------------- .

ಮತ್ತು --------------------------ಇವರ ಕಾದಂಬರಿಗಳು ಹಲವು ಪ್ರಶಸ್ತಿಗಳು ಸಂದಿವೆ.

| |
|---|
| |
| |
| |
| |

## ಈ ಪದ್ಯ ಭಾಗದ ಪ್ರಮುಖ ಅಂಶಗಳು

1. ಕುಹೂ ಕುಹೂ ಎಂಬ ಕೋಕಿಲ ವಾಣಿಗೆ ಜಗತ್ತು ಜಮ್ಮೆಂದಿತು.
2. ಕಾನನ ಪರ್ವತ ಸಾಲುಗಳು ಕೋಗಿಲೆಯ ಕೂಗನ್ನು ಮಾರ್ದನಿಸಿತು.
3. ಗಾನವನ್ನು ಕೇಳಿದ ನೀಲಾಕಾಶ ಅದರ ಕೂಗನ್ನು ಮಾತಾಡದೆ ಬಣ್ಣಿಸುತ್ತಿತ್ತು.
4. ಕಣಿವೆಯಲ್ಲಿದ್ದ ಸರೋವರ ಕೋಗಿಲೆಯ ಗಾನಕ್ಕೆ ತೆರೆಗಳ ಚಪ್ಪಾಳೆ ಹಾಕುವ ಮೂಲಕ ಕೋಗಿಲೆಯ ಗಾನಕ್ಕೆ ಸ್ಪಂದಿಸಿದವು.
5. ಕೋಗಿಲೆಯ ಕೂಗನ್ನು ಆಲಿಸಿದ ಮನುಷ್ಯ "ಮಲೆಗಳಲುಲಿಯುವ ಓ ಕೋಗಿಲೆಯೇ, ಬಲು ಚೆಲುವಿದೆ ನಿನ್ನೀಗಾನ ಎಂದು ಹೇಳಲಾಗಿದೆ.
6. ನೀನು ಇಂಗ್ಲೀಷ್ ನಲ್ಲಿ ಹಾಡಿದರೆ ನೋಬೆಲ್ ಪ್ರಶಸ್ತಿ ಬಂದೀತೆಂದು ಕವಿ ಹೇಳುತ್ತಾನೆ.
7. ಕೋಗಿಲೆ ಹೇಳಿತು ಅರಣ್ಯ ರೋಧನವಿದೆ, ಸುಮ್ಮನೆ ಹಾಡುವೆ ಇಲ್ಲಿ ಕೇಳುವವರು ಯಾರಿಲ್ಲಿ ಎಂದು ಹೇಳಿತು

## ಅಭ್ಯಾಸ ಹಾಳೆ

ಮೇಲಿನ ಪ್ರಮುಖ ಅಂಶಗಳ ಕ್ರಮ ಸಂಖ್ಯೆಗಳನ್ನು ತೆಗೆದುಹಾಕಿ ವಾಕ್ಯ ರೂಪದಲ್ಲಿ ಜೋಡಿಸಿ ಬರೆಯಿರಿ.

## ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೋತ್ತರಗಳು

1. ಜಗತ್ತು ಜುಮ್ಮೆಂದುದು ಯಾವ ಧ್ವನಿಗೆ?

ಉತ್ತರ :ಕುಹೂ ಕುಹೂ ಎಂಬ ಕೋಕಿಲ ವಾಣಿಗೆ ಜಗತ್ತು ಜುಮ್ಮೆಂದಿತು.

2. ಕೋಗಿಲೆಯ ಕೂಗನ್ನು ಯಾವುದು ಮಾರ್ದನಿಸಿತು?

ಉತ್ತರ :ಕಾನನ ಪರ್ವತ ಸಾಲುಗಳು ಕೋಗಿಲೆಯ ಕೂಗನ್ನು ಮಾರ್ದನಿಸಿತು.

3. ಗಾನವನ್ನು ಕೇಳಿದ ನೀಲಾಕಾಶ ಏನು ಮಾಡಿತು?

ಉತ್ತರ : ಗಾನವನ್ನು ಕೇಳಿದ ನೀಲಾಕಾಶ ಕೋಗಿಲೆಯ ಕೂಗನ್ನು ಮಾತಾಡದೆ ಬಣ್ಣಿಸುತ್ತಿತ್ತು.

4. ಕಣಿವೆಯಲ್ಲಿದ್ದ ಸರೋವರ ಕೋಗಿಲೆಯ ಗಾನಕ್ಕೆ ಹೇಗೆ ಪ್ರತಿಕ್ರಿಯೆ ಕೊಟ್ಟಿತು?

ಉತ್ತರ : ಕಣಿವೆಯಲ್ಲಿದ್ದ ಸರೋವರ ಕೋಗಿಲೆಯ ಗಾನಕ್ಕೆ ತೆರೆಗಳ ಚಪ್ಪಾಳೆ ಹಾಕಿತು.

5. ಕೋಗಿಲೆಯ ಕೂಗನ್ನು ಆಲಿಸಿದ ಮನುಷ್ಯ ಏನೆಂದು ಹೇಳಿದನು?

ಉತ್ತರ : ಕೋಗಿಲೆಯ ಕೂಗನ್ನು ಆಲಿಸಿದ ಮನುಷ್ಯ ಮಲೆಗಳಲುಲಿಯುವ ಕೋಗಿಲೆಯೇ ಬಲು ಚೆಲುವಿದೆ ನಿನ್ನೀ ಗಾನ !ಇಂಗ್ಲೀಷಿಗೆ ತರ್ಜುಮೆ ಮಾಡಿದರೆ ನೊಬೆಲ್ ಬಹುಮಾನ ದೊರೆಯುತ್ತದೆ ಎಂದು ಹೇಳಿದನು .

6. ಮನುಷ್ಯನ ಮಾತಿಗೆ ಕೋಗಿಲೆ ಕೊಟ್ಟ ಉತ್ತರವೇನು ?

ಉತ್ತರ :ಮನುಷ್ಯನ ಮಾತಿಗೆ ಕೋಗಿಲೆ ಕಿವಿಗೊಡದೆ ಕುಹೂ ಕುಹೂ ಎಂದು ಹಾಡುವ ಮೂಲಕ ಉತ್ತರ ಕೊಟ್ಟಿತು

## ಚಟುವಟಿಕೆ

**ಈ ಕೆಳಗೆ ನೀಡಿರುವ ಸುಳಿವು ಪದಗಳನ್ನು ಬಳಸಿಕೊಂಡು ಹೊಂದಿಸಿ ಬರೆಯಿರಿ.**

ಕೋಕಿಲ ವಾಣಿಗೆ ,ಬಣ್ಣಿಸುತ್ತಿತ್ತು, ಕಾನನ ಪರ್ವತ, ಕುಹೂ ಕುಹೂ, ತೆರೆಗಳ ಚಪ್ಪಾಳೆ

| | ಎ | ಬಿ |
|---|---|---|
| ೧ | ಜಗತ್ತು ಜುಮ್ಮೆಂದುದು | |
| ೨ | ಮಾರ್ದನಿಸಿತು | |
| ೩ | ನೀಲಾಕಾಶ | |
| ೪ | ಕಣಿವೆಯಲ್ಲಿದ್ದ ಸರೋವರ | |
| ೫ | ಕೋಗಿಲೆ ಕೊಟ್ಟ ಉತ್ತರ | |

### ➤ ಪದ್ಯ ಭಾಗದಲ್ಲಿ ಬಂದಿರುವ ಸಾಂದರ್ಭಿಕ ಹೇಳಿಕೆಗಳು

ಆಯ್ಕೆ–: ಈ ವಾಕ್ಯವನ್ನು ಕುವೆಂಪುರವರು 'ನವಿಲು' ಕವನ ಸಂಕಲನದಿಂದ ತೆಗೆದುಕೊಳ್ಳಲಾಗಿದೆ' .ಬಹುಮಾನ' ಎಂಬ ಪದ್ಯ ಭಾಗದಿಂದ ಈ ಮೇಲಿನ ವಾಕ್ಯವನ್ನು ಆಯ್ದುಕೊಳ್ಳಲಾಗಿದೆ.

| ಪದ್ಯ | ಸಾಂದರ್ಭಿಕ ಪ್ರಶ್ನೆಗಳು | ಯಾರು?ಯಾರಿಗೆ ? | ಸಂದರ್ಭ |
|---|---|---|---|
| ಬಹುಮಾನ | "ಮರುದನಿಗೈದಿತು ಮುದತಾಳಿ" | ಕೋಗಿಲೆಹಾಡಿದಾಗ , | ಕೋಗಿಲೆಯ ವಾಣಿಗೆ ಕಾನನಗಳು ಕೇಳಿದಾಗ |
| | "ಬಲು ಚೆಲುವಿದೆ ನಿನ್ನೀಗಾನ" | ಕೋಗಿಲೆ ವ್ಯಕ್ತಿ, | ಕೋಗಿಲೆಯ ಹಾಡಿದಾಗ ವ್ಯಕ್ತಿ ಕೇಳಿದಾಗ |
| | "ಅರಣ್ಯ ರೋಧನ !ಸುಮ್ಮನೆ ಹಾಡುವೆ"! | ಮಾನವಕೋಗಿಲೆ , | ಕೋಗಿಲೆ ಹಾಡನ್ನು ಕೇಳಿದ ಮಾನವ ಮನ ನೊಂದು |
| | "ತಲ್ಲಣಿಸಿತು ಜಗ ಜುಮ್ಮೆಂದು" | ಮಾನವ ಕೋಗಿಲೆ, | ಕೋಗಿಲೆಯ ಅಂತರಂಗದ ಸಹಜತೆಗೆ |

## ವ್ಯಾಕರಣಾಂಶ ಮಾಹಿತಿ:

### ಪತ್ರಲೇಖನ

ಹತ್ತಿರದಲ್ಲಿ ಇರುವವರೊಡನೆ ಸಂಭಾಷಣೆಯ ಮೂಲಕ ವಿಚಾರ ವಿನಿಮಯ ಮಾಡಿಕೊಳ್ಳಬಹುದು ಆದರೆ ದೂರದಲ್ಲಿ ಅಥವಾ ಪರಸ್ಥಳದಲ್ಲಿರುವವರ ಜೊತೆಗೆ ವಿಚಾರ ವಿನಿಮಯ ಮಾಡಿಕೊಳ್ಳಲು ಪತ್ರಲೇಖನ ಪ್ರಾರಂಭವಾಯಿತು ಇತ್ತೀಚಿಗೆ ದೂರವಾಣಿ, ಎಸ್ಎಂಎಸ್ ,ಈ ಅಂಚೆ ಮುಂತಾದ ಆಧುನಿಕ ಸೌಲಭ್ಯಗಳಿದ್ದರೂ ಪತ್ರ ವ್ಯವಹಾರ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಪತ್ರಗಳಲ್ಲಿ ಖಾಸಗಿ ಪತ್ರ ಹಾಗೂ ವ್ಯವಹಾರಿಕ ಪತ್ರ ಎಂಬುದಾಗಿ ಎರಡು ವಿಧಗಳಿವೆ.

<u>ಖಾಸಗಿ ಪತ್ರ ವೈಯಕ್ತಿಕ ಪತ್ರ</u>

ವೈಯಕ್ತಿಕ ಪತ್ರಗಳನ್ನು ಬಂಧುಗಳಿಗೆ, ಸ್ನೇಹಿತರಿಗೆ ಬರೆಯುತ್ತೇವೆ. ಈ ಪತ್ರಗಳಲ್ಲಿ ಆರೋಗ್ಯ, ವಿದ್ಯಾಭ್ಯಾಸ, ದುಡಿಮೆ, ಹಣಕಾಸಿನ ಸ್ಥಿತಿಗತಿ, ಕಷ್ಟ-ಸುಖ, ಹಬ್ಬ ಹರಿದಿನಗಳು, ಮದುವೆ ಮತ್ತಿತರ ವಿಷಯಗಳಿಗೆ ಸಂಬಂಧಿಸಿದಂತೆ ವಿಚಾರ ವಿನಿಮಯಗಳಾಗುತ್ತವೆ.

ವ್ಯಾವಹಾರಿಕ ಅಥವಾ ಮನವಿ ಪತ್ರ

ಸಾರ್ವಜನಿಕ ಸಂಸ್ಥೆಗಳಾದ ಶಾಲೆ, ನಗರಸಭೆ, ಪಂಚಾಯಿತಿಗಳು, ಗ್ರಂಥಾಲಯ, ಉದ್ಯಮಿಗಳು, ಸರ್ಕಾರಿ ಕಚೇರಿ ಇತ್ಯಾದಿ ಸಂಸ್ಥೆಯಲ್ಲಿ ಕೆಲಸ ಮಾಡುವ ಅಧಿಕಾರಿಗಳ ಜೊತೆ ನಡೆಸುವ ಪತ್ರ ವ್ಯವಹಾರಗಳನ್ನು ವ್ಯಾವಹಾರಿಕ ಪತ್ರಗಳು ಅಥವಾ ಮನವಿ ಪತ್ರಗಳು ಎಂದು ಕರೆಯುತ್ತೇವೆ. ಸಾಮಾನ್ಯವಾಗಿ ಎಲ್ಲಾ ಪತ್ರಗಳು ವಿಳಾಸ, ದಿನಾಂಕ, ದೂರವಾಣಿ ಸಂಖ್ಯೆ, ಸಂಬೋಧನೆ, ವಿಷಯ ವಿವರಣೆ, ಮುಕ್ತಾಯದ ಭಾಗ, ಪತ್ರ ಬರೆದವರ ಸಹಿ, ಹೊರ ವಿಳಾಸ ಇತ್ಯಾದಿ ಮಾಹಿತಿಗಳನ್ನು ಒಳಗೊಂಡಿರುತ್ತವೆ.

ವ್ಯಾಕರಣ ಭಾಗ : ಪತ್ರ ಲೇಖನ

೧ ವ್ಯಾವಹಾರಿಕ ಪತ್ರ ಲೇಖನ

ಮೊದಲಿಗೆ ಮಕ್ಕಳಿಗೆ ಈ ರೀತಿ ಪೆಟ್ಟಿಗೆಗಳನ್ನು ಹಾಕಿ ರೂಢಿಗೊಳಿಸುವುದು

1.

| ಇಂದ, |
| --- |
| ______________________ |
| ______________________ |
| ______________________ |

2.

| ಗೆ, |
| --- |
| ______________________ |
| ______________________ |
| ______________________ |

೩.

| ಮಾನ್ಯರೇ, |
| --- |
| ವಿಷಯ: |
| |

3. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ

------------------------------------------------------------------------------------------

---------------------------------------------------------------------------------------------------

---------------------------------------------------------------------------------------------------

------------------------------------------------------------------------------

ಕೋರಿಕೆ

4. ಧನ್ಯವಾದಗಳೊಂದಿಗೆ,

ಸ್ಥಳ:

ದಿನಾಂಕ:

ಇಂತಿ / ಇತಿ ನಿಮ್ಮ ವಿಶ್ವಾಸಿ

ಸಹಿ:

## ಹೊರ ವಿಳಾಸ

| ಇಂದ. | ಇವರಿಗೆ, |
| --- | --- |
| | |

### ವ್ಯಾವಹಾರಿಕ / ಪತ್ರದ ಮಾದರಿ

ನಿಮ್ಮನ್ನು ಯಾದಗಿರಿ ಜಿಲ್ಲೆಯ ಸರ್ಕಾರಿ ಪ್ರೌಢಶಾಲೆ ಲಿಂಗೇರಿ ಸ್ಟೇಷನ್ ನ ೮ನೇ ತರಗತಿಯಲ್ಲಿ ಓದುತ್ತಿರುವ ಭವಾನಿ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೊರಿ ಕಲಬುರ್ಗಿ ವಿಜಯವಾಣಿ ದಿನಪತ್ರಿಕೆಯ ಸಂಪಾದಕರಿಗೆ ಪತ್ರ ಬರೆಯಿರಿ.

ಮಕ್ಕಳಿಗೆ ಈ ಮೇಲಿನ ವಿಷಯ ಒಂದರಲ್ಲಿ ಮೂರು ಅಂಶಗಳನ್ನು ಗುರುತಿಸಲು ತಿಳಿಸುವುದು, ಈ ಮೂರು ಅಂಶಗಳನ್ನು ಆಧರಿಸಿ ಒಟ್ಟು ಎಂಟು ಹಂತಗಳಲ್ಲಿ ಜೋಡಿಸಬೇಕು .

೧. ಯಾರಿಂದ =: ? ಯಾದಗಿರಿ ಜಿಲ್ಲೆಯ ಸರ್ಕಾರಿ ಪ್ರೌಢಶಾಲೆ ಲಿಂಗೇರಿ ಸ್ಟೇಷನ್

೨. ಯಾರಿಗೆ =: ? ಸಂಪಾದಕರು ವಿಜಯವಾಣಿ ದಿನಪತ್ರಿಕೆ ಕಲಬುರ್ಗಿ

೩. ಏನಂತ =: ? ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವ ಬಗ್ಗೆ ,

೧. ಯಾರಿಂದ?

ಭವಾನಿ

ಸರ್ಕಾರಿ ಪ್ರೌಢಶಾಲೆ ಲಿಂಗೇರಿ ಸ್ಟೇಷನ್

ಯಾದಗಿರಿ.

೨.

ಯಾರಿಗೆ?

ಗೆ,

ಸಂಪಾದಕರು,

ವಿಜಯವಾಣಿ ದಿನಪತ್ರಿಕೆ

ಕಲಬುರಗಿ

ಮಾನ್ಯರೇ

೩. ಏನಂತ ?

| | |
|---|---|
| ೪. ವಿಷಯ: | ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವ ಬಗ್ಗೆ |

೫. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಶಾಲೆಯಲ್ಲಿ ದಿನಾಂಕ ೦೧.೧೧.೨೦೨೩ ರಂದು "ಕನ್ನಡ ರಾಜ್ಯೋತ್ಸವ" ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ನಮ್ಮ ಕ್ಷೇತ್ರದ ಮಾನ್ಯ ಶಾಸಕರು ಅಧ್ಯಕ್ಷತೆಯನ್ನು ವಹಿಸಿದ್ದರು. ಅವರು ತಮ್ಮ ಭಾಷಣದಲ್ಲಿ ಕನ್ನಡತನವನ್ನು ಮೈಗೂಡಿಸಿಕೊಳ್ಳುವಂತೆ ಕರೆ ನೀಡಿದರು. ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಪೋಷಕರು ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕ ವರ್ಗದವರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಈ ಕಾರ್ಯಕ್ರಮದ ಸಹ ವಿವರದ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದು ದಯಮಾಡಿ ಕಾರ್ಯಕ್ರಮದ ವರದಿಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಕೇಳಿಕೊಳ್ಳುತ್ತೇನೆ

೬.

ಧನ್ಯವಾದಗಳು,

೭.

೮.

ಸ್ಥಳ–:

ಇಂತಿ/ ಇತಿ ನಿಮ್ಮ ವಿಶ್ವಾಸಿ

ದಿನಾಂಕ

ಸಹಿ

## ಹೊರ ವಿಳಾಸ

| ಇಂದ. | ಇವರಿಗೆ, |
|---|---|
| | |

## ಪ.ಪೂ.ಅಧ್ಯಯನ–೪.'ಕಟ್ಟುವೆವು ನಾವು' – ( ಎಂ. ಗೋಪಾಲಕೃಷ್ಣ ಅಡಿಗರು )



### <u>ಪದ್ಯದ ಸಾರಾಂಶ</u>

1. ಎಂ. ಗೋಪಾಲಕೃಷ್ಣ ಅಡಿಗರು ೧೯೪೮ ರಲ್ಲಿ ರಚಿಸಿದ ಪದ್ಯವಿದು.
2. ಆಗ ತಾನೆ ಸ್ವಾತಂತ್ರ್ಯ ಸಿಕ್ಕಿರುತ್ತದೆ. ದೇಶವನ್ನು ಹೊಸದಾಗಿ ಕಟ್ಟುವ ಜವಾಬ್ದಾರಿ ಯುವಕರ ಮೇಲಿರುತ್ತದೆ.
3. ಸುವ್ಯವಸ್ಥಿತವಾದ ಹೊಸನಾಡನ್ನು ಕಟ್ಟಿ, ಅದನ್ನು ರಸದ ಬೀಡನ್ನಾಗಿ ಮಾಡಬೇಕು.
4. ಯೌವನವು ಆರಿ ಹೋಗುವ ಮೊದಲು, ಸಾಧಿಸುವ ಶಕ್ತಿ ಕಡಿಮೆಯಾಗುವ ಮೊದಲು ಕಟ್ಟಬೇಕು
5. ಯೌವನವು ಸದಾ ಕದಡುತ್ತಿರುವ ಸಾಗರದಂತೆ. ಅದರಲ್ಲಿ ಉತ್ಸಾಹ ಸಾಹಸದ ದೊಡ್ಡ ದೊಡ್ಡ ಅಲೆಗಳು ಅಪ್ಪಳಿಸುತ್ತಲೇ ಇರುತ್ತವೆ. ಇಂತಹ **ಕ್ಷುಬ್ಧ (ಯೌವನ ) ಸಾಗರವು** ಬತ್ತುವ ಮೊದಲು ಹೊಸನಾಡನ್ನು ಕಟ್ಟಬೇಕು.
6. ನಮ್ಮ **ಎದೆಯ ( ಸ್ವಂತ ) ಕನಸುಗಳೇ** ನಮಗೆ ಕಾಮಧೇನು ( ಬೇಡಿದ್ದನ್ನು ಕೊಡುವ ಹಸು ) ಆಗುತ್ತವೆ.
7. ನಮ್ಮ ಬಯಕೆಯನ್ನು ಕರೆಯುವ ಕೈಗಳಿಗೆ ನಮ್ಮ ಕನಸುಗಳ ಹರಕೆ ( ಶ್ರೀರಕ್ಷೆ ) ಇದೆ.
8. ಹೊಸ ನಾಡನ್ನು ಕಟ್ಟುವ ಒಮ್ಮುಖದ ಬಯಕೆ, ನಮಗೆ ಬೆಂಬಲವಾಗುತ್ತದೆ.
9. **ಜಾತಿ, ಮತ, ಭೇದಗಳೆಂಬ** ಕಂದಕಗಳು, ದುರ್ಭೇದ್ಯವಾದ ಕೋಟೆಕೊತ್ತಲಗಳು ನಮ್ಮ ಸುತ್ತಲೂ ಇವೆ.
10. ಇದನ್ನು ರೂಢಿರಾಕ್ಷಸ ( ಸಂಪ್ರದಾಯ / ಪದ್ಧತಿ ) ಆಳ್ವಿಕೆ ಮಾಡುತ್ತಿದ್ದಾನೆ. ನಾವು ಹೊಸ ನಾಡನ್ನು ಕಟ್ಟಲು ಕರೆದರೆ , ಅವನು ಜಾತಿ, ಧರ್ಮ , ಸಂಪ್ರದಾಯಗಳ ಹೆಸರಲ್ಲಿ ಯುದ್ಧಕ್ಕೆ ಕರೆಯುತ್ತಾನೆ.
11. ಈ ಯುದ್ಧದಲ್ಲಿ ಸತ್ತ **ನಮ್ಮ ಹೆಣಗಳೇ** ಆ ಕೋಟೆಗಳನ್ನು ಏರುವ ಮೆಟ್ಟಿಲುಗಳಾಗಲಿ. ನಮ್ಮ ಸಾವು ನೋವುಗಳು ಹೊಸನಾಡನ್ನು ರಕ್ಷಿಸಿ ಬೆಳೆಸುವ ತೊಟ್ಟಿಲಾಗುತ್ತವೆ.
12. ನಾವು ಹೆದರುವುದಿಲ್ಲ, ವೀರನಿಗೆ ಸೋಲು ಒಪ್ಪುವುದಿಲ್ಲ. ಅದು ನಮಗೆ ಬೇಕಿಲ್ಲ.
13. ತೊಂದರೆಗಳ ಸಮುದ್ರವನ್ನು ಈಜಿ ಬರುತ್ತೇವೆ. ಘೋರ ನಿರಾಶೆಯ ಅಗ್ನಿಮುಖವನ್ನೂ ಹೊಕ್ಕು ಹೊರಡುತ್ತೇವೆ.
14. ಎಲ್ಲ ತೊಡಕು, ಒಡಕುಗಳನ್ನು ಬಿಡಿಸಿಕೊಂಡು, ಇಡಿಗೊಳಿಸಿ ( ಒಟ್ಟಾಗಿ ) ನಾಡನ್ನು ಕಟ್ಟುತ್ತೇವೆ.
15. **ಆ ನಾಡು ಉತ್ಸಾಹ, ಉದ್ವೇಗ, ಉದ್ರೇಕಗಳಿರುವ ವೀರ ಯುವಜನದ ಗುಡಿಯಾಗಿರುತ್ತದೆ.**
16. **ಅದರ ಹಾರಾಟ ( ಬೆಳವಣಿಗೆ ) ಕ್ಕೆ ಕೊನೆಯಿಲ್ಲದ ಆಕಾಶವೇ ಗಡಿಯಾಗಿರುತ್ತದೆ.**
17. **ಅದನ್ನು ತಡೆಯಲು ಯಾರನ್ನು ಬಿಡುವುದಿಲ್ಲ.**
18. **ತಡೆಯುವ, ಹೊಡೆಯುವ, ಕೆಟ್ಟದ್ದನ್ನು ನುಡಿಯುವ, ಕೆಟ್ಟದ್ದನ್ನು ಮಾಡುವ ಕೆಟ್ಟ ಜನರೇ ಬನ್ನಿ. ನಾವೇ ನಿಮಗೆ ವೀಳೆಯವನ್ನು ಕೊಟ್ಟು ಕರೆಯುತ್ತಿದ್ದೇವೆ ಬನ್ನಿ.**
19. **ನಿಮ್ಮೆಲ್ಲರನ್ನು ತೊಡೆದು ( ನಾಶಮಾಡಿ ) , ನಿಮ್ಮ ಮಸಣದ ಮೇಲೆ ನಾವು ಹೊಸ ನಾಡನ್ನು ಕಟ್ಟುತ್ತೇವೆ, ಆಗ ಅದು ಸುಖದ ಬೀಡಾಗಿರುತ್ತದೆ ಎಂದಿದ್ದಾರೆ.**
20. ಇದೊಂದು ಭಾವತೀವ್ರತೆಯ ಹಾಡಾಗಿದೆ. ಇಲ್ಲಿ ದೇಶವನ್ನು ಹೊಸದಾಗಿ ಕಟ್ಟುವ, ಬೆಳೆಸುವ ಶಕ್ತಿ ಯುವಶಕ್ತಿಯದ್ದಾಗಿದೆ. ಅವರನ್ನು ಉತ್ತೇಜಿಸುವ ಪ್ರೇರಣೆ ಈ ಗೀತೆಯದ್ದಾಗಿದೆ.

- **ಕ್ರಮ ಸಂಖ್ಯೆಯನ್ನು ಬಿಟ್ಟು ಮೇಲಿನ ಎಲ್ಲಾ ಅಂಶಗಳನ್ನು ಬರೆಯಿರಿ. ಅನುಕ್ರಮವಾಗಿ ಓದಿರಿ. ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

| |
|---|
| |
| |
| |
| |
| |
| |
| |
| |
| |
| |

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಯಾವುದು ಬತ್ತಿಹೋಗುವ ಮುನ್ನ ಹೊಸನಾಡನ್ನು ಕಟ್ಟಬೇಕು ?

--------------------------------------------------------------------------------

--------------------------------------------------------------------------------

೨. ನಮ್ಮೆದೆಯ ಕಾಮಧೇನು ಯಾವುದು ?

--------------------------------------------------------------------------------

--------------------------------------------------------------------------------

೩. ನಮ್ಮ ಸುತ್ತಲೂ ಇವರು ಕಂದಕಗಳಾವುವು ?

--------------------------------------------------------------------------------

--------------------------------------------------------------------------------

೪.ಕೋಟೆಗೋಡೆಗೆ ಮೆಟ್ಟಿಲುಗಳು ಯಾವುದು ?

--------------------------------------------------------------------------------

--------------------------------------------------------------------------------

೫.ಕವಿ ಯಾರಿಗೆ ವೀಳೆಯವನು ಕೊಡುವೆನೆಂದಿದ್ದಾರೆ ?

--------------------------------------------------------------------------------

--------------------------------------------------------------------------------

೬. ಹೊಸನಾಡೊಂದನ್ನು ಕಟ್ಟ ಬಯಸುವ ಕವಿ ಉತ್ಸಾಹ ಉದ್ವೇಗದಲ್ಲಿ ಹೇಳುವ ಮಾತುಗಳಾವುವು ?

**ಘಟಕ ಪರೀಕ್ಷೆ – ೧೪ ( ಕಟ್ಟುವೆವು ನಾವು )**

**ನಿಗದಿಪಡಿಸಿದ ಅವಧಿ – ೧** **ಅಂಕಗಳು – ೧೦**

। ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. ೪ * ೧ = ೪

೧. ಕಟ್ಟುವೆವು ನಾವು ಪದ್ಯವನ್ನು ಬರೆದಿರುವವರು ಯಾರು ?

೧. ನಮ್ಮೆದೆಯ ಕಾಮಧೇನು ಯಾವುದು ?

೨. ಕೋಟೆಗೋಡೆಗೆ ಮೆಟ್ಟಿಲುಗಳು ಯಾವುದು ?

I. ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. ೩ * ೨ = ೬

೩. ಕವಿ ಯಾರಿಗೆ ವೀಳೆಯವನ್ನು ಕೊಡುವೆನೆಂದಿದ್ದಾರೆ ?

೪. ಹೊಸ ನಾಡೊಂದನ್ನು ಕಟ್ಟ ಬಯಸುವ ಕವಿ ಉತ್ಸಾಹ , ಉದ್ವೇಗದಲ್ಲಿ ಹೇಳುವ ಮಾತುಗಳಾವುವು ?

೫. ಕವಿ ಹೇಗೆ ಇಡಿಗೊಳಿಸಿ ನಾಡನ್ನು ಕಟ್ಟುತ್ತೇವೆ ಎಂದಿದ್ದಾರೆ ?

# ಗದ್ಯ – ೬. ತಲಕಾಡಿನ ವೈಭವ – ಹಿರೇಮಲ್ಲೂರು ಈಶ್ವರನ್)

## ನಿಗದಿಪಡಿಸಿದ ಅವಧಿಗಳು – ೭



### ಕೃತಿಕಾರರ ಪರಿಚಯ

ಹಿರೇಮಲ್ಲೂರು ಈಶ್ವರನ್ ರವರು ೧೧. ೦೧. ೧೯೨೨ ರಲ್ಲಿ ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ ಹಿರೇಮಲ್ಲೂರಿನಲ್ಲಿ ಜನಿಸಿದರು. ಸಮಾಜಶಾಸ್ತ್ರಜ್ಞರಾದ ಇವರು ಅಂತರಾಷ್ಟ್ರೀಯ ಪುರಸ್ಕೃತ ಸಾಹಿತಿ. ಆಕ್ಸ್ಫರ್ಡ್ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದ ಶ್ರೀಯುತರು ಕೆನಡಾ ಯಾರ್ಕ್ ವಿಶ್ವವಿದ್ಯಾಲಯದಲ್ಲಿ ಸಮಾಜಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಕವಿ ಕಂಡ ನಾಡು (ಪ್ರವಾಸ ಕಥನ) ವಿಷ ನಿಮಿಷಗಳು, ಭಾರತದ ಹಳ್ಳಿಗಳು, ವಲಸೆ ಹೋದ ಕನ್ನಡಿಗನ ಕಥೆ, ಹಾಲಾಹಲ, ರಾಜರಾಣಿದೇಖೊ, ಶಿವನ ಬುಟ್ಟಿ, ತಾಯಿಯ ನೋಟ ಮೊದಲಾದ ಇವರ ಕೃತಿಗಳು. ಶ್ರೀಯುತರು ಹರಿಹರನ ಕೃತಿಗಳು ಒಂದು ಸಂಖ್ಯಾ ನಿರ್ಣಯ ಮಹಾ ಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಲಭಿಸಿದೆ. ಹಿರೇಮಲ್ಲೂರು ಈಶ್ವರನವರ ಕವಿ ಕಂಡ ನಾಡು ಪ್ರವಾಸ ಕಥನ (ಪುಟ್ಟ ೦೧–೨೦) ರಿಂದ ಆರಿಸಿ ಸಂಪಾದಿಸಿ ನಿಗದಿಪಡಿಸಿದೆ

### ಅಭ್ಯಾಸ

| ಹಂತ–೧ | |
|---|---|
| ಲೇಖಕರ ಹೆಸರು | |
| ಸ್ಥಳ –ಕಾಲ | |
| ಕೃತಿಗಳು | |
| | |
| ಬಿರುದು/ ಪ್ರಶಸ್ತಿಗಳು | |
| | |
| ಹಂತ–೨ | |
| ಅವರು | ರವರು |
| ದಲ್ಲಿ ಸಾ.ಶ | ರಲ್ಲಿ ಜನಿಸಿದರು. |
| ಇವರು | |
| ಮುಂತಾದ ಕೃತಿಗಳನ್ನು ಬರೆದಿದ್ದಾರೆ. | |
| ಇವರಿಗೆ | |
| ಮುಂತಾದ ಪ್ರಶಸ್ತಿಗಳು ದೊರೆತಿವೆ./ ಬಿರುದುಗಳಿವೆ. | |
| ಹಂತ–೩ | |
| | |
| | |
| | |
| | |
| | |
| | |

## ಪಾಠದ ಪ್ರಮುಖ ಅಂಶಗಳು

೧. ೧೯೫೦ನೇಯ ಇಸವಿ ಅಕ್ಟೋಬರ್ ತಿಂಗಳ ಮಂಗಳವಾರ ೨೦ನೇ ತಾರೀಕು ಶಿವನ ಸಮುದ್ರದ ಪ್ರವಾಸಿಗರ ನಿಲ್ಮನೆಯಲ್ಲಿ ಕುಳಿತುಕೊಂಡು ಈ ದಿನದ ಪ್ರಯಾಣದ ವಿವರ ಬರೆಯುತ್ತಿದ್ದೇನೆ.

೨. ಶಿವನಸಮುದ್ರವನ್ನು ಒಳ ಸೇರುವ ಮುನ್ನ ಬಾಗಿಲ ಬಳಿ ನಿಂತ ಸುಬ್ರಹ್ಮಣ್ಯಂ ನಮ್ಮನ್ನು ವಿಶ್ವಾಸದಿಂದ ಸ್ವಾಗತಿಸಿದರು.

೩. ತಲಕಾಡಿನ ಇತಿಹಾಸದಲ್ಲಿ ಗಂಗರ ಇತಿಹಾಸ ಜೈನ ಧರ್ಮದ ವಿವರಣೆ ಇದೆ.

೪. ನರಸಿಂಹ ರಾಛಮಲ್ಲ, ರಕ್ಕಸ ಗಂಗರ ತಲಕಾಡು ಪುಣ್ಯಭೂಮಿ.

೫. ಚಾವುಂಡರಾಯನು ಚಾವುಂಡರಾಯ ಪುರಾಣ ಎಂಬ ಹೆಸರಿನ ಕೃತಿ ರಚಿಸಿದ. ಈ ಕೃತಿಯಲ್ಲಿ ೬೩ ಪುಣ್ಯಪುರುಷರ ಚರಿತ್ರೆ ಇದೆ.

೬. ರಾಯ ಅತ್ತಿಮಬ್ಬೆ ಹಾಗೂ ಅಜಿತ ಸೇನಾ ಗುರುಗಳ ಶಿಷ್ಯ ವೃಂದವಿದೆ.

೭. ಗಂಗರು ರಾಜೇಶ್ವರ ವೈಕುಂಠನಾರಾಯಣ ಮರುಳೇಶ್ವರ ಪಾತಾಳೇಶ್ವರ ವೈದ್ಯೇಶ್ವರ ಗುಡಿಯನ್ನು ಕಟ್ಟಿಸಿದರು.

೮. ಮೂರು ಮೈಲುಗಳ ಆಚೆ ವಿಜಯನಗರ ವಿಜಯಪುರ ಆರ್ಕೇಶ್ವರನ ದರ್ಶನವಾಯಿತು, ತಲಕಾಡಿನ ಪಂಚಲಿಂಗಗಳ ದರ್ಶನವು ಪೂರ್ತಿಯಾಯಿತು.

೯. ಅನತಿ ದೂರ ಹೋಗುವಷ್ಟರಲ್ಲಿ ಗಿಡಮರಗಳ ಪೊದೆಯಲ್ಲಿ ಬೆಳ್ಳಂ ಬೆಳಗ್ಗೆ ಕಂಡು ಯುರೇಕಾ! ಯುರೇಕಾ! ಎಂದು ಕೂಗಿದರು.

೧೦.ಸಳನು ಹುಲಿಯನ್ನು ಕೊಂದನು ಎಂದು ತಿಳಿದು ಅಂದಿನಿಂದ ಸಳನ ಮನೆತನಕ್ಕೆ 'ಹೊಯ್ಸಳ' ಎಂದು ಹೆಸರು ಬಂದಿತು.

೧೧. ನಮ್ಮ ದೇಗುಲಗಳೆ ನಮ್ಮ ರಾಷ್ಟ್ರದ ಚರಿತ್ರೆಯ ಹೆಗ್ಗುರುತು

೧೨.ಕವಿ ಕಂಡ ಸತ್ಯ, ಶಿಲ್ಪ ಕಂಡ ಸೌಂದರ್ಯಗಳೇ ನಮ್ಮ ಬಾಳಿನ ಅಲಂಕಾರ.

ವಿಶೇಷ ಸೂಚನೆ: ಇದಲ್ಲದೇ ಮಕ್ಕಳು ಈ ಪದಗಳನ್ನು ನೆನಪಿಟ್ಟುಕೊಳ್ಳುವುದರ ಮೂಲಕ ರೂಢಿಸಿಕೊಳ್ಳುವುದು

ನಿಲ್ಮನೆ, ಮೃಗಜಲ, ಯುರೇಕಾ, ಕ್ರಿಸ್ತಶಕಾಬ್ದ

### ಅಭ್ಯಾಸ ಹಾಳೆ

**ಮೇಲಿನ ಪ್ರಮುಖ ಅಂಶಗಳ ಕ್ರಮ ಸಂಖ್ಯೆಗಳನ್ನು ತೆಗೆದುಹಾಕಿ ವಾಕ್ಯರೂಪದಲ್ಲಿ ಜೋಡಿಸಿ ಬರೆಯಿರಿ.**

## ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೋತ್ತರಗಳು

೧. ಲೇಖಕರು ಪ್ರವಾಸದ ವಿವರವನ್ನು ಬರೆಯಲು ಆರಂಭಿಸಿದ್ದು ಎಲ್ಲಿ?
ಉತ್ತರ: ಲೇಖಕರು ಶಿವನಸಮುದ್ರದ ನಿಲ್ಮನೆಯಲ್ಲಿ ಪ್ರವಾಸದ ವಿವರವನ್ನು ಬರೆಯಲು ಆರಂಭಿಸಿದರು.

೨. ಗಂಗರ ಮೊದಲ ರಾಜಧಾನಿ ಯಾವುದು?
ಉತ್ತರ: ಗಂಗರ ಮೊದಲ ರಾಜಧಾನಿ ಕೋಲಾರ

೩. 'ರಾಯ ಅಣ್ಣ' ಎಂದು ಯಾರನ್ನು ಕರೆಯುತ್ತಿದ್ದರು?
ಉತ್ತರ: ಚಾವುಂಡರಾಯನನ್ನು 'ರಾಯ ಅಣ್ಣ' ಎಂದು ಕರೆಯುತ್ತಿದ್ದರು

೪. ಚಾಮುಂಡರಾಯ ಕನ್ನಡಕ್ಕೆ ಕೊಟ್ಟ ಕಾಣಿಕೆ ಏನು?
ಉತ್ತರ: 'ಚಾವುಂಡರಾಯ ಪುರಾಣ' ಎಂಬ ಹೆಸರಿನ ಪುಣ್ಯ ಪುರುಷರ ಚರಿತ್ರೆಯನ್ನು ಕನ್ನಡಕ್ಕೆ ಕಾಣಿಕೆಯಾಗಿ ನೀಡಿದ್ದಾನೆ

೫. ರಾಷ್ಟ್ರದ ಚಾರಿತ್ರಿಕ ಯಾವುದು?
ಉತ್ತರ: ರಾಷ್ಟ್ರದ ಚಾರಿತ್ರಿಕದ ಹೆಗ್ಗುರುತು ನಮ್ಮ ದೇಗುಲಗಳು

### ಚಟುವಟಿಕೆ

### ಈ ಕೆಳಗೆ ನೀಡಿರುವ ಪದಗಳನ್ನು ಬಳಸಿಕೊಂಡು ಹೊಂದಿಸಿ ಬರೆಯಿರಿ

| | ಎ | ಬಿ |
|---|---|---|
| ೧ | ಪ್ರವಾಸದ ವಿವರ | |
| ೨ | ಗಂಗರ ರಾಜಧಾನಿ | |
| ೩ | ರಾಯ ಅಣ್ಣ | |
| ೪ | ಚಾವುಂಡರಾಯ | |
| ೫ | ಚಾರಿತ್ರದ ಹೆಗ್ಗುರುತು | |

(ನಿಲ್ಮನೆ, ಕೋಲಾರ ಚಾವುಂಡರಾಯ ಚಾವುಂಡರಾಯ ಪುರಾಣ ನಮ್ಮ ದೇಗುಲಗಳು)

### ಸಾಂದರ್ಭಿಕ ಹೇಳಿಕೆಗಳ ಕೋಷ್ಟಕ

ಆಯ್ಕೆ: ಈ ವಾಕ್ಯವನ್ನು ಹಿರೇಮಲ್ಲೂರು ಈಶ್ವರನ್ ಅವರ 'ಕವಿ ಕಂಡ ನಾಡು ಪ್ರವಾಸ ಕಥನದಿಂದ ಪ್ರಕೃತ ಗದ್ಯಪಾಠವನ್ನು ಆರಿಸಿಕೊಳ್ಳಲಾಗಿದೆ.

| ಗದ್ಯ | ಸಾಂದರ್ಭಿಕ ಪ್ರಶ್ನೆಗಳು | ಯಾರು?ಯಾರಿಗೆ ? | ಸಂದರ್ಭ |
|---|---|---|---|
| ಕವಿ ಕಂಡ ನಾಡು | "ಸುತ್ತಣ ಲೋಕವೆಲ್ಲ ಮಲಗಿಕೊಂಡಿದೆ" | ಲೇಖಕರ, ಅನುಭವ | ಲೇಖಕರು ತಲಕಾಡಿನ ಪ್ರವಾಸ ಕೈಗೊಂಡಾಗ |
| | "ಅದು ಕಲಾಶ್ರೀ ವಿಹರಿಸುವ ನಂದನವನ" | ಲೇಖಕರು, ಹೇಳುವಾಗ | ತಲಕಾಡಿನ ಹಿರಿಮೆಯನ್ನು ಬಣ್ಣಿಸುವಾಗ |
| | "ಮೋಟರು ಓಡಲೊಲ್ಲದು ಸಾರಥಿ ನಿಲ್ಲಿಸಲಾರನು" | ಲೇಖಕರು,(ಸಾರಥಿಗೆ) ಸ್ನೇಹಿತರಿಗೆ | ಬಹು ಇಕ್ಕಟ್ಟಾದ ಕೊರಕಲಿನ ದಾರಿಯಲ್ಲಿ ಮೋಟಾರು ಚಲಿಸುವಾಗ |
| | ಬರ್ರೋಗುಡಿ"ಸಿಕ್ಕಿತುಬರ್ರೋ ದೇವಾಲಯ , "ದೊರಕಿತು | ಲೇಖಕರುಗೆಳೆಯರಿಗೆ , | ಅರ್ಕೇಶ್ವರ ದೇವಾಲಯ ಕಂಡಾಗ |

ಈ ಮೇಲಿನ ಸಂದರ್ಭ ಹೇಳಿಕೆಗಳನ್ನು ಕೆಳಗಿನ ಮಾದರಿಯಲ್ಲಿ ಬರೆಯಿರಿ

**ಆಯ್ಕೆ** :– ಈ ವಾಕ್ಯವನ್ನು ______ ಅವರು ಬರೆದ ______ ಕೃತಿ
ಕೃತಿ ______ ಎಂಬ ಕೃತಿಯಿಂದ ಆಯ್ದುಕೊಂಡ ______ ಪದ್ಯ ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ :– **ಈ ಮಾತನ್ನು ಯಾರು, ಯಾರಿಗೆ, ಯಾವಾಗ, ಏಕೆ ಹೇಳಿದರು ಎಂಬ ಅಂಶಗಳನ್ನು ಬರೆಯಬೇಕು.**

ಸ್ವಾರಸ್ಯ :–**ಈ ಮಾತಿನ ವಿಶೇಷತೆಯನ್ನು/ ಮೌಲ್ಯವನ್ನು / ಗುಣವನ್ನು ಕುರಿತು ಬರೆಯಬೇಕು**

## ವ್ಯಾಕರಣಾಂಶಗಳು

### ಸಂಧಿಗಳು:–

ಸಂಧಿ:– ಪದರಚನೆ ಆಗುವಾಗ ಎರಡು ಅಕ್ಷರಗಳು ಕಾಲ ವಿಳಂಬವಿಲ್ಲದೆ ಒಟ್ಟು ಸೇರುವುದೇ ಸಂಧಿ ಪದಗಳು ಒಟ್ಟು ಸೇರುವಾಗ ಮೂಲ ಪದಗಳ ಅರ್ಥಕ್ಕೆ ಯಾವ ಲೋಪವೂ ಬರಬಾರದು

ಸಂಧಿ

ಕನ್ನಡ ಸ್ವರ ಸಂಧಿ — ಕನ್ನಡ ವ್ಯಂಜನ ಸಂಧಿ

೧.ಲೋಪ ಸಂಧಿ — ೨. ಆದೇಶ ಸಂಧಿ

೩. ಆಗಮ ಸಂಧಿ

ಸ್ವರ ಸಂಧಿ:– ಸಂಧಿಯಾಗುವಾಗ ಸ್ವರದ ಮುಂದೆ ಸ್ವರ ಇದ್ದು ಸಂಧಿಯಾದರೆ ಅದು ಸ್ವರ ಸಂಧಿ

ವ್ಯಂಜನ ಸಂಧಿ:– ಸ್ವರದ ಮುಂದೆ ವ್ಯಂಜನ ಅಥವಾ ವ್ಯಂಜನದ ಮುಂದೆ ಸ್ವರ ಅಥವಾ ವ್ಯಂಜನದ ಮುಂದೆ ವ್ಯಂಜನ ಇದ್ದು ಸಂಧಿ ಆದರೆ ಅದು ವ್ಯಂಜನ ಸಂಧಿ.

ಈ ಸಂಧಿಗಳಲ್ಲಿ ಕನ್ನಡ ಸಂಧಿ ಮತ್ತು ಸಂಸ್ಕೃತ ಸಂಧಿಗಳೆಂದು ಎರಡು ವಿಧಗಳಿವೆ

ಕನ್ನಡ ಸಂಧಿ :– ಕನ್ನಡ ಪದಗಳೇ ಸೇರಿ ಅಥವಾ ಕನ್ನಡ ಮತ್ತು ಸಂಸ್ಕೃತ ಪದಗಳು ಸೇರಿ ಸಂಧಿಯಾದರೆ 'ಕನ್ನಡ ಸಂಧಿ' ಎಂತಲೂ

ಸಂಸ್ಕೃತ ಸಂಧಿ:– ಸಂಸ್ಕೃತ ಪದಗಳು ಸೇರಿ ಸಂಧಿಯಾದರೆ ಸಂಸ್ಕೃತ ಸಂಧಿ ಎಂದು ಕರೆಯಲ್ಪಡುತ್ತವೆ

ಸಂಧಿಯಾಗುವಾಗ ಕೆಲವು ವ್ಯತ್ಯಾಸಗಳಾಗುತ್ತವೆ ಈ ವ್ಯತ್ಯಾಸವೇ ಸಂಧಿಕ್ರಿಯೆ. ಮೊದಲನೇ ಪದವನ್ನು –ಪೂರ್ವಪದ, ಎರಡನೇ ಪದವನ್ನು– ಉತ್ತರಪದ

| | ಪೂ.ಪ | | ಉ.ಪ | | ಸಂಧಿಕ್ರಿಯೆ |
|---|---|---|---|---|---|
| ಉದಾ: | ಬೇರೆ | + | ಒಬ್ಬ | = | ಬೇರೊಬ್ಬ |

- ಕನ್ನಡ ಸಂಧಿಗಳು :–

  ೧. ಲೋಪ ಸಂಧಿ

  ೨. ಆಗಮ ಸಂಧಿ

  ೩. ಆದೇಶ ಸಂಧಿ

೧. ಲೋಪ ಸಂಧಿ : ಸಂಧಿ ಕ್ರಿಯೆ ಆಗುವಾಗ ಸ್ವರದ ಮುಂದೆ ಸ್ವರ ಬಂದು ಪೂರ್ವ ಪದದ ಸ್ವರ ಲೋಪವಾದರೆ ಅದು ಲೋಪ ಸಂಧಿ

ಉದಾ: ಊರು+ ಊರು=ಊರೂರು

ಊರು+ ಇಂದ = ಊರಿಂದ

ಮಾತು+ ಇಲ್ಲ = ಮಾತಿಲ್ಲ

ಬಲ್ಲೆನು+ ಎಂದು = ಬಲ್ಲೆನೆಂದು

೨. ಆಗಮಸಂಧಿ : ಸ್ವರದ ಮುಂದೆ ಸ್ವರ ಬಂದು ಸಂಧಿ ಆಗುವಾಗ 'ಯ'ಕಾರ ಅಥವಾ 'ವ'ಕಾರ ಈ ಸ್ವರಗಳ ಮಧ್ಯ ಹೊಸದಾಗಿ ಸೇರಿದರೆ ಅದು ಆಗಮ ಸಂಧಿ

ಉದಾ: ಕೈ + ಅನ್ನು = ಕೈಯನ್ನು

ಗುರು + ಅನ್ನು = ಗುರುವನ್ನು

ಚಳಿ + ಇಂದ = ಚಳಿಯಿಂದ

ಪುಸ್ತಕ + ವನ್ನು = ಪುಸ್ತಕವನ್ನು

೩. ಆದೇಶ ಸಂಧಿ : ಸಂಧಿ ಕ್ರಿಯೆ ಆಗುವಾಗ ಪೂರ್ವ ಪದದ ಆದಿಯಲ್ಲಿರುವ ವ್ಯಂಜನದ ಬದಲಿಗೆ ಬೇರೊಂದು ವ್ಯಂಜನ ಬಂದು ಸೇರುವುದೇ ಆದೇಶ ಸಂಧಿ. ಕ,ತ,ಪ ಗಳಿಗೆ ಗ,ದ,ಬ ಗಳು ಕೆಲವೊಮ್ಮೆ ಪ,ಬ,ಮ ಗಳಿಗೆ ಬದಲಾಗಿ 'ವ' ಕಾರವು ಆದೇಶವಾಗಿ ಬರುತ್ತದೆ.

ಉದಾ: ಹುಲ್ಲು + ಕಾವಲು = ಹುಲ್ಲುಗಾವಲು

ಮೈ + ತೊಳೆ = ಮೈದೊಳೆ

ಬೆನ್ + ಪತ್ತು = ಬೆಂಬತ್ತು

ಕೆನೆ + ಪಾಲ್ = ಕೆನೆವಾಲ್

- ಪ್ರಕೃತಿಭಾವ : ಸ್ವರದ ಮುಂದೆ ಸ್ವರ ಬಂದರು ಸಂಧಿಯಾಗದೆ ಇದ್ದ ಹಾಗೆಯೇ ಇರುವುದು ಪ್ರಕೃತಿಭಾವ

ಉದಾ: ಆ + ಆಡು,

ಓಹೋ + ಅಜ್ಜಿ ಬಂದರೇ,

ಅಕ್ಕ + ಇತ್ತಬಾ

## ಅಭ್ಯಾಸ ಚಟುವಟಿಕೆಗಳು

ಈ ಕೆಳಗಿನ ಸಂಧಿ ಪದಗಳನ್ನು ಬಿಡಿಸಿ ಲೋಪವಾಗಿರುವ ಸ್ವರ ಗುರುತಿಸಿ ಸಂಧಿ ಹೆಸರು ಬರೆಯಿರಿ

ಅ) ಈ ಕೆಳಗಿರುವ ಸಂಧಿ ಪದಗಳನ್ನು ಬಿಡಿಸಿ ಲೋಪವಾಗಿರುವ ಸ್ವರ ಗುರುತಿಸಿ ಸಂಧಿ ಹೆಸರು ಬರೆಯಿರಿ (ಮಾದರಿಯಂತೆ)

ಮಾದರಿ:- ಆಡಿಸು = ಆಡು + ಇಸು – 'ಉ' ಕಾರ ಲೋಪಸಂಧಿ

| | |
|---|---|
| ೧. ಮಾತಿಲ್ಲಾ = | |
| ೨. ಊರುರು = | |
| ೩. ನಾವೆಲ್ಲ = | |
| ೪. ಅವನಲ್ಲಿ = | |
| ೫. ಅಲ್ಲಲ್ಲಿ = | |

ಆ) ಪೂರ್ವಪದ ಮತ್ತು ಉತ್ತರ ಪದಗಳ ನಡುವೆ ಬಂದ ವ್ಯಂಜನಾಕ್ಷರ ಯಾವುದೆಂದು ಬರೆಯಿರಿ

ಮಾದರಿ : – ಕೈ + ಅನ್ನು = ಕೈಯನ್ನು 'ಯ'

| | | | |
|---|---|---|---|
| ೧. ಮನೆ + | ಅಲ್ಲಿ = | ಮನೆಯಲ್ಲಿ > | |
| ೨. ಗುರು + | ಅನ್ನು = | ಗುರುವನ್ನು > | |
| ೩. ಶಾಲೆ + | ಅಲ್ಲಿ = | ಶಾಲೆಯಲ್ಲಿ > | |
| ೪. ಮಗು + | ಅನ್ನು = | ಮಗುವನ್ನು > | |
| ೫. ಪುಸ್ತಕ + | ಅನ್ನು = | ಪುಸ್ತಕವನ್ನು > | |

ಮೌಲ್ಯಮಾಪನ(ತಲಕಾಡಿನ ವೈಭವ) : **ಘಟಕ ಪರೀಕ್ಷೆ**

ಅಂಕ: ೧೦ ಸಮಯ: ೪೦ ನಿಮಿಷ

I . ಈ ಕೆಳಗೆ ನೀಡಿರುವ ಪ್ರಶ್ನೆಗಳಿಗೆ ಆವರಣದಲ್ಲಿರುವ ಸೂಚನೆಗಳಂತೆ ಉತ್ತಿರಿಸಿ ೪=೧X೪

೧. ಮುಚ್ಚಿಟ್ಟು, ಹಾಡುತ್ತಿರುವ, ಉದ್ಯಮವನ್ನು, ಬಾನಿನೆಡೆ?

(ಗುಂಪಿಗೆ ಸೇರಿದ ಪದವನ್ನು ಆರಿಸಿ ಬರೆಯಿರಿ)

೨. ಮನೆ + ಕೆಲಸ = ಮನೆಗೆಲಸ ಇದು ಯಾವ ಸಂಧಿಯಾಗುತ್ತದೆ?

(ಆಗಮ, ಲೋಪ, ಆದೇಶ, ಪ್ರಕೃತಿಭಾವ)

೩. 'ನಿಲ್ಮನೆ' ಈ ಪದದ ಅರ್ಥವೇನು?

(ಮರೀಚಿಕೆ, ಸೂರ್ಯ, ಪ್ರವಾಸಿಗರು ಉಳಿದುಕೊಳ್ಳುವ ಮನೆ, ಮನೆ)

೪. 'ಮಾತಿಲ್ಲ' ಈ ಪದವನ್ನು ಬಿಡಿಸಿ ಬರೆದಾಗ?

(ಮಾತು + ಇಲ್ಲ, ಮಾತು + ಅನ್ನು, ಮಾತು + ಈಲ್ಲ, ಮಾತು + ಎಲ್ಲ)

ಪ್ರಶ್ನೆ .II: ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ . ೪=೧X೪

೫. ಲೇಖಕರು ಪ್ರವಾಸದ ವಿವರವನ್ನು ಬರೆಯಲು ಆರಂಭಿಸಿದ್ದು ಎಲ್ಲಿ?
೬. ಗಂಗರ ಮೊದಲ ರಾಜಧಾನಿ ಯಾವುದು?
೭. ಅಣ್ಣ, ರಾಯ ಎಂದು ಯಾರನ್ನು ಕರೆಯುತ್ತಾರೆ
೮. ರಾಷ್ಟ್ರದ ಚಾರಿತ್ರ್ಯದ ಹೆಗ್ಗುರುತು ಯಾವುದು?

ಪ್ರಶ್ನೆ III .ಈ ಕೆಳಗಿನ ವಾಕ್ಯಕ್ಕೆ ಸಂದರ್ಭ ಸಹಿತ ಸ್ವಾರಸ್ಯವನ್ನು ವಿಸ್ತರಿಸಿ ಬರೆಯಿರಿ. ೨=೨X೧

೯. "ಬರ್ರೋ ಗುಡಿ ಸಿಕ್ಕಿತು, ಬರ್ರೋ ದೇವಾಲಯ ದೊರಕಿತು".

## ಪದ್ಯ ೬ : ಗೆಳೆತನ – ( ಚೆನ್ನವೀರ ಕಣವಿ )

### ನಿಗದಿಪಡಿಸಿದ ಅವಧಿಗಳು – ೮



### ಕೃತಿಕಾರರ ಪರಿಚಯ

ಕನ್ನಡದ ಪ್ರಮುಖ ಕವಿಗಳಲ್ಲಿ **ಚೆನ್ನವೀರ ಕಣವಿಯವರು** ಒಬ್ಬರು. ಇವರು **೧೯೨೮ರಲ್ಲಿ ಗದಗ ಜಿಲ್ಲೆಯ ಹೊಂಬಳದಲ್ಲಿ ಜನಿಸಿದರು. ಆಕಾಶಬುಟ್ಟಿ, ಭಾವಜೀವಿ, ಮಧುಚಂದ್ರ, ದೀಪಧಾರಿ, ಮಣ್ಣಿನ ಮೆರವಣಿಗೆ, ನೆಲಮುಗಿಲು, ಕಾವ್ಯಾಕ್ಷಿ, ಚಿರಂತನ ದಾಹ** ಇವರ ಪ್ರಮುಖ ಕವನ ಸಂಕಲನಗಳು. **ಕರ್ನಾಟಕ ಅಕಾಡೆಮಿ ಗೌರವ ಪ್ರಶಸ್ತಿ,** ೧೯೮೧ ರಲ್ಲಿ ಜೀವಧ್ವನಿ ಕವನ ಸಂಗ್ರಹಕ್ಕೆ **ಕೇಂದ್ರ ಸಾಹಿತ್ಯ ಅಕಾಡೆಮಿ** ಪ್ರಶಸ್ತಿ ದೊರಕಿವೆ. 'ಗೆಳೆತನ' ಕವನವನ್ನು ಚೆನ್ನವೀರ ಕಣವಿ ಅವರ 'ಆಕಾಶಬುಟ್ಟಿ' ಕವನ ಸಂಕಲನದಿಂದ ಆಯ್ದು ಸಂಪಾದಿಸಿ ನಿಗದಿಪಡಿಸಿದೆ.

**ಈ ಕೆಳಗೆ ನೀಡಿದ ಪಟ್ಟಿಯಲ್ಲಿ ಕವಿ ಪರಿಚಯವನ್ನು ನೋಡಿ ಬರೆಯಿರಿ.**

| | |
|---|---|
| **ಕವಿಯ ಹೆಸರು:** | |
| **ಕಾಲ:** | |
| **ಸ್ಥಳ:** | |
| **ಕೃತಿಗಳು:** | |
| **ಪ್ರಶಸ್ತಿಗಳು:** | |

*** ಈ ಕೆಳಗೆ ನೀಡಿದ ವಾಕ್ಯಗಳಲ್ಲಿ ಬಿಟ್ಟ ಸ್ಥಳಗಳನ್ನು ತುಂಬಿ ಅರ್ಥಪೂರ್ಣ ಹೇಳಿಕೆಗಳನ್ನಾಗಿ ಮಾಡಿರಿ.**

೧. ಚೆನ್ನವೀರ ಕಣವಿ ಅವರು ------------------------- ರಂದು ಜನಿಸಿದರು.

೨. ಚೆನ್ನವೀರ ಕಣವಿ ಅವರು ----------------------------------- ಜಿಲ್ಲೆಯ ಹೊಂಬಾಳದವರು.

೩. ಜೀವಧ್ವನಿ ಕವನ ಸಂಗ್ರಹಕ್ಕೆ ----------------------------------------- ಪದವಿ ದೊರಕಿದೆ.

೪. ಚೆನ್ನವೀರ ಕಣವಿ ಅವರ --------------------------- ಕವನ ಸಂಕಲನದಿಂದ ಗೆಳೆತನ ಪದ್ಯವನ್ನು ಆಯ್ದುಕೊಳ್ಳಲಾಗಿದೆ.

೫. ಚೆನ್ನವೀರ ಕಣವಿ ಅವರು ----------------------- ಇಸವಿಯಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದರು.

*** ಈ ಕೆಳಗಿನ ಪದಗಳ ಅರ್ಥವನ್ನು ಬರೆಯಿರಿ.**

| ಪದಗಳು | ಅರ್ಥ |
|---|---|
| ಅಪ್ಪುಕಯ್ | |
| ಜೀವನ್ಮೃತ | |
| ತಂಗು | |
| ದೋಷ | |
| ಬಾಗು | |
| ರಸಪಾಕ | |
| ಹದ | |

## * ಪದ್ಯದಲ್ಲಿರುವ ಮುಖ್ಯಾಂಶಗಳು:–

– ಆಧುನಿಕ ಕಾವ್ಯದಲ್ಲಿ ಕವಿಯ ದೃಷ್ಟಿಕೋನ ಬಹಳ ವಿಸ್ತಾರವನ್ನು ಪಡೆದುಕೊಂಡಿದೆ.

– ಇಂದು ಇಡೀ ಜಗತ್ತು ಭಯ, ಆತಂಕ, ಭಯೋತ್ಪಾದನೆಯ ಕರಿನೆರಳಿಗೆ ಸಿಲುಕಿ ನರಳುತ್ತಿದೆ. ವಿಶ್ವವನ್ನೆಲ್ಲ ಒಗ್ಗೂಡಿಸಲು ಇರುವ ಏಕಮಾತ್ರ ಸಾಧನ ಸ್ನೇಹ ಸಂಬಂಧಗಳು ಮಾತ್ರ.

– ಗೆಳೆತನವು ಪ್ರತಿಯೊಬ್ಬ ಮಾನವನ ಹೃದಯದ ಮಿಡಿತವಾಗಿದೆ. ಜನ್ಮನೀಡಿದ ತಂದೆ–ತಾಯಿಯರನ್ನು ಮೀರಿಸಿದ ಬಾಂಧವ್ಯ ಗೆಳತನದ್ದು.

– ಕೃಷ್ಣ–ಸುಧಾಮ, ಕರ್ಣ–ದುರ್ಯೋಧನ, ಚಂದನದಾಸ–ಅಮಾತ್ಯ ರಾಕ್ಷಸರವರ ನಿದರ್ಶನಗಳು ಪುರಾಣ ಇತಿಹಾಸದ್ದು ಹಾಗೂ ವೈಯಕ್ತಿಕ ಬದುಕಿನ ಪ್ರತಿಬಿಂಬಗಳಾಗಿವೆ.

– ಗೆಳತನಕ್ಕೆ ಮೇಲು–ಕೀಳುಗಳಾಗಲಿ, ಹೆಣ್ಣು–ಗಂಡೆಂಬ ತಾರತಮ್ಯವಾಗಲಿ ಇಲ್ಲ. ಸ್ನೇಹ – ಬಾಂಧವ್ಯಗಳು ವೈಯಕ್ತಿಕ ನೆಲೆಗಟ್ಟನ್ನು ಮೀರಿ ವಿಶ್ವವನ್ನೇ ಒಗ್ಗೂಡಿಸುವ ಏಕಮಂತ್ರವಾಗಿದೆ.

## * ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಲಾಗಿದ್ದು, ಉತ್ತರವನ್ನು ಮತ್ತೊಮ್ಮೆ ನೋಡಿ ಬರೆಯಿರಿ.

**೧. ಕವಿ ಎಲ್ಲಿ ತಂಗಿದ್ದಾರೆ?**

ಉತ್ತರ: ಕವಿ ಗೆಳೆತನವೆಂಬ ವಿಶಾಲ ಆಲದ ಮರದಡಿಯಲ್ಲಿ ಹರಡಿರುವ ತಣ್ಣೆಳಲ ತಂಪಿನಲ್ಲಿ ತಂಗಿದ್ದಾರೆ.

೨. ಕವಿ ಮೌನದಲ್ಲಿ ಏನನ್ನು ನುಂಗಿದ್ದಾರೆ?

ಉತ್ತರ: ಕವಿ ಜೀವನದಲ್ಲಿ ಅನಂತ ದುರ್ಭರ ಬವಣೆ ನೋವುಗಳನ್ನು ನುಂಗಿದ್ದಾರೆ.

೩. ಗೆಳೆತನದ ಮನಸ್ಸಿನ ಭಾವನೆ ಹೇಗಿದೆ?

ಉತ್ತರ: ಗೆಳೆತನದ ಮನಸ್ಸಿನ ಭಾವನೆಯು ಸ್ಫಟಿಕದಂತೆ, ಬೆಳದಿಂಗಳಿನಂತೆ ಪರಿಶುದ್ಧವಾಗಿದೆ.

೪. ಉಪ್ಪು ಮತ್ತು ತಾಯಿಯ ಬಗೆಗಿರುವ ಗಾದೆ ಯಾವುದು?

ಉತ್ತರ: ಉಪ್ಪಿಗಿಂತ ರುಚಿ ಇಲ್ಲ; ತಾಯಿಗಿಂತ ಬಂಧುವಿಲ್ಲ.

## * ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿದ್ದು, ಉತ್ತರವನ್ನು ಮತ್ತೊಮ್ಮೆ ನಕಲು ಮಾಡಿ.

೧. ಗೆಳೆತನದಲ್ಲಿ ಯಾವ ದುರ್ಗುಣಗಳು ಇಲ್ಲವೆಂದು ಹೇಳಲಾಗಿದೆ?

ಉತ್ತರ: ಗೆಳೆತನದಲ್ಲಿ ವಂಚನೆ, ಚಂಚಲತೆ, ಮೇಲು ಕೀಳುಗಳೆಂಬ ಭೇದವಿಲ್ಲ. ಹಾಗು ಅಹಂಕಾರದ ನೆಪವಿಲ್ಲ. ದ್ವೇಷ ಗುಣವಿಲ್ಲ, ಸಣ್ಣತನ ಸಂಕೋಚ ಮುಂತಾದ ದುರ್ಗುಣಗಳು ಇಲ್ಲವೆಂದು ಕವಿ ಹೇಳಿದ್ದಾರೆ.

೨. ಗೆಳೆತನದ ಶುಚಿರುಚಿ ಎಂಥದ್ದು?

ಉತ್ತರ: 'ಉಪ್ಪಿಗಿಂತ ರುಚಿ ಇಲ್ಲ, ತಾಯಿಗಿಂತ ಬಂಧುವಿಲ್ಲ' ಎಂಬ ಗಾದೆ ಮಾತು ಜನಪ್ರಿಯವಾಗಿದೆ. ಆದರೆ ಗೆಳೆತನದ ಶುಚಿ, ರುಚಿ ಆ ಗಾದೆ ಮಾತಿಗಿಂತಲೂ ಮಿಗಿಲಾಗಿದೆ ಎಂದರೆ ತಪ್ಪಾಗಲಾರದು.

------------------------------------------------------------------------------------------------

------------------------------------------------------------------------------------------------

------------------------------------------------------------------------------------------------

------------------------------------------------------------------------------------------------

೩. ಜೀವನ ರಸಪಾಕವಾಗುವುದು ಹೇಗೆ?

ಉತ್ತರ: ಗೆಳೆಯರು ಪ್ರೀತಿಯಿಂದ ಹೇಗೊ ಹೇಗೋ ಹೆಗಲುಗೊಟ್ಟು ಆಗು ಹೋಗುಗಳಿಗೆ ಸೋಲದೆ ಜೊತೆಗಿರುತ್ತಾರೆ. ಸುಖವಾದಾಗ ಸಂತಸಪಟ್ಟು, ದು:ಖವಾದಾಗ ಅದರಲ್ಲಿ ಸಹಭಾಗಿಯಾದರೆ ಜೀವನ ರಸದಪಾಕದಂತೆ ಆಗುತ್ತದೆ.

------------------------------------------------------------------------------------------------

------------------------------------------------------------------------------------------------

------------------------------------------------------------------------------------------------

------------------------------------------------------------------------------------------------

೪. ಗೆಳೆತನವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿರಿ.?.

------------------------------------------------------------------------------------------------

------------------------------------------------------------------------------------------------

------------------------------------------------------------------------------------------------

------------------------------------------------------------------------------------------------

*** ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.**

**೧. "ಅದನುಳಿದರೇನಿಹುದು–ಜೀವನ್ಮೃತ!"**

ಉತ್ತರ: **ಆಯ್ಕೆ:** ಮೇಲಿನ ವಾಕ್ಯವನ್ನು ಚೆನ್ನವೀರ ಕಣವಿ ಅವರು ಬರೆದಿರುವ 'ಆಕಾಶಬುಟ್ಟಿ' ಕವನ ಸಂಕಲನದಿಂದ ಆರಿಸಿಕೊಳ್ಳಲಾದ 'ಗೆಳೆತನ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಕವಿ ಗೆಳೆತನವೆ ಇಹಲೋಕಕಿರುವ ಅಮೃತವಾಗಿದೆ. ಅದಿಲ್ಲದಿದ್ದರೆ ಬದುಕಿದ್ದು ಸತ್ತಂತೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳಿದ್ದಾರೆ.

**ಸ್ವಾರಸ್ಯ:** ಗೆಳೆತನ ಜೀವನಕ್ಕೆ ಅತ್ಯವಶ್ಯಕ ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿದೆ.

**ಮೇಲಿರುವ ಉತ್ತರವನ್ನು ನಕಲು ಮಾಡಿ.**

**ಆಯ್ಕೆ:** ಮೇಲಿನ ವಾಕ್ಯವನ್ನು -------------------------- ಅವರ -------------------------- ಕೃತಿಯಿಂದ ತೆಗೆದುಕೊಳ್ಳಲಾದ ---------------------- ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:**------------------------------------------------------------------------------------------

------------------------------------------------------------------------------------------------

**ಸ್ವಾರಸ್ಯ:**------------------------------------------------------------------------------------------

------------------------------------------------------------------------------------------------

**ನಿಮ್ಮ ಶಿಕ್ಷರರ ಸಹಾಯದಿಂದ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

**೨. "ಭಾವ ಶುದ್ಧ ಸ್ಫಟಿಕ ಬೆಳದಿಂಗಳು!"**

**ಆಯ್ಕೆ:** ಮೇಲಿನ ವಾಕ್ಯವನ್ನು ------------------------- ಅವರ ------------------------- ಕೃತಿಯಿಂದ ತೆಗೆದುಕೊಳ್ಳಲಾದ --------------------- ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:**------------------------------------------------------------------------------------------------

------------------------------------------------------------------------------------------------

------------------------------------------------------------------------------------------------

**ಸ್ವಾರಸ್ಯ:**------------------------------------------------------------------------------------------------

------------------------------------------------------------------------------------------------

೩. "ಕಂಡ ಕಂಡವರೇನು ಬಲ್ಲರಿದನು"

**ಆಯ್ಕೆ:** ಮೇಲಿನ ವಾಕ್ಯವನ್ನು ------------------------- ಅವರ ------------------------- ಕೃತಿಯಿಂದ ತೆಗೆದುಕೊಳ್ಳಲಾದ --------------------- ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:**------------------------------------------------------------------------------------------------

------------------------------------------------------------------------------------------------

**ಸ್ವಾರಸ್ಯ:**------------------------------------------------------------------------------------------------

*** ಗುಂಪಿಗೆ ಸೇರದ ಪದವನ್ನು ಗುರುತಿಸಿ.**

**೧. ಹೆಗಲುಗೊಟ್ಟು, ಸಂತಸಬಟ್ಟು, ಉಂಡವನು, ತಿಳಿಗೊಳ.**

ಉತ್ತರ:------------------------------------------------------------------------------------------

೨. ಲೋಕ, ಅಮೃತ, ಎದೆ, ಸಾಹಸ.

ಉತ್ತರ:------------------------------------------------------------------------------------------

೩. ಭಾವಜೀವಿ, ಕಾವ್ಯಾಕ್ಷಿ, ದೀಪಧಾರಿ, ಜೀವದ್ವನಿ.

ಉತ್ತರ:– ------------------------------------------------------------------------------------------

೪. ಬಾನು, ಆಕಾಶ, ಭಾನು, ಗಗನ.

ಉತ್ತರ:– ------------------------------------------------------------------------------------------

*** ಈ ಕೆಳಗಿನ ಪದ್ಯದ ಸಾಲುಗಳನ್ನು ನಿಮ್ಮ ಶಿಕ್ಷಕರ ಸಹಾಯದಿಂದ ನಿನ್ನ ಗೆಳೆಯರ ಜೊತೆ ಹಾಡಲು ಪ್ರಯತ್ನಿಸು.**

**ಗೆಳೆತನದ ಸುವಿಶಾಲ ಆಲದಡಿ ಪಸರಿಸಿಹ**
**ತಣ್ಣೆಳಲ ತಂಪಿನಲಿ ತಂಗಿರುವೆನು;**
**ಜೀವನದನಂತ ದುರ್ಭರ ಬವಣೆ ನೋವುಗಳ**
**ಕಾವುಗಳ ಮೌನದಲಿ ನುಂಗಿರುವೆನು**
**ಗೆಳೆತನವೆ ಇಹಲೋಕಕಿರುವ ಅಮೃತ**
**ಅದನುಳಿದರೇನಿಹುದು – ಜೀವನ್ಮೃತ !**

*** ಕೆಳಗೆ ನೀಡಿದ ಪದ್ಯದ ಸಾಲುಗಳನ್ನು ಮನಸಿನಲ್ಲಿ ಹೇಳಿಕೊಳ್ಳುತ್ತ ನೋಡಿ ಬರೆಯಿರಿ.**

ಗೆಳೆತನದ ಸುವಿಶಾಲ ಆಲದಡಿ ಪಸರಿಸಿಹ

------------------------------------------------------------

ತಣ್ಣೆಳಲ ತಂಪಿನಲಿ ತಂಗಿರುವೆನು;

------------------------------------------------------------

ಜೀವನದನಂತ ದುರ್ಭರ ಬವಣೆ ನೋವುಗಳ

------------------------------------------------------------

ಕಾವುಗಳ ಮೌನದಲಿ ನುಂಗಿರುವೆನು

------------------------------------------------------------

ಗೆಳೆತನವೆ ಇಹಲೋಕಕಿರುವ ಅಮೃತ

------------------------------------------------------------

ಅದನುಳಿದರೇನಿಹುದು–ಜೀವನ್ಮೃತ!

------------------------------------------------------------

ಗೆಳೆತನದ ಸುವಿಶಾಲ ಆಲದಡಿ ಪಸರಿಸಿಹ

ತಣ್ಣೆಳಲ ತಂಪಿನಲಿ ತಂಗಿರುವೆನು;

------------------------------------------------------------

------------------------------------------------------------

ಜೀವನದನಂತ ದುರ್ಭರ ಬವಣೆ ನೋವುಗಳ

ಕಾವುಗಳ ಮೌನದಲಿ ನುಂಗಿರುವೆನು

------------------------------------------------------------

------------------------------------------------------------

ಗೆಳೆತನವೆ ಇಹಲೋಕಕಿರುವ ಅಮೃತ

ಅದನುಳಿದರೇನಿಹುದು–ಜೀವನ್ಮೃತ!

------------------------------------------------------------

------------------------------------------------------------

*** ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿ.**

೧. **ಉಪ್ಪಿಗಿಂತಲು** ----------------------------------------

------------------------------------------------

------------------------------------------------

------------------------------------------------

------------------------------------------------

------------------------------------------------ **ಹದನು.**

**ಘಟಕ ಪರೀಕ್ಷೆ – ೧೬ ( ಗೆಳೆತನ )**

(ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ. ೨*೧=೨

೧. ಕವಿ ಎಲ್ಲಿ ತಂಗಿದ್ದಾರೆ ?

೨. ಉಪ್ಪು ಮತ್ತು ತಾಯಿಯ ಬಗೆಗೆ ಇರುವ ಗಾದೆ ಯಾವುದು ?

(ಆ) ಈ ಕೆಳಗಿನ ಪ್ರಶ್ನೆಗೆ ಮೂರು – ನಾಲ್ಕು ವಾಕ್ಯದಲ್ಲಿ ಉತ್ತರಿಸಿರಿ. ೧*೨=೨

೩. ಗೆಳೆತನದಲ್ಲಿ ಯಾವ ದುರ್ಗುಣಗಳು ಇಲ್ಲವೆಂದು ಹೇಳಲಾಗಿದೆ?

(ಇ) ಈ ಹೇಳಿಕೆಯ ಸಂದರ್ಭ ತಿಳಿಸಿ, ಸ್ವಾರಸ್ಯ ಬರೆಯಿರಿ. ೧*೩=೩

೪. " ಅದನುಳಿದರೇನಿಹುದು – ಜೀವನ್ಮೃತ ! "

(ಈ) ಕೊಟ್ಟಿರುವ ಪದ್ಯಭಾಗವನ್ನು ಪೂರ್ಣ ಮಾಡಿರಿ ೧*೪=೪

೫ ಉಪ್ಪಿಗಿಂತಲು -----------------------------------------

---------------------------------------------------

---------------------------------------------------

---------------------------------------------------

---------------------------------------------------

---------------------------------------- ಹದನು.

******

## ಪ.ಪೂ.ಅ.–೫. ಆಟೋ ರಿಕ್ಷಾದ ರಸಪ್ರಸಂಗಗಳು ( ಹೆಚ್. ನರಸಿಂಹಯ್ಯ )

### ನಿಗದಿಪಡಿಸಿದ ಅವಧಿಗಳು – ೧



**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ನೀಡಲಾಗಿದೆ ಅದರಂತೆ ಬಿಟ್ಟಿರುವ ಜಾಗದಲ್ಲಿ ಉತ್ತರ ಬರೆಯಿರಿ.**

೧. ಬೆಂಗಳೂರಿನ ಸಂಚಾರದ ಬಗ್ಗೆ ಲೇಖಕರ ಅಭಿಪ್ರಾಯವೇನು ?

ಉತ್ತರ : ಬೆಂಗಳೂರಿನಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವುದು ಒಂದು ಪ್ರಯಾಸದ ಕೆಲಸ.ಕಾರ್,ಸ್ಕೂಟರ್ ಇರುವವರಿಗೆ ಸಮಸ್ಯೆ ಇಲ್ಲ. ನಡೆದು ಹೋಗುವ ನನ್ನಂಥವನಿಗೆ ಇದು ಕಷ್ಟದ ಕೆಲಸ ಎಂದು ಲೇಖಕರು ಹೇಳುತ್ತಾರೆ.

೨. ದೇಹಕ್ಕೆಲ್ಲ ನಟ್ಟು ಬೋಲ್ಟ್ ಹಾಕಿಸಿಕೊಳ್ಳುವುದಕ್ಕಿಂತ ಯಾವುದು ಲೇಸು ?

ಉತ್ತರ : ದೇಹಕ್ಕೆಲ್ಲ ನಟ್ಟು ಬೋಲ್ಟ್ ಹಾಕಿಸಿಕೊಳ್ಳುವುದಕ್ಕಿಂತ ಭಗವಂತನ ಪಾದಾರವಿಂದವನ್ನು ಸೇರುವುದೇ ಲೇಸು.

೩. ಸಿಡುಕಿನಿಂದ ಆಟೋ ಸ್ಟಾರ್ಟ ಮಾಡಿದ ಆಟೋ ಚಾಲಕ ಏನೆಂದು ಹೇಳಿದ ?

ಉತ್ತರ : "ರೀ ಸ್ವಾಮಿ, ಸುಮ್ಮನೆ ಕುಳಿತುಕೊಳ್ಳಿ. ನಿಮ್ಮಂತವರಿಂದಲೇ ಆಕ್ಸಿಡೆಂಟ್ ಆಗುವುದು ಹತ್ತುವುದಕ್ಕಿಂತ ಮುಂಚೆನೇ ಅಪಶಕುನ" ಎಂದು ಸಿಡುಕಿ ಆಟೋ ಸ್ಟಾರ್ಟ್ ಮಾಡಿದ.

೪. ಲೇಖಕರಿಗೆ ವಿಮಾನದ ಬಗ್ಗೆ ಭಯವಿಲ್ಲವೇಕೆ ?

ಉತ್ತರ : ಏಕೆಂದರೆ ವಿಮಾನಕ್ಕೆ **ಯಾವಾಗಲೂ ಎಮ್ಮೆ ,ಹಸು , ಜನ ಅಡ್ಡ ಬರುವುದಿಲ್ಲ** ಜೊತೆಗೆ **ವಿಮಾನವನ್ನು ಓವರ್** ಟೇಕ್ ಮಾಡಿದ ಪ್ರಸಂಗವೂ ಇಲ್ಲ ಆದ್ದರಿಂದ ಲೇಖಕರಿಗೆ ವಿಮಾನದ ಬಗ್ಗೆ ಭಯವಿಲ್ಲ.

೫. ಪ್ರಾರ್ಥನೆಯಿಂದ ಮಳೆ ಬರಿಸುವುದಾಗಿ ಹೇಳಿದವನಾರು ?

ಉತ್ತರ : ಪ್ರಾರ್ಥನೆಯಿಂದ ಮಳೆ ಬರಿಸುವುದಾಗಿ ಹೇಳಿದವನು **ಶಿವ ಬಾಲಯೋಗಿ.**

೬. ಲೇಖಕರು ಯಾವ ಹಾಸ್ಟೆಲ್ ನಲ್ಲಿ ಇದ್ದರು ?

ಉತ್ತರ : ಲೇಖಕರು **ನ್ಯಾಷನಲ್ ಕಾಲೇಜಿನ ಹಾಸ್ಟೆಲ್** ನಲ್ಲಿ ಇದ್ದರು.

******************************

## ಘಟಕ ಪರೀಕ್ಷೆ – ೧೭ ( ಆಟೋ ರಿಕ್ಷಾದ ರಸಪ್ರಸಂಗಗಳು )

**ನಿಗದಿಪಡಿಸಿದ ಅವಧಿ – ೧**

**ಅಂಕಗಳು – ೧೦**

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **೪ * ೧ = ೪**

೧.'ಆಟೋ ರಿಕ್ಷಾದ ರಸಪ್ರಸಂಗಗಳು' ಗದ್ಯವನ್ನು ಬರೆದವರು ಯಾರು ?

----------------------------------------------------------------------------------------------------

೨.ದೇಹಕ್ಕೆಲ್ಲ ನಟ್ಟು ಬೋಲ್ಟ್ ಹಾಕಿಸಿಕೊಳ್ಳುವುದಕ್ಕಿಂತ ಯಾವುದು ಲೇಸು ?

----------------------------------------------------------------------------------------------------

೩. ಪ್ರಾರ್ಥನೆಯಿಂದ ಮಳೆ ಬರಿಸುವುದಾಗಿ ಹೇಳಿದ್ದವರಾರು ?

----------------------------------------------------------------------------------------------------

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **೩ * ೨ = ೬**

೪. ಬೆಂಗಳೂರಿನ ಸಂಚಾರದ ಬಗ್ಗೆ ಲೇಖಕರ ಅಭಿಪ್ರಾಯವೇನು ?

----------------------------------------------------------------------------------------------------

----------------------------------------------------------------------------------------------------

----------------------------------------------------------------------------------------------------

----------------------------------------------------------------------------------------------------

----------------------------------------------------------------------------------------------------

----------------------------------------------------------------------------------------------------

೫.ಲೇಖಕರಿಗೆ ವಿಮಾನ ಯಾನದ ಬಗ್ಗೆ ಭಯವಿಲ್ಲವೇಕೆ ?

----------------------------------------------------------------------------------------------------

----------------------------------------------------------------------------------------------------

----------------------------------------------------------------------------------------------------

----------------------------------------------------------------------------------------------------

----------------------------------------------------------------------------------------------------

----------------------------------------------------------------------------------------------------

೬.ಆಟೋ ಚಾಲಕರಲ್ಲಿಯೂ ಮಾನವೀಯತೆಯನ್ನರಿತ ಪ್ರಸಂಗದ ಬಗ್ಗೆ ತಿಳಿಸಿ.

----------------------------------------------------------------------------------------------------

----------------------------------------------------------------------------------------------------

----------------------------------------------------------------------------------------------------

----------------------------------------------------------------------------------------------------

----------------------------------------------------------------------------------------------------

*******

# ನಿರಂತರ ಮಾತ್ತು ವ್ಯಾಪಕ ಮೌಲ್ಯಮಾಪನ

## ರೂಪಣಾತ್ಮಕ ಮೌಲ್ಯಮಾಪನ –೩

ತರಗತಿ:– ೮ನೇ    ವಿಷಯ:– ಪ್ರಥಮ ಭಾಷೆ ಕನ್ನಡ    ಅಂಕಗಳು:– ೨೦

---

ಪ್ರ I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ.ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ. ೨x೧=೨

೧. ಈ ಕೆಳಗಿನವುಗಳಲ್ಲಿ ಕರ್ಮಧಾರೆಯ ಸಮಾಸಕ್ಕೆ ಉದಾಹರಣೆಯಾದ ಪದ.

ಎ) ವಯೋವೃದ್ಧ   ಬಿ) ನಾಲ್ದೆಸೆ   ಸಿ) ಹೆಮ್ಮರ   ಡಿ) ನಡುರಾತ್ರಿ

೨.' ಕಾರ್ಯ' ಈ ಪದದ ತದ್ಭವ ರೂಪ

ಎ) ಕೆಲಸ   ಬಿ) ಕರ್ಮ   ಸಿ) ಕ್ರಿಯೆ   ಡಿ) ಕಜ್ಜ

ಪ್ರ II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. ೨x೧=೨

೩. ದೊರೆಯ ಚಿಕ್ಕ ಮಗಳು ಗೆಳತಿಯರೊಂದಿಗೆ ಎಲ್ಲಿಗೆ ಹೋದಳು?

೪. ನಿಜವಾದ ಬಂಧು ಯಾರು?

ಪ್ರ III. ಕೆಳಗಿನ ಪ್ರಶ್ನೆಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. ೧x೨=೨

೫. ಶ್ರೇಷ್ಠ ಮಂತ್ರಿಗಳಲ್ಲಿರಬೇಕಾದ ಲಕ್ಷಣಗಳೇನು?

ಪ್ರ IV. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ,ಲಕ್ಷಣ ಬರೆದು, ಸಮನ್ವಯಗೊಳಿಸಿ. ೧x೩=೩

೬. ಬಿರುಗಾಳಿಗೆ ತುತ್ತಾದ ಮರಗಿಡಗಳು ಬೀಳುವಂತೆ ಭರತ ಕುಲದ ನೂರ್ವೆವರು ಬಾಲಕರು ಬಿದ್ದರು–

ಇದು ಯಾವ ಅಲಂಕಾರಕ್ಕೆ ಉದಾಹರಣೆಯಾಗಿದೆ.

ಪ್ರ V. ಈ ಕೆಳಗಿನ ಹೇಳಿಕೆಗೆ ಸಂದರ್ಭ, ಸ್ವಾರಸ್ಯ ಬರೆಯಿರಿ. ೧x೩=೩

೭." ಅಜ್ಜಿ ನಿನಗೆ ಭಯ ಬೇಡಮ್ಮ ನಾ ಮರಳಿ ಬಹೆನಮ್ಮ"

ಪ್ರ VI. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ೧x೪=೪

೮.   ಕಾಯಕದಲ್ಲಿ–––––––––––––––––––––––––––––––––––––––

–––––––––––––––––––––––––––––––––––––––––––––––––––

––––––––––––––––––––––––––––ಹರಿಯಬೇಕು

ಪ್ರ VII ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿ ೧x೪=೪

೯. ದೊರೆಯ ಮಗ ತನ್ನ ಹೆಂಡತಿಯನ್ನು ಹೇಗೆ ಮರಳಿ ಪಡೆದನು?

**********************************************

# ಗದ್ಯ – ೭. ಅಮ್ಮ – (ಯು.ಆರ್.ಅನಂತಮೂರ್ತಿ )

## ನಿಗದಿಪಡಿಸಿದ ಅವಧಿಗಳು – ೭



**ಕೃತಿಕಾರರ ಪರಿಚಯ :**

**ಯು. ಆರ್. ಅನಂತಮೂರ್ತಿಯವರು ೧೯೩೨ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಮೇಳಿಗೆಯಲ್ಲಿ ಜನಿಸಿದರು.** ಶ್ರೀಯುತರು **ಸಂಸ್ಕಾರ, ಅವಸ್ಥೆ, ಆವಾಹನೆ, ಮೌನಿ, ಪ್ರಶ್ನೆ, ಎಂದೆಂದೂ ಮುಗಿಯದ ಕಥೆ ಮಿಥುನ, ಅಜ್ಜನ ಹೆಗಲ ಸುಕ್ಕುಗಳು** ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಇವರಿಗೆ **ರಾಜ್ಯೋತ್ಸವ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿಗಳು** ಲಭಿಸಿವೆ.

### ಅಭ್ಯಾಸ ಮಾದರಿ

### ಹಂತ ೧: ಪ್ರಮುಖ ಅಂಶಗಳನ್ನು ಗುರ್ತಿಸುವದು

| | |
|---|---|
| ಕವಿ/ಸಾಹಿತಿಗಳ ಹೆಸರು | ಉಡುಪಿ ರಾಯಗೋಪಾಲಾಚಾರ್ಯ ಅನಂತಮೂರ್ತಿ |
| ಸ್ಥಳ ,ಕಾಲ | ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಮೇಳಿಗೆ –೧೯೩೨ |
| ಕೃತಿಗಳು | ಸಂಸ್ಕಾರ, ಅವಸ್ಥೆ, ಆವಾಹನೆ, ಮೌನಿ, ಪ್ರಶ್ನೆ,ಮಿಥುನ, ಅಜ್ಜನ ಹೆಗಲ ಸುಕ್ಕುಗಳು |
| ಬಿರುದು,ಪ್ರಶಸ್ತಿಗಳು | ರಾಜ್ಯೋತ್ಸವ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ |

### ಹಂತ ೨: ಬರೆಯುವ ವಿಧಾನವನ್ನು ರೂಢಿಸುವದು

**ಯು. ಆರ್. ಅನಂತಮೂರ್ತಿಯವರು ೧೯೩೨ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಮೇಳಿಗೆಯಲ್ಲಿ ಜನಿಸಿದರು.** ಶ್ರೀಯುತರು **ಸಂಸ್ಕಾರ, ಅವಸ್ಥೆ, ಆವಾಹನೆ, ಮೌನಿ, ಪ್ರಶ್ನೆ, ಎಂದೆಂದೂ ಮುಗಿಯದ ಕಥೆ ಮಿಥುನ, ಅಜ್ಜನ ಹೆಗಲ ಸುಕ್ಕುಗಳು** ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಇವರಿಗೆ **ರಾಜ್ಯೋತ್ಸವ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿಗಳು** ಲಭಿಸಿವೆ.

### ಹಂತ ೩: ಸ್ವತಂತ್ರವಾಗಿ ಬರೆಸುವದು.

**ಯು. ಆರ್. ಅನಂತಮೂರ್ತಿಯವರು ೧೯೩೨ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಮೇಳಿಗೆಯಲ್ಲಿ ಜನಿಸಿದರು.** ಶ್ರೀಯುತರು **ಸಂಸ್ಕಾರ, ಅವಸ್ಥೆ, ಆವಾಹನೆ, ಮೌನಿ, ಪ್ರಶ್ನೆ, ಎಂದೆಂದೂ ಮುಗಿಯದ ಕಥೆ ಮಿಥುನ, ಅಜ್ಜನ ಹೆಗಲ ಸುಕ್ಕುಗಳು** ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಇವರಿಗೆ **ರಾಜ್ಯೋತ್ಸವ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿಗಳು** ಲಭಿಸಿವೆ.

## ಕೃತಿಕಾರರ ಪರಿಚಯದ ಈ ಚಟುವಟಿಕೆಗಳನ್ನು ಮಕ್ಕಳು ಈ ಮೇಲಿನಂತೆ ರೂಢಿ ಮಾಡಿಕೊಳ್ಳುವುದು

**ಯು. ಆರ್. ಅನಂತಮೂರ್ತಿಯವರು ೧೯೩೨ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಮೇಳಿಗೆಯಲ್ಲಿ ಜನಿಸಿದರು.** ಶ್ರೀಯುತರು **ಸಂಸ್ಕಾರ, ಅವಸ್ಥೆ, ಆವಾಹನೆ, ಮೌನಿ, ಪ್ರಶ್ನೆ, ಎಂದೆಂದೂ ಮುಗಿಯದ ಕಥೆ ಮಿಥುನ, ಅಜ್ಜನ ಹೆಗಲ ಸುಕ್ಕುಗಳು** ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಇವರಿಗೆ **ರಾಜ್ಯೋತ್ಸವ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿಗಳು** ಲಭಿಸಿವೆ.

## ಅಭ್ಯಾಸ ಹಾಳೆ

### ಹಂತ ೧: ಪ್ರಮುಖ ಅಂಶಗಳನ್ನು ಗುರ್ತಿಸುವದು.

| | |
|---|---|
| ಕವಿ/ಸಾಹಿತಿಗಳ ಹೆಸರು | |
| ಸ್ಥಳ ,ಕಾಲ | |
| ಕೃತಿಗಳು | |
| | |
| ಬಿರುದು,ಪ್ರಶಸ್ತಿಗಳು | |

### ಹಂತ ೨ : ಬರೆಯುವ ವಿಧಾನವನ್ನು ರೂಪಿಸುವದು.

ಯು ಆರ್---------------- --ಸಾ.ಶ-----------------ರಲ್ಲಿ---------------ಜಿಲ್ಲೆಯ-------------

---------ತಾಲೂಕಿನ ---- -------------------ಯಲ್ಲಿ ಜನಿಸಿದರು.

ಇವರು---------------------------------------------------ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಇವರಿಗೆ-------------- ---------------------ಮುಂತಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

### ಹಂತ ೩: ಸ್ವತಂತ್ರವಾಗಿ ಬರೆಸುವದು.

------------------------------------------------------------------------------------------------

---

---

---

## ಪಾಠದ ಪ್ರಮುಖಾಂಶಗಳು

೧ .ಲೇಖಕರ ಊರಿನಲ್ಲಿದ್ದ ಹುಲಿಗಳ ಕಾಟ, ದನಗಳಿಗೆ ಹುಲಿಯ ಭಯ, ಬಾಲ್ಯದಲ್ಲಿ ಲೇಖಕರಿಗೆ ಉಂಟಾಗುತ್ತಿದ್ದ ಹುಲಿಯ ಭಯ.

೨. ಲೇಖಕರ ಮೊದಲ ವಿದ್ಯಾ ಗುರು ಅಮ್ಮ. ಅವರ ಅಕ್ಷರಾಭ್ಯಾಸದಲ್ಲಿ ಅಮ್ಮನ ಪಾತ್ರ.

೩.ಕಟ್ಟುನಿಟ್ಟಿನ ಮೇಷ್ಟ್ರು ಕೃಷ್ಣಪ್ಪಯ್ಯ. ರಂಜದ ಹೂಗಳು, ಹೆಣ್ಣು ಮಕ್ಕಳೆಂದರೆ ಅಮ್ಮನಿಗೆ ತುಂಬಾ ಪ್ರೀತಿ.

೪. ಮೆಳಿಗೆಯ ಶಾಲೆಯಲ್ಲಿ ಅಭ್ಯಾಸ. ಶೇಷಗಿರಿ ಮೇಷ್ಟ್ರು. ಕುಳಿಯೊಳಗಿನ ಕಪ್ಪುಹುಳ, ತನ್ನಾದೇವಿ, ಶಾಲೆಯಲ್ಲಿನ ಖುಷಿಯ ಸಂಗತಿಗಳು.

೫. ಮಳೆಗಾಲದ ಆರಂಭ, ಸಿದ್ಧತೆ, ಜೋನಿ ಬೆಲ್ಲ, ಕಾಡು ಹಲಸಿನ ಹಣ್ಣು, ಮಳೆಗಾಲದ ಅನುಭವಗಳು.

೬. ಬೇಸಿಗೆಯಲ್ಲಿ ಅಮ್ಮ ತಯಾರಿಸುತ್ತಿದ್ದ ತಿಂಡಿಗಳು ಔಷಧಿಯ ಸೊಪ್ಪುಗಳ ಸೇವನೆ ಬಾಲ್ಯದಲ್ಲಿ ಲೇಖಕರಿಗೆ ಕೃಷಿ ಕೊಡುತ್ತಿದ್ದ ಸಂಗತಿಗಳು ಬಾಲ್ಯದ ಪುನರಾವರ್ತಿತ ದೈನಿಕ.

೭. 'ಚರಟದ ಕಾಫಿ' ಮತ್ತು ಒರಿಜಿನಲ್ ಕಾಫಿ ತಯಾರಿಕಾ ವಿಧಾನ. ಬ್ಯಾರಿ. ಸಕ್ಕರೆ ಮಿಠಾಯಿ ಇತ್ಯಾದಿಗಳು.

### ಅಭ್ಯಾಸ ಹಾಳೆ

ಮೇಲಿನ ಪ್ರಮುಖ ಅಂಶಗಳ ಕ್ರಮಸಂಖ್ಯೆಗಳನ್ನು ತೆಗೆದುಹಾಕಿ ವಾಕ್ಯರೂಪದಲ್ಲಿ ಜೋಡಿಸಿ ಬರೆಯಿರಿ.

---

---

---

---

---

---

---

---

---

---

-----------------------------------------------------------------------------------------------------

-----------------------------------------------------------------------------------------------------

## ಸಂದರ್ಭ ಬರೆಯುವ ಮಾದರಿ

ಆಯ್ಕೆ: ಈ ವಾಕ್ಯವನ್ನು ಕವಿ /ಲೇಖಕರ ಹೆಸರು----------- ಅವರು ಬರೆದ ಕೃತಿ------------------- ಎಂಬ ಕೃತಿಯಿಂದ ಆಯ್ದುಕೊಂಡ ಪಾಠದ ಹೆಸರು---------------------- ಪಾಠದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ಈ ಮಾತನ್ನು /ವಾಕ್ಯವನ್ನು ಯಾರು, ಯಾರಿಗೆ, ಯಾವಾಗ ಈ ಹೇಳಿದರರು ಎಂಬ ಅಂಶಗಳನ್ನು ಬರೆಯಬೇಕು.

ಸ್ವಾರಸ್ಯ : ಈ ಮಾತಿನ/ ವಾಕ್ಯದ ವಿಶೇಷತೆಯನ್ನು/ ಮೌಲ್ಯವನ್ನು/ ಗುಣವನ್ನು ಕುರಿತು ಬರೆಯಬೇಕು.

೧. **'ಇವತ್ತು ಮೇಷ್ಟ್ರಿಗೆ ಜ್ವರ ಬರಲಿ ದೇವರೇ'**

ಆಯ್ಕೆ: ಈ ವಾಕ್ಯವನ್ನು ಡಾಕ್ಟರ್ ಯು. ಆರ್. ಅನಂತಮೂರ್ತಿಯವರು ರಚಿಸಿರುವ ಸುರಗಿ ಎಂಬ ಆತ್ಮಕಥನದಿಂದ ಆಯ್ದ 'ಅಮ್ಮ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ: ಲೇಖಕರು ತಮ್ಮ ಬಾಲ್ಯದ ದಿನಗಳಲ್ಲಿ ರಂಜದ ಹೂಗಳನ್ನು ಬಾಳೆಯ ನಾರಿನಲ್ಲಿ ಪೋಣಿಸುತ್ತಾ ಮೇಷ್ಟ್ರಿಗೆ ಆತಂಕದಲ್ಲಿ ಕಾಯುತ್ತಾ ಕುಳಿತಿರುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ಕೃಷ್ಣಪ್ಪಯ್ಯ ಮೇಷ್ಟ್ರು ಬಹಳ ಕಟ್ಟುನಿಟ್ಟಿನ ಮೇಷ್ಟ್ರಾಗಿದ್ದರು ಅವರು ಬರುವಾಗಲೇ ಬೆತ್ತವನ್ನು ತರುತ್ತಿದ್ದರು. ಆದ್ದರಿಂದ ಲೇಖಕರು "ಈ ದಿನ ಅವರು ಬರೆದಿದ್ದಾರೆ" ಸಾಕು ಎಂಬ ಭಾವನೆಯ ಮೂಲಕ ಸ್ವಾರಸ್ಯ ಪೂರ್ಣವಾಗಿ ಹೇಳುತ್ತಾರೆ.

## ಸಮಾಸ:

ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಅರ್ಥಕ್ಕೆ ಅನುಸಾರವಾಗಿ ಒಟ್ಟು ಸೇರಿ ಪೂರ್ವ ಪದದ ಅಂತ್ಯದಲ್ಲಿ ವಿಭಕ್ತಿ ಪ್ರತ್ಯಯವಿದ್ದರೆ ಅದು ಲೋಪವಾಗಿ ಒಂದೇ ಪದ ವಾಗುವುದನ್ನು ಸಮಾಸ ಎನ್ನುವರು.

### ಕನ್ನಡ ಭಾಷೆಯಲ್ಲಿ ಎಂಟು ಸಮಾಸಗಳಿವೆ, ಅವುಗಳೆಂದರೆ

೧. ತತ್ಪುರುಷ

೨. ಕರ್ಮಧಾರಯ

೩. ದ್ವಿಗು

೪. ಅಂಶಿ

೫. ದ್ವಂದ್ವ

೬. ಬಹುವ್ರೀಹಿ

೭ . ಕ್ರಿಯಾ

೮. ಗಮಕ

ಸಮಾಸ ಪದಗಳನ್ನು ಬಿಡಿಸಿ ಬರೆಯುವ ಕ್ರಮವನ್ನು **ವಿಗ್ರಹ ವಾಕ್ಯ** ಅಥವಾ **ವಿಗ್ರಹಿಸುವುದು** ಎನ್ನುವರು

ಉದಾಹರಣೆ: ತೈಲದ +ಬಿಂದುಗಳು =ತೈಲಬಿಂದುಗಳು

೧.**ತತ್ಪುರುಷ ಸಮಾಸ**: ಪೂರ್ವೋತ್ತರ ಪದಗಳು ನಾಮಪದಗಳಾಗಿದ್ದು, ಪೂರ್ವಪದದ ಅಂತ್ಯದಲ್ಲಿರುವ ವಿಭಕ್ತಿ ಪ್ರತ್ಯಯಗಳು ಸಮಾಸವಾಗುವಾಗ ಲೋಪವಾದರೆ ಅದು ತತ್ಪುರುಷ ಸಮಾಸ. ಇದರಲ್ಲಿ ಉತ್ತರಪದದ ಅರ್ಥ ಪ್ರಧಾನ.

ಬೆಟ್ಟದ + ತಾವರೆ = ಬೆಟ್ಟದಾವರೆ (ಷಷ್ಠಿ ತತ್ಪುರುಷ)

ವಯಸ್ಸಿನಿಂದ + ವೃದ್ಧ = ವಯೋವೃದ್ಧ (ತೃತೀಯ ತತ್ಪುರುಷ)

ಹಗಲಿನಲ್ಲಿ + ಕನಸು = ಹಗಲು ಕನಸು (ಸಪ್ತಮಿ ತತ್ಪುರುಷ)

ಇಲ್ಲಿ ಎರಡೆರಡು ಪದಗಳು ಸೇರಿ ಒಂದೇ ಪದವಾಗಿರುವುದು ಪೂರ್ವಪದದ ಅಂತ್ಯದಲ್ಲೇ ವಿಭಕ್ತಿ ಪ್ರತ್ಯಯವಿದ್ದು ಸಮಾಸವಾಗುವಾಗ ಆ ಪ್ರತ್ಯಯಗಳು ಲೋಪವಾಗಿರುವುದು ಕಂಡುಬರುತ್ತದೆ . ಯಾವ ವಿಭಕ್ತಿ ಪ್ರತ್ಯಯ ಲೋಪವಾಗಿದೆಯೂ ಅದರ ಆಧಾರದಿಂದ ಸಮಾಸವನ್ನು ಹೆಸರಿಸುವುದು

**೨. ಕರ್ಮಧಾರೆಯ ಸಮಾಸ** :

ಪೂರ್ವೋತ್ತರ ಪದಗಳು ಲಿಂಗ, ವಚನ, ವಿಭಕ್ತಿಗಳಿಂದ ಸಮಾನವಾಗಿದ್ದು ವಿಶೇಷಣ ವಿಶೇಷ ಸಂಬಂಧದಿಂದ ಕೂಡಿ ಆಗುವ ಸಮಾಸವೇ ಕರ್ಮಧಾರೆಯ ಸಮಾಸ. ಇದರಲ್ಲಿಯೂ ಕೂಡ ಉತ್ತರಪದ ಅರ್ಥವೇ ಪ್ರಧಾನ.

ವಿಶೇಷಣ – ವರ್ಣಿಸುವುದು

ವಿಶೇಷ – ವರ್ಣಿಸಿಕೊಳ್ಳುವುದು

ಉದಾಹರಣೆ: ಹಿರಿದು + ಮರ = ಹೆಮ್ಮರ

ಮೆಲ್ಲಿತು + ನುಡಿ = ಮೆಲ್ನುಡಿ

ದಿವ್ಯವಾದ + ಪ್ರಕಾಶ = ದಿವ್ಯಪ್ರಕಾಶ

ಇಲ್ಲಿ ಹಿರಿದು, ಮರ, ಮೇಲಿತು, ನುಡಿ ಎಂಬ ನಾಲ್ಕು ಪದಗಳು ಕನ್ನಡದವು . ದಿವ್ಯ ಪ್ರಕಾಶ ಎಂಬ ಎರಡು ಪದಗಳು ಸಂಸ್ಕೃತ ಪದಗಳು. ಸಮಾಸಗಳ ಪೂರ್ವ ಪದಗಳು ವಿಶೇಷಣಗಳಾಗಿವೆ. ದಿವ್ಯ ಸಂಸ್ಕೃತ ಪದವಾದ ಕಾರಣ ಅರ್ಥ ಸ್ಪಷ್ಟತೆಗಾಗಿ ಆದ ಎಂಬ ಪದ ಪೂರ್ವ ಪದಕ್ಕೆ ಸೇರಿ ದಿವ್ಯವಾದ ಎಂಬ ಪದ ರಚನೆಯಾಗಿದೆ. ಕನ್ನಡ ಪದಗಳಲ್ಲಿ ಹೀಗಿರುವುದಿಲ್ಲ.

**೩. ದ್ವಿಗು ಸಮಾಸ:**

ಪೂರ್ವಪದವು ಸಂಖ್ಯಾ ವಾಚಕವಾಗಿದ್ದು ಉತ್ತರಪದ ನಾಮಪದವಾಗಿದ್ದರೆ ಅದು ದ್ವಿಗು ಸಮಾಸ.

ಸಂಖ್ಯಾ ವಾಚಕ –ಸಂಖ್ಯೆಯನ್ನು ಸೂಚಿಸುವ ಪದ

ಉದಾಹರಣೆ: ಮೂರು + ಮಡಿ = ಮುಮ್ಮಡಿ

ನಾಲ್ಕು + ದೆಸೆ = ನಾಲ್ದೆಸೆ

ಪಂಚಗಳಾದ + ಇಂದ್ರಿಯ =ಪಂಚೇಂದ್ರಿಯ

ಈ ಮೂರು ಉದಾರಣೆಗಳಲ್ಲಿ ಪೂರ್ವಪದ ಸಂಖ್ಯಾ ವಾಚಕವಾಗಿದೆ ಮೂರನೇದಾದ ಪಂಚೇಂದ್ರಿಯ ಎಂಬ ಪದದಲ್ಲಿ ಎರಡು ಪದಗಳು ಸಂಸ್ಕೃತವಾದ್ದರಿಂದ 'ಆದ' ಎಂಬ ಕನ್ನಡ ಪದ ಪೂರ್ವ ಪದದೊಂದಿಗೆ ಸೇರಿಕೊಂಡಿದೆ.

## ಅಭ್ಯಾಸ ಚಟುವಟಿಕೆ

## ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

೧. ಸಮಾಸ ಎಂದರೇನು?

೨. ಸಮಾಸಗಳಲ್ಲಿ ಎಷ್ಟು ವಿಧ ?ಪಟ್ಟಿಮಾಡಿ.

೩. ತತ್ಪುರುಷ ಸಮಾಸ ಎಂದರೇನು ?ಉದಾಹರಣೆ ಕೊಡಿ.

೪. ಕರ್ಮಧಾರೆಯ ಸಮಾಸ ಎಂದರೇನು? ಉದಾಹರಣೆ ಕೊಡಿ

೫. ದ್ವಿಗು ಸಮಾಸ ಎಂದರೇನು ಉದಾಹರಣೆ ಕೊಡಿ.

# ಅಭ್ಯಾಸ ಚಟುವಟಿಕೆ

**ಕೆಳಗೆ ಕೊಟ್ಟಿರುವ ಸಮಾಸ ಪದಗಳನ್ನು ವಿಗ್ರಹವಾಕ್ಯ ಮಾಡಿ ಸಮಾಸದ ಹೆಸರನ್ನು ಬರೆಯಿರಿ.**

| ಕ್ರ.ಸಂ | ಸಮಾಸ ಪದ | ಪೂರ್ವಪದ | ಉತ್ತರಪದ | ಸಮಾಸದ ಹೆಸರು |
|---|---|---|---|---|
| ೧ | ಮರಗಾಲು | | | |
| ೨ | ಕಲ್ಲುಹಾಸಿಗೆ | | | |
| ೩ | ತಲೆನೋವು | | | |
| ೪ | ಮುಮ್ಮಡಿ | | | |
| ೫ | ಕಣ್ಣುರುಡ | | | |
| ೬ | ಅರಮನೆ | | | |
| ೭ | ದೇವಮಂದಿರ | | | |
| ೮ | ಧನರಕ್ಷಣೆ | | | |
| ೯ | ದೇಶದ್ರೋಹ | | | |
| ೧೦ | ಕಾಲುಬಳೆ | | | |
| ೧೧ | ನೀಲಕಮಲ | | | |
| ೧೨ | ಶ್ವೇತ ವಸ್ತ್ರ | | | |

ಘಟಕ ಪರೀಕ್ಷೆ **(ಅಮ್ಮ)**

ಅವಧಿ ೨೦ ನಿಮಿಷ ಅಂಕಗಳು = ೧೦

I .ಕೆಳಗೆ ಕೊಟ್ಟಿರುವ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ನೀಡಿದ್ದು ಸರಿಯಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.

೧*೩=೩

೧. ದೇಶದ್ರೋಹ ಇದು ಯಾವ ಸಮಾಸಕ್ಕೆ ಉದಾಹರಣೆಯಾಗಿದೆ?

ಅ) ತತ್ಪುರುಷ ಸಮಾಸ ಬ) ಕರ್ಮಧಾರಯ ಸಮಾಸ ಕ) ದ್ವಿಗು ಸಮಾಸ ಡ) ಯಾವುದು ಅಲ್ಲ

೨ . ನಲ್ನುಡಿ ಯಾವ ಸಮಾಸಕ್ಕೆ ಉದಾಹರಣೆಯಾಗಿದೆ ?

ಅ) ಕರ್ಮಧಾರಯ ಸಮಾಸ ಬ) ತತ್ಪುರುಷ ಕ) ದ್ವಿಗು ಡ) ಯಾವುದು ಅಲ್ಲ

೩). ನಾಲ್ವಡಿ ಯಾವ ಸಮಾಸಕ್ಕೆ ಉದಾಹರಣೆಯಾಗಿದೆ?

ಅ) ದ್ವಿಗು ಸಮಾಸ ಬ) ತತ್ಪುರುಷ ಅ) ಕರ್ಮಧಾರಯ ಸಮಾಸ ಡ) ಯಾವುದು ಅಲ್ಲ

II. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ. ೧*೩=೩

೪) ಲೇಖಕರ ಮೊದಲ ವಿದ್ಯಾ ಗುರು ಯಾರು ?

೫) ಲೇಖಕರ ಬಾಲ್ಯದ ಪುನರಾವರ್ತಿತ ದೈನಿಕ ಯಾವುದಾಗಿತ್ತು?

೬) ತಿಂಗಳಿಗೊಮ್ಮೆ ಕಾಫಿ ಬೀಜವನ್ನು ತಂದು ಕೊಡುತ್ತಿದ್ದವರು ಯಾರು?

III. ಕೆಳಗಿನ ಪ್ರಶ್ನೆಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. ೧*೨=೨

೭) ಲೇಖಕರ ಅಕ್ಷರ ಅಭ್ಯಾಸ ಆರಂಭವಾದದ್ದು ಹೇಗೆ

IV .ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ ೧*೨=೨

೮) "ಇವತ್ತು ಮೇಷ್ಟ್ರಿಗೆ ಜ್ವರ ಬರಲಿ ದೇವರೇ"

*********************************

## ಪದ್ಯ – ೭. ವಚನಾಮೃತ (ಅಲ್ಲಮಪ್ರಭು, ಆಯ್ದಕ್ಕಿ ಮಾರಯ್ಯ, ಅಮುಗೆರಾಯಮ್ಮ, ಶಿವಶರಣೆ ಲಿಂಗಮ್ಮ)

**ನಿಗದಿಪಡಿಸಿದ ಅವಧಿಗಳು – ೮**

ಅಲ್ಲಮಪ್ರಭು ೧೨ನೇ ಶತಮಾನದ ಪ್ರಸಿದ್ಧ ವಚನಕಾರ ಮತ್ತು ಶಿವಶರಣರಲ್ಲಿ ಒಬ್ಬರಾದ ಇವರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಬಳ್ಳಿಗಾವಿಯಲ್ಲಿ ಜನಿಸಿದರು. ಈತನ ತಂದೆ ನಿರಹಂಕಾರ ಮತ್ತು ತಾಯಿ ಸುಜ್ಞಾನಿ. ಗುಹೇಶ್ವರ ಎಂಬ ಅಂಕಿತನಾಮವನ್ನು ಇಟ್ಟು ವಚನಗಳನ್ನು ರಚಿಸಿದ ಇವರು ಕಲ್ಯಾಣದಲ್ಲಿ ಬಸವಣ್ಣ ಸ್ಥಾಪಿಸಿದ ಶೂನ್ಯ ಪೀಠದ ಅಧ್ಯಕ್ಷರಾಗಿದ್ದರು

### ಅಭ್ಯಾಸಕ್ಕಾಗಿ

### ಹಂತ ೧: ಪ್ರಮುಖ ಅಂಶಗಳನ್ನು ಗುರ್ತಿಸುವದು.

| | |
|---|---|
| ಕವಿ ಅಥವಾ ಸಾಹಿತಿಗಳ ಹೆಸರು | |
| ಸ್ಥಳ ಕಾಲ | |
| ಅಂಕಿತನಾಮ | |
| | |

### ಹಂತ ೨ : ಬರೆಯುವ ವಿಧಾನವನ್ನು ರೂಪಿಸುವದು.

---------------------ನೇ ಶತಮಾನದ ಪ್ರಸಿದ್ಧ---------------- ಮತ್ತು --------------------- ಶಿವಶರಣರಲ್ಲಿ ಒಬ್ಬರಾದ ಇವರು ---------------ಜಿಲ್ಲೆಯ---------- ತಾಲೂಕಿನ -------------------ಅಲ್ಲಿ ಜನಿಸಿದರು .ಈತನ ತಂದೆ---------------- ಮತ್ತು ತಾಯಿ -----------ಎಂಬ ಅಂಕಿತನಾಮದಿಂದ ರಚಿಸಿದ ಇವರು---------------------- ದಲ್ಲಿ ಬಸವಣ್ಣ ಸ್ಥಾಪಿಸಿದ ------------------------------ಅಧ್ಯಕ್ಷರಾಗಿದ್ದರು.

### ಕೃತಿಕಾರರ ಪರಿಚಯ

ಆಯ್ದಕ್ಕಿ ಮಾರಯ್ಯ: ಸಾ.ಶ ಸುಮಾರು ೧೧೬೦ರಲ್ಲಿ ರಾಯಚೂರು ಜಿಲ್ಲೆಯ ಅಮರೇಶ್ವರದಲ್ಲಿ ಜನಿಸಿದರು ಈತನ ಹೆಂಡತಿಯ ಹೆಸರು ಆಯ್ದಕ್ಕಿ ಲಕ್ಕಮ್ಮ .ಈತನ ಸುಮಾರು ೩೨ ವಚನಗಳು ದೊರೆತಿವೆ. ಇವರ ವಚನಗಳ ಅಂಕಿತ "ಅಮರೇಶ್ವರ ಲಿಂಗ" ಬೀದಿಯಲ್ಲಿ ಬಿದ್ದ ಅಕ್ಕಿಯನ್ನು ಆಯ್ದು ತಂದು ದಾಸೋಹ ಮಾಡುವುದೇ ಇವರ ಕಾಯಕವಾಗಿತ್ತು

### ಅಭ್ಯಾಸಕ್ಕಾಗಿ

### ಹಂತ ೧: ಪ್ರಮುಖ ಅಂಶಗಳನ್ನು ಗುರ್ತಿಸುವದು.

| | |
|---|---|
| ಕವಿ ಅಥವಾ ಸಾಹಿತಿಗಳ ಹೆಸರು | |
| ಸ್ಥಳ ಕಾಲ | |
| ಅಂಕಿತನಾಮ | |
| | |

### ಹಂತ ೨ : ಬರೆಯುವ ವಿಧಾನವನ್ನು ರೂಪಿಸುವದು.

ಸಾ.ಶ .ಸುಮಾರು ------------------------------ರಲ್ಲಿ ರಾಯಚೂರು ಜಿಲ್ಲೆಯ-------------ದಲ್ಲಿ ಜನಿಸಿದರು. ಈತನ ಹೆಂಡತಿಯ ಹೆಸರು---------------------------ಈತನ ವಚನಗಳು ದೊರತಿವೆ. ಇವರ ವಚನಗಳ ಅಂಕಿತ ---------------- ಬೀದಿಯಲ್ಲಿ ಬಿದ್ದ ಚಿನ್ನ ಆಯ್ದು ತಂದು ------------- ಮಾಡುವದೇ ಅವರ ---------------ವಾಗಿತ್ತು.

**ಹಂತ ೩ ಸ್ವತಂತ್ರವಾಗಿ ಬರೆಯುವುದು.**

--------------------------------------------------------------------------------------------

--------------------------------------------------------------------------------------------

--------------------------------------------------------------------------------------------

----------------------------------------------------------------------------------------

## ಕೃತಿಕಾರರ ಪರಿಚಯ

**ಅಮುಗೆ ರಾಯಮ್ಮ** :ಸಾ.ಶ ಸುಮಾರು ೧೧೬೦ ರಲ್ಲಿ **ಸೊನ್ನಲಿಗೆ** ಅಂದರೆ ಇಂದಿನ **ಸೊಲ್ಲಾಪುರ**ದಲ್ಲಿ ಜನಿಸಿದಳು. ಈಕೆಯ ಪತಿಯ ಹೆಸರು **ಅಮುಗೆದೇವಯ್ಯ** ನೇಯುವುದು ಇವರ ಕಾಯಕವಾಗಿದ್ದು ಈಕೆಯ ವಚನಗಳ ಅಂಕಿತನಾಮ **ಅಮುಗೇಶ್ವರ.**

**ಅಭ್ಯಾಸಕ್ಕಾಗಿ**

**ಹಂತ ೧: ಪ್ರಮುಖ ಅಂಶಗಳನ್ನು ಗುರ್ತಿಸುವದು.**

| | |
|---|---|
| ಕವಿ ಅಥವಾ ಸಾಹಿತಿಗಳ ಹೆಸರು | |
| ಸ್ಥಳ ಕಾಲ | |
| ಅಂಕಿತನಾಮ | |
| | |

**ಹಂತ ೨ : ಬರೆಯುವ ವಿಧಾನವನ್ನು ರೂಪಿಸುವದು.**

ಸಾ.ಶ. ಸುಮಾರು--------------- ರಲ್ಲಿ ಅಂದರೆ ಇಂದಿನ ---------------------------ದಲ್ಲಿ ಜನಿಸಿದಳು. ಈಕೆಯ ಪತಿಯ ಹೆಸರು ---------------------ಮತ್ತು --------------------ಇವರ ಕಾಯಕವಾಗಿತ್ತು. ಈಕೆಯ ವಚನಗಳ ಅಂಕಿತನಾಮ-----------------------------------------------

**ಹಂತ ೩ ಸ್ವತಂತ್ರವಾಗಿ ಬರೆಯುವುದು.**

--------------------------------------------------------------------------------------------

--------------------------------------------------------------------------------------------

--------------------------------------------------------------------------------------------

--------------------------------------------------------------------------------------------

## ಕೃತಿಕಾರರ ಪರಿಚಯ

**ಶಿವಶರಣೆ ಲಿಂಗಮ್ಮ** : **ಶಿವಶರಣೆ ಲಿಂಗಮ್ಮನವರು** ಹಡಪದ ಅಪ್ಪಣ್ಣನವರ ಧರ್ಮಪತ್ನಿಯಾಗಿದ್ದು.. ಇವರು ಸಾ.ಶ. **ಸುಮಾರು ೧೧೬೦** ರಲ್ಲಿ ಜನಿಸಿದರು. ಇವರ ವಚನಗಳ ಅಂಕಿತನಾಮ **ಅಪ್ಪಣ್ಣಪ್ರಿಯ ಚನ್ನಬಸವಣ್ಣ.**

### ಅಭ್ಯಾಸಕ್ಕಾಗಿ

**ಹಂತ ೧**

| | |
|---|---|
| ಕವಿ ಅಥವಾ ಸಾಹಿತಿಗಳ ಹೆಸರು | |
| ಸ್ಥಳ ಕಾಲ | |
| ಅಂಕಿತನಾಮ | |
| | |

### ಈ ಪದ್ಯ ಭಾಗದ ಪ್ರಮುಖ ಅಂಶಗಳು

೧. ಪರಿವರ್ತನೆ ಜಗದ ನಿಯಮ ಕಾಲಗತ್ತಿಯಲ್ಲಿ ಎಲ್ಲವೂ ಪರಿವರ್ತನೆಗೊಳಪಡುತ್ತದೆ ಎಂಬುದನ್ನು ಗುರುವಿನ ಸ್ಥಾನ ಹಾಗೂ ಶಿಷ್ಯನ ಕಲಿಕಾ ಪ್ರವೃತ್ತಿಗಳು ನಾಲ್ಕು ಯುಗಗಳಲ್ಲಿ ಹೇಗೆ ಪರಿವರ್ತನೆಯಾಗಿವೆ ಎಂಬುದರ ವರ್ಣನೆ .

೨.ಕಾಯಕದಲ್ಲಿ ನಿರತನಾಗಿರುವ ವ್ಯಕ್ತಿ ಹೇಗಿರಬೇಕು ಎಂಬುದನ್ನು ಹೇಳಲಾಗಿದೆ .ಕಾಯಕದಲ್ಲಿ ಮನುಷ್ಯ ಸರ್ವಸ್ವವನ್ನು ಕಾಣಬೇಕು ಎಂದು ಹೇಳಿದ್ದಾರೆ .

೩.ಮಾನವನು ಅರಿವು ಆಚಾರ ಸಮ್ಯಜ್ಞಾನ ಇವುಗಳಿಂದ ಭಗವಂತನ ಸಾಕ್ಷಾತ್ಕಾರವನ್ನು ಪಡೆಯಬಹುದು ಎಂಬುದನ್ನು ಹೇಳಿದ್ದಾರೆ .

೪.ನಮ್ಮ ಜೀವನದಲ್ಲಿ ಅರಿಷಡ್ವರ್ಗಗಳನ್ನು ಅಂದರೆ ಕಾಮ ,ಕ್ರೋಧ ,ಲೋಭ,ಮೋಹ,ಮದ ಮತ್ಸರಗಳನ್ನು ನಿಗ್ರಹಿಸಿ ತಮ್ಮ ತಮ್ಮ ಕಾಯಕದ ಮೂಲಕ ನಿತ್ಯ ಸುಖಿಗಳಾಗಿ ಬದುಕಬೇಕೆಂದು ವಚನಗಾರ್ತಿ ಹೇಳಿದ್ದಾರೆ.

### ಅಭ್ಯಾಸ ಹಾಳೆ :

**ಮೇಲಿನ ಪ್ರಮುಖ ಅಂಶಗಳ ಕ್ರಮ ಸಂಖ್ಯೆಗಳನ್ನು ತೆಗೆದು ಹಾಕಿ ವಾಕ್ಯ ರೂಪದಲ್ಲಿ ಜೋಡಿಸಿ ಬರೆಯಿರಿ.**

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

## ಒಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೋತ್ತರಗಳು

೧. ಕಲಿಯುಗದಲ್ಲಿ ಗುರುವು ಶಿಷ್ಯನಿಗೆ ಬುದ್ಧಿಯನ್ನು ಹೇಗೆ ಹೇಳಬೇಕಿದೆ?

ಉತ್ತರ:- ಕಲಿಯುಗದಲ್ಲಿ ಗುರುವು ಶಿಷ್ಯನಿಗೆ ಬುದ್ಧಿಯನ್ನು ವಂದಿಸಿ ಹೇಳಬೇಕಿದೆ.

೨. ಕಾಯಕದಲ್ಲಿ ನಿರತನಾದವನು ಯಾವುದನ್ನು ಮರೆಯಬೇಕು?

ಉತ್ತರ:- ಕಾಯಕದಲ್ಲಿ ನಿರತನಾದವನು ಗುರುದರ್ಶನ ಲಿಂಗಪೂಜೆ, ಜಂಗಮರನ್ನು ಮರೆಯಬೇಕು

೩. ಆಯ್ದಕ್ಕಿ ಮಾರಯ್ಯನ ಪ್ರಕಾರ ಕೈಲಾಸ ಯಾವುದು.?

ಉತ್ತರ:- ಆಯ್ದಕ್ಕಿ ಮಾರಯ್ಯನ ಪ್ರಕಾರ ಕಾಯಕವೇ ಕೈಲಾಸ

೪. ಕಾಗೆಯು ಏನಾಗಲು ಸಾಧ್ಯವಿಲ್ಲ?

ಉತ್ತರ:- ಕಾಗೆಯು ಕೋಗಿಲೆಯಾಗಲು ಸಾಧ್ಯವಿಲ್ಲ

೫. ಯಾರ ಮುಖವನ್ನು ನೋಡಲಾಗದು.?

ಉತ್ತರ:- ಸಮ್ಯಜ್ಞಾನ ಅರಿಯದ ಗಾವಿಲರ ಮುಖ ನೋಡಲಾಗದು

೬. ಶರಣರು ಕೆಡಿಸುವ ನಿದ್ರೆಯನ್ನು ಹೇಗೆ ಗೆದ್ದಿದ್ದಾರೆ?

ಉತ್ತರ:- ಶರಣರು ಕೆಡಿಸುವ ನಿದ್ರೆಯನ್ನು ಯೋಗ ಸಮಾಧಿ ಮಾಡಿ ಗೆದ್ದಿದ್ದಾರೆ.

## ಹೆಚ್ಚುವರಿ ಒಂದು ವಾಕ್ಯದ ಪ್ರಶ್ನೆಗಳು

೧. ಅಲ್ಲಮಪ್ರಭುಗಳ ವಚನಗಳ ಅಂಕಿತನಾಮವೇನು?

೨. ಕೃತ ಯುಗದಲ್ಲಿ ಗುರು ಶಿಷ್ಯನಿಗೆ ಹೇಗೆ ಬುದ್ಧಿಯನ್ನು ಕಲಿಸುತ್ತಿದ್ದನು?

೩. ಆಯ್ದಕ್ಕಿ ಮಾರಯ್ಯನವರ ಕಾಯಕ ಯಾವುದು?

೪. ಆಯ್ದಕ್ಕಿ ಮಾರಯ್ಯನ ವಚನಗಳ ಅಂಕಿತನಾಮವೇನು?

೫. ಆಡಿನ ಮರಿ ಏನಾಗಲು ಸಾಧ್ಯವಿಲ್ಲ?

೬. ಅಮುಗೆ ರಾಯಮ್ಮ ನವರ ವಚನಗಳ ಅಂಕಿತನಾಮವೇನು?

೭. ಅರಿಷಡ್ವರ್ಗಗಳು ಯಾವವು?

೮. ಶಿವಶರಣೆ ಲಿಂಗಮ್ಮನವರ ಪತಿಯ ಹೆಸರೇನು?

೯.. ಶಿವಶರಣೆ ಲಿಂಗಮ್ಮನವರ ವಚನಗಳ ಅಂಕಿತನಾಮ ಯಾವುದು?

### ಅಭ್ಯಾಸ ಚಟುವಟಿಕೆ

**೧೨ನೇ ಶತಮಾನದ ಸುಮಾರು ೨೦ ಪ್ರಸಿದ್ಧ ವಚನಕಾರರ ಹೆಸರು ಮತ್ತು ಅಂಕಿತನಾಮಗಳನ್ನು ಸಂಗ್ರಹಿಸಿ ಬರೆಯಿರಿ**

## ಪದ್ಯ ಭಾಗದಲ್ಲಿ ಬಂದಿರುವ ಸಾಂದರ್ಭಿಕ ಹೇಳಿಕೆಗಳು

ಆಯ್ಕೆ :-ಈ ವಾಕ್ಯವನ್ನು ಅಲ್ಲಮಪ್ರಭು /ಆಯ್ದಕ್ಕಿ ಮಾರಯ್ಯ / ಅಮುಗೆ ರಾಯಮ್ಮ / ಶಿವಶರಣೆ ಲಿಂಗಮ್ಮ ರಚಿಸಿರುವ ವಚನಗಳಿಂದ ವಚನಾಮೃತ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

| ಪದ್ಯ | ಸಾಂದರ್ಭಿಕ ಪ್ರಶ್ನೆಗಳು | ಯಾರು ?ಯಾರಿಗೆ? | ಸಂದರ್ಭ |
|---|---|---|---|
| ವಚನಾಮೃತ | "ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾ ಬೆರಗಾದೆ" | ಅಲ್ಲಮ ಪ್ರಭುಗಳು ಓದುಗರಿಗೆ | ಗುರುಶಿಷ್ಯರ ಸಂಬಂಧಗಳು ಕಾಲಗತ್ತಿಯಲ್ಲಿ ಬದಲಾದ ಬಗ್ಗೆ ಹೇಳುವಾಗ |
| | "ನಾಮವನೊತ್ತುಕೊಂಡು ತಿರುಗುವ ಗಾವಿಲರ ಮುಖ ನೋಡಲಾಗದು" | ಅಮುಗೆರಾಯಮ್ಮ ಓದುಗರಿಗೆ | ಅರಿವು ಆಚಾರ ಸಮ್ಯ ಜ್ಞಾನಗಳ ಬಗ್ಗೆ ಹೇಳುವಾಗ |
| | "ಜಂಗಮ ಮುಂದೆ ನಿಂತಿದ್ದಡೂ ಹಂಗು ಹರಿಯಬೇಕು" | ಆಯ್ದಕ್ಕೆ ಮಾರಯ್ಯ ಓದುಗರಿಗೆ | ಕಾಯಕದಲ್ಲಿ ನಿರತನಾದವನು ಹೇಗೆ ಇರಬೇಕೆಂದು ಹೇಳುವಾಗ |
| | "ಕಾಯಕವನ್ನೇ ಪ್ರಸಾದ ಮಾಡಿ ಕಾಯಕ ಮಾಡಿ ಸಲುಹಿದರು" | ಶಿವಶರಣೆ ಲಿಂಗಮ್ಮ ಓದುಗರಿಗೆ | ಶರಣನಾದವನು ಹೇಗಿರಬೇಕೆಂದು ಹೇಳುವಾಗ |

**ಈ ಕೆಳಗಿನ ಮಾದರಿಯಲ್ಲಿ ಎಲ್ಲಾ ಸಂದರ್ಭಗಳನ್ನು ಗೃಹ ಕಾರ್ಯ ಪುಸ್ತಕದಲ್ಲಿ ಬರೆಯಿಸಿ ರೂಡಿಸುವುದು**

**ಆಯ್ಕೆ :–** ಈ ವಾಕ್ಯವನ್ನು-----------------ರವರು ಬರೆದಿರುವ---------------- ಕೃತಿಯಿಂದ ಆಯ್ದುಕೊಂಡ----- ---- ------- ----- ಪದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ .

**ಸಂದರ್ಭ**:– ಈ ಮಾತನ್ನು ಯಾರು? ಯಾರಿಗೆ? ಯಾವಾಗ? ಹೇಗೆ ಹೇಳಿದರು ಎಂಬ ಅಂಶಗಳನ್ನು ಬರೆಯಿಸಬೇಕು .

**ಸ್ವಾರಸ್ಯ** :–ಈ ಮಾತಿನ ವಿಶೇಷತೆಯನ್ನು/ ಮೌಲ್ಯವನ್ನು/ ಗುಣವನ್ನು ಕುರಿತು ಬರೆಯರಿಸಬೇಕು.

## ಕಂಠಪಾಠ

ಕಾಯಕದಲ್ಲಿ ನಿರತನಾದಡೆ
ಗುರುದರ್ಶನವಾದಡು ಮರೆಯಬೇಕು
ಲಿಂಗಪೂಜೆಯಾದಡೂ ಮರೆಯಬೇಕು
ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು

ಕಾಗೆಯಮರಿಯ ಕೋಗಿಲೆಯಾಗಬಲ್ಲುದೆ ?
ಆಡಿನ ಮರಿ ಆನೆಯಾಗಬಲ್ಲುದೆ ?
ಸೀಳ ನಾಯಿ ಸಿಂಹದ ಮರಿಯಾಗಬಲ್ಲುದೆ?
ಅರಿವು ಆಚಾರ ಸಮ್ಯಜ್ಞಾನವನರಿಯದೆ
ನಾಮವ ಹೊತ್ತುಕೊಂಡು ತಿರುಗುವಾಗ ಗಾವಿಲರ
ಮುಖವ ನೋಡಲಾಗದು ಅಮುಗೇಶ್ವರಾ

## ಮಾದರಿ ೧, ಪದ್ಯವನ್ನು ಹಲವು ಸಲ ನೋಡಿ ಬರೆಯಲು ತಿಳಿಸಿ ರೂಢಿಗೊಳಿಸುವದು

| | |
|---|---|
| ಕಾಯಕದಲ್ಲಿ ನಿರತನಾದಡೆ | ಗುರುದರ್ಶನವಾದಡು ಮರೆಯಬೇಕು |
| -------------------------- | -------------------------- |
| -------------------------- | -------------------------- |
| ಗುರುದರ್ಶನವಾದಡೂ ಮರೆಯಬೇಕು | ಜಂಗಮ ಮುಂದೆ ನಿಂದಿದ್ದಳಡೂ ಹಂಗ ಹರಿಯಬೇಕು |
| -------------------------- | -------------------------- |
| -------------------------- | -------------------------- |
| ಕಾಯಕವೇ ಕೈಲಾಸವಾದ ಕಾರಣ | ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು |
| -------------------------- | -------------------------- |
| -------------------------- | -------------------------- |

### ಅಭ್ಯಾಸ ಸುಳಿವು ನೀಡಿ ಬರೆಸುವುದು

ಪೂರ್ಣ ಪದ್ಯವನ್ನು ಸ್ಮರಿಸಿಕೊಂಡು ಬರೆಯಿರಿ

| | |
|---|---|
| | |
| | |
| | |
| | |
| | |
| | |

## ಮಾದರಿ .೨ ಪದ್ಯವನ್ನು ಹಲವು ಸಲ ನೋಡಿ ನಬರೆಯಲು ತಿಳಿಸಿ :ಒಂದೊಂದು ರೂಢಿಸುವದು.

| | |
|---|---|
| ೧. ಕಾಗೆಯಮರಿಯ ಕೋಗಿಲೆಯಾಗಬಲ್ಲುದೆ ? | ೨. ಆಡಿನ ಮರಿ ಆನೆಯಾಗಬಲ್ಲದೆ ? |
| | |
| | |
| ೩. ಸೀಳ ನಾಯಿ ಸಿಂಹದ ಮರಿಯಾಗಬಲ್ಲುದೆ? | ೪.ಅರಿವು ಆಚಾರ ಸಮ್ಯಜ್ಞಾನವನರಿಯದೆ |
| | |
| | |
| ೫.ನಾಮವ ಹೊತ್ತುಕೊಂಡು ತಿರುಗವ ಗಾವಿಲರ | ೬.ಮುಖವ ನೋಡಲಾಗದು ಅಮುಗೇಶ್ವರಾ |
| | |
| | |

ಅಭ್ಯಾಸ: ಸುಳಿವು ನೀಡಿ ಬರೆಸುವದು

| ಮಾದರಿ ೩. : ಒಂದೊಂದು ಸಾಲನ್ನು ಬರೆದು ರೂಡಿಸಿಕೊಳ್ಳಿ | |
|---|---|
| ಕಾಗೆಯ ಮರಿ ................................... | ....................................................... |
| ಆಡಿನ ಮರಿ...................................... | ಆಡಿನ ಮರಿ ಆನೆಯಾಗಬಲ್ಲುದೆ? |
| ಸೀಳ ನಾಯಿ.................................. | ...................................................... |
| ಅರಿವು ಆಚಾರ............................... | ಸೀಳ ನಾಯಿ ಸಿಂಹದ ಮರಿಯಾಗಬಲ್ಲುದೆ? |
| ನಾಮವ........................................ | ...................................................... |
| ಮುಖವ...................................... | ಮುಖವ ನೋಡಲಾಗದು ಅಮುಗೇಶ್ವರಾ |

| ಪೂರ್ಣ ಪದ್ಯವನ್ನು ಸ್ಮರಿಸಿಕೊಂಡು ಬರೆಯಿರಿ | |
|---|---|
| | |

## ಅಭ್ಯಾಸ ಚಟುವಟಿಕೆ ;

**ಪದ್ಯಭಾಗವನ್ನು ಹೊಂದಿಸಿ ಬರೆಯಿರಿ.**

| ಅ | ಬ |
|---|---|
| ೧.ಕಾಗೆಯ ಮರಿ | ಅ.ಆನೆಯಾಗಬಲ್ಲದೇ |
| ೨. ಆಡಿನ ಮರಿ | ಬ. ಸಮ್ಯಜ್ಞಾನವನರಿಯದೆ |
| ೩. ಸೀಳನಾಯಿ | ಕ. ಕೋಗಿಲೆಯಾಗಬಲ್ಲದೇ? |
| ೪.ಅರಿವು ಆಚಾರ | ಡ. ಸಿಂಹದ ಮರಿಯಾಗಬಲ್ಲದೇ? |
| ೫.ನಾಮವ ಹೊತ್ತುಕೊಂಡು | ಇ. ಅಮುಗೇಶ್ವರಾ? |
| ೬.ಮುಖವ ನೋಡಲಾಗದು | ಫ. ತಿರುಗುವ ಗಾವಿಲರ |

## ವ್ಯಾಕರಣಾಂಶ : ಪ್ರಬಂಧ ರಚನೆ

ಪ್ರಬಂಧವು ಗದ್ಯ ಸಾಹಿತ್ಯದ ಒಂದು ಜನಪ್ರಿಯ ಪ್ರಕಾರವಾಗಿದ್ದು ಇವುಗಳನ್ನು ಓದುವುದರಿಂದ ವಿಷಯ ಮತ್ತು ಭಾಷೆಗಳ ಎರಡರ ಜ್ಞಾನ ಒಂದೇ ಸಮಯದಲ್ಲಿ ಸಿಗುತ್ತದೆ. ಪ್ರಬಂಧ ಸಾಹಿತ್ಯವು ಸರಳವೂ, ಉಪಯುಕ್ತವೂ ಆಗಿದ್ದು. ಸಮಕಾಲೀನ ಜಗತ್ತನ್ನು ಅರಿಯಲು ಸಹಕಾರಿಯಾಗಿದೆ. ತರ್ಕಬದ್ದ ವಾಕ್ಯ ಮತ್ತು ವಿಚಾರಗಳಿಂದ ಸುಸಂಬದ್ಧವಾಗಿ ಬರೆಯಲ್ಪಟ್ಟ ಬಂಧವೇ ಪ್ರಬಂಧ. ಅಂದರೆ ವಿಚಾರಗಳನ್ನು ಕ್ರಮಬದ್ಧವಾಗಿ ಅರ್ಥಪೂರ್ಣವಾಗಿ ಬರೆಯುವುದನ್ನು ಪ್ರಬಂಧ ಎನ್ನುತ್ತೇವೆ.

## ಪ್ರಬಂಧ ರಚನೆಯ ಹಂತಗಳು :

೧.ವಿಷಯದ ಆಯ್ಕೆ

೨.ಮಾಹಿತಿಯ ಸಂಗ್ರಹ

೩.ವಿಷಯವನ್ನು ಕ್ರಮಬದ್ಧವಾಗಿ ಜೋಡಿಸುವುದು

೪.ನಿರ್ದಿಷ್ಟ ಚೌಕಟ್ಟಿನಲ್ಲಿ ವಿಷಯ ಮಂಡನೆ

೫. ಪರಿಶೀಲನೆ

೬ .ಪ್ರಕಟಣೆ

## ಮೇಲಿನ ಹಂತಗಳನ್ನು ಆಧರಿಸಿ ಈ ಕೆಳಗಿನ ವಿಷಯಗಳ ಮೇಲೆ ಪ್ರಬಂಧಗಳನ್ನು ಬರೆಯಿರಿ

೧. ರಾಷ್ಟ್ರೀಯ ಹಬ್ಬಗಳು

೨. ಜಾಗತಿಕ ತಾಪಮಾನ

೩ .ಪರಿಸರ ಮಾಲಿನ್ಯ

೪ .ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ

೫. ಗ್ರಂಥಾಲಯದ ಮಹತ್ವ

೬. ನನ್ನ ನೆಚ್ಚಿನ ಪುಸ್ತಕ

## ಮಾದರಿ ಪ್ರಬಂಧ

## ರಾಷ್ಟ್ರೀಯ ಹಬ್ಬಗಳ ಮಹತ್ವ

**ಪೀಠಿಕೆ /ಪ್ರಸ್ತಾವನೆ ;** ಒಂದು ದೇಶದ ಏಕತೆಯನ್ನು ಕಾಪಾಡುವಲ್ಲಿ ರಾಷ್ಟ್ರೀಯ ಹಬ್ಬಗಳು ಬಹಳ ಪ್ರಾಮುಖ್ಯತೆಯನ್ನು ವಹಿಸುತ್ತವೆ .ಭಾರತದಂತಹ ವಿವಿಧತೆ ಹೊಂದಿದ ದೇಶಗಳಲ್ಲಿ ಏಕತೆ ತರುವುದು ಇಂತಹ ರಾಷ್ಟ್ರೀಯ ಹಬ್ಬಗಳ ಮೂಲಕ ಸಾಧ್ಯವಿದೆ .ಇಡೀ ರಾಷ್ಟ್ರದ ಜನರೆಲ್ಲರೂ ಯಾವುದೇ ಭೇದಭಾವವಿಲ್ಲದೆ ಜಾತಿ ಮತ ಧರ್ಮ ಪ್ರಾದೇಶಿಕ ಭಿನ್ನತೆಯನ್ನು ತೊರೆದು ಒಂದಾಗಿ ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು. ನಮ್ಮ ದೇಶದಲ್ಲಿ ಮೂರು ರಾಷ್ಟ್ರೀಯ ಹಬ್ಬಗಳನ್ನು ಘೋಷಿಸಲಾಗಿದೆ ಅವುಗಳೆಂದರೆ

೧. ಸ್ವಾತಂತ್ರ್ಯ ದಿನಾಚರಣೆ

೨. ಗಣರಾಜ್ಯೋತ್ಸವ

೩. ಗಾಂಧಿ ಜಯಂತಿ.

## ವಿಷಯ ನಿರೂಪಣೆ ಮಂಡನೆ ;

**೧. ಸ್ವಾತಂತ್ರ್ಯ ದಿನಾಚರಣೆ** ;ಸುಮಾರು ವರ್ಷಗಳ ಕಾಲ ಬ್ರಿಟಿಷರ ಆಳ್ವಿಕೆಯಲ್ಲಿ ನಲುಗಿ ಹೋಗಿದ್ದ ಭಾರತೀಯರಿಗೆ ಸ್ವಾತಂತ್ರ್ಯ ಎಂಬುದೇ ಇರಲಿಲ್ಲ.ದೇಶದಲ್ಲಿ ದುರಾಡಳಿತ ನಡೆಸುತ್ತಿದ್ದ ಬ್ರಿಟಿಷರ ವಿರುದ್ಧ ನಮ್ಮ ದೇಶದ ಜನರೆಲ್ಲ ಒಂದಾಗಿ ಸ್ವಾತಂತ್ರ್ಯದ ರಣಕಹಳೆ ಊದಿ ಕೊನೆಗೆ ೧೯೪೭ ಆಗಸ್ಟ್ ೧೫ರಂದು ಸ್ವಾತಂತ್ರ್ಯವನ್ನು ಪಡೆದರು.ಇದರ ಸವಿನೆನಪಿಗಾಗಿ ಭಾರತೀಯರೆಲ್ಲರೂ ಪ್ರತಿ ವರ್ಷ ಆಗಸ್ಟ್ ೧೫ ರಂದು ರಾಷ್ಟ್ರಧ್ವಜವನ್ನು ಹಾರಿಸಿ ದಿನಾಚರಣೆ ಮಾಡಿ ಒಗ್ಗಟ್ಟು ಪ್ರದರ್ಶಿಸುತ್ತಾರೆ.

**೨. ಗಣರಾಜ್ಯೋತ್ಸವ;** ನಮ್ಮ ದೇಶವು ಸ್ವಾತಂತ್ರ್ಯ ಹೊಂದಿದ ನಂತರ ಆಡಳಿತದ ರೂಪುರೇಷೆಗಳನ್ನು ರೂಪಿಸಲು ಒಂದು ಸಂವಿಧಾನದ ಅವಶ್ಯಕತೆ ಉಂಟಾಯಿತು. ಎಲ್ಲಾ ರಾಜ್ಯಗಳನ್ನು ಗಣಗಳನ್ನಾಗಿ ಮಾಡಿ ಉತ್ತಮವಾದ ಆಡಳಿತ ನಡೆಸಲು ಕಾನೂನು ರೂಪ ಪಡೆದ

ಸಂವಿಧಾನವನ್ನು ಜನವರಿ ೨೬ ೧೯೫೦ ರಂದು ಜಾರಿಗೆ ತರಲಾಯಿತು.ಆ ದಿನವೇ ಗಣರಾಜ್ಯ ದಿನ ಈ ದಿನ ರಾಷ್ಟ್ರಧ್ವಜವನ್ನು ಹಾರಿಸಿ ದೇಶದ ಪ್ರಜೆಗಳೆಲ್ಲರೂ ಒಗ್ಗಟ್ಟಾಗಿ ಸಂವಿಧಾನದ ನಿರ್ಮಾತೃಗಳು ಹಾಗೂ ತತ್ವಗಳನ್ನು ಸ್ಮರಿಸುತ್ತಾರೆ.

**೩. ಗಾಂಧಿ ಜಯಂತಿ;** ನಮ್ಮ ದೇಶ ಸ್ವಾತಂತ್ರ ಗಳಿಸಲು ನಡೆಸಿದ ಸ್ವಾತಂತ್ರ್ಯ ಹೋರಾಟದ ನಾಯಕತ್ವ ವಹಿಸಿಕೊಂಡ ಅಗ್ರಗಣ್ಯ ನಾಯಕರೇ ಮಹಾತ್ಮ ಗಾಂಧೀಜಿ. ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿ ಕೊಟ್ಟು ರಾಷ್ಟ್ರಪಿತ ಎಂದು ಕರೆಸಿಕೊಂಡ ಗಾಂಧೀಜಿಯವರ ಹುಟ್ಟಿದ ದಿನವನ್ನು ಅಂದರೆ ಅಕ್ಟೋಬರ್ ೨ ದಿನವನ್ನು ರಾಷ್ಟ್ರೀಯ ಹಬ್ಬವೆಂದು ಆಚರಿಸುತ್ತೇವೆ. ಅವರ ಆದರ್ಶಗಳನ್ನು ನೆನೆಯುತ್ತಾ ಅವರನ್ನು ಸ್ಮರಿಸಿಕೊಳ್ಳುತ್ತಾ ದೇಶದ ಸ್ವಾತಂತ್ರ್ಯದ ಮಹತ್ವವನ್ನು ಕೊಂಡಾಡುವ ದಿನ ಇದಾಗಿದೆ.

**ಉಪಸಂಹಾರ /ಮುಕ್ತಾಯ;**

ಭಾರತದಲ್ಲಿ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವುದರಿಂದ ದೇಶದ ಪ್ರತಿಯೊಬ್ಬ ನಾಗರಿಕರಲ್ಲಿ ಏಕತೆ, ದೇಶಭಕ್ತಿ, ಸಂವಿಧಾನದ ಮಹತ್ವ, ನಾಯಕತ್ವದ ಮಹತ್ವ ಮುಂತಾದ ವಿವರಗಳನ್ನು ತಿಳಿಯಲು ಮತ್ತು ನಾವು ಅದೇ ರೀತಿಯಲ್ಲಿ ನಡೆದುಕೊಳ್ಳಲು ನೆರವಾಗುತ್ತದೆ ಎಂಬ ಆಶಯವನ್ನು ಇಟ್ಟುಕೊಳ್ಳೋಣ.

**ಮಾದರಿ ಪ್ರಬಂಧದಂತೆ ನಿಮ್ಮ ಗೃಹಕಾರ್ಯ ಪುಸ್ತಕದಲ್ಲಿ ಈ ಕೆಳಗಿನ ವಿಷಯಗಳ ಕುರಿತು ಪ್ರಬಂಧ ರಚಿಸಿರಿ.**

೧. ಪರಿಸರ ಮಾಲಿನ್ಯ

೨. ಗ್ರಂಥಾಲಯದ ಮಹತ್ವ.

****************************************

## ಘಟಕ ಪರೀಕ್ಷೆ ಪದ್ಯಪಾಠ–೭ (ವಚನಾಮೃತ)

ಅವಧಿ ೨೦ ನಿಮಿಷ ಅಂಕಗಳು = ೧೦

I.ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ ೧*೩=೩

೧. ಆಯ್ದಕ್ಕಿ ಮಾರಯ್ಯನ ಪ್ರಕಾರ ಕೈಲಾಸ ಯಾವುದು ?

೨. ಕಾಗೆಯು ಏನಾಗಲು ಸಾಧ್ಯವಿಲ್ಲ ?

೩. ಕಲಿಯುಗದಲ್ಲಿ ಗುರು ಶಿಷ್ಯನಿಗೆ ಹೇಗೆ ಬುದ್ಧಿಯನ್ನು ಹೇಳಬೇಕಿದೆ ?

II. ಕೊಟ್ಟಿರುವ ಪ್ರಶ್ನೆಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ ೧*೨=೨

೪. ಶಿವಶರಣರು ಜಗತ್ತನ್ನೇ ಗೆದ್ದಿಹ ವಿಚಾರದಲ್ಲಿ ಲಿಂಗಮ್ಮನ ಅನಿಸಿಕೆ ಏನು?

III. ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ ೧*೨=೨

೫ "ಜಂಗಮ ಮುಂದೆ ಹಂಗು ಹರಿಯಬೇಕು"

IV. ಕೊಟ್ಟಿರುವ ವಿಷಯಗಳಲ್ಲಿ ಒಂದರ ಮೇಲೆ ಪ್ರಬಂಧ ರಚಿಸಿರಿ ೧*೩=೩

–ರಾಷ್ಟ್ರೀಯ ಹಬ್ಬಗಳು

–ಪರಿಸರ ಮಾಲಿನ್ಯ

–ಗ್ರಂಥಾಲಯ ಮಹತ್ವ

## ಪ.ಪೂ.ಅ.-೬. ಸೀಮೆ – ( ಡಾ. ಚಂದ್ರಶೇಖರ ಕಂಬಾರ )

### ನಿಗದಿಪಡಿಸಿದ ಅವಧಿಗಳು – ೧



ಡಾ. ಚಂದ್ರಶೇಖರ ಕಂಬಾರ

### ಅಭ್ಯಾಸ

೧. ಮುದುಕಿಯನ್ನು ಭೇಟಿಯಾದ ವ್ಯಕ್ತಿ ಯಾರು?

ಉತ್ತರ: ಮುದುಕಿಯನ್ನು ಭೇಟಿಯಾದ ವ್ಯಕ್ತಿ ತಿಮ್ಮರಾಯ

೨. ತಿಮ್ಮರಾಯನಿಗೆ ಮುದುಕಿಯು ವಿಧಿಸಿದ ಸೀಮೆಗಳನ್ನು ತಿಳಿಸಿ?

ಉತ್ತರ: ತಿಮ್ಮರಾಯನಿಗೆ ಮುದುಕಿಯು ವಿಧಿಸಿದ ಸೀಮೆಗಳೆಂದರೆ ಅಕಾ, ಆ ನೀರು ಕೊಡುವ ಮರ ಇದೆಯಲ್ಲ, ಒಂದೇಟು ಹಾಕಿದರಾಯ್ತು, ನೀರು ಕೊಡುತ್ತದೆ. ಬೇಕಾದಷ್ಟು ನೀರು ಕುಡಿಯಬಹುದು. ಮತ್ತು ಹಣ್ಣಿನ ಮರ, ನೀನು ಮಕ್ಕಳೊಂದಿಗೆ ನಿಮಗೆ ಸಾಕಾಗುವಷ್ಟು ಹಣ್ಣು ಕೊಡುತ್ತದೆ. ಇನ್ನು ಸ್ವಲ್ಪ ದೂರದಲ್ಲಿ ಮರವಿದೆಯಲ್ಲ ಆ ಮರಕ್ಕೆ ನೀನು ಒಂದೇಟು ಹಾಕಿದರೆ ನಿನ್ನ ಕುಟುಂಬಕ್ಕೆ ಸಾಲುವಷ್ಟು ಹಾಲು ಸುರಿಸುತ್ತದೆ ಎಂದು ಹೇಳಿದಳು.

೩. ಶಿವಪುರದಲ್ಲಿನ ಮುದುಕ ಚಿಂತಿಸುತ್ತಿದ್ದರು ಏಕೆ?

ಉತ್ತರ : ನೀವು ಯಾಕೆ ನಿರಾತಂಕವಾಗಿ ಓಡಾಡುತ್ತೀರೋ (ನಿಮಗೆಲ್ಲ ಗೊತ್ತಿದೆ) ಪ್ರಕೃತಿ ನಾಶವಾಗುತ್ತಿದೆ ಎಂದು ಚಿಂತಿಸುತ್ತಿದ್ದನು,

ಮುದುಕನ್ನು ಹೇಳುವಂತೆ ಕಥೆಯೇ ನಿಜ ಸಂಗತಿ ಯಾವುದು?

ಉತ್ತರ: ಮುದುಕನ್ನು ಹೇಳುವಂತೆ ರಕ್ತದ ಮಡುವಿನಲ್ಲಿ ಭೂಮಿ ಮತ್ತು ತಿಮ್ಮನ ಸಂಸಾರ ಮುಳುಗಿ ಹೋಯಿತು ಇದೇ ನಿಜ ಸಂಗತಿಯಾಗಿದೆ.

೪. ಆಸೆ ಮಿತಿಮೀರಿ ತಿಮ್ಮರಾಯ ಮಾಡಿದ್ದೇನು?

ಉತ್ತರ : ಆಸೆ ಮಿತಿಮೀರಿ ತಿಮ್ಮರಾಯನು ನಾಯಿ ಬೊಗಳಿದರೂ ಕ್ಯಾರೆ ಮಾಡದೆ ಹಾಲಿನ ಮರಕ್ಕೆ ಮತ್ತೆ ಮತ್ತೆ ಎರಡು ಹಲವೇಟು ಹಾಕಿ ಹಾಲಿನ ಮರವನ್ನು ಕೆಡುವಿದನು.

### ಅಭ್ಯಾಸ ಹಾಳೆ:

ಗಿಡಮರಗಳನ್ನು ಕಡಿಯುವುದರಿಂದ ಮತ್ತು ಪರಿಸರವನ್ನು ನಾಶ ಮಾಡುವುದರಿಂದಾಗುವ ಪರಿಣಾಮಗಳನ್ನು ಪಟ್ಟಿಮಾಡಿ

## ಘಟಕ ಪರೀಕ್ಷೆ – ೨೦ ( ಸೀಮೆ )

**ನಿಗದಿಪಡಿಸಿದ ಅವಧಿ – ೧** **ಅಂಕಗಳು – ೧೦**

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **೪ * ೧ = ೪**

೧. ಡಾ. ಚಂದ್ರಶೇಖರ ಕಂಬಾರರ ಯಾವ ಸಂಕಲನದಿಂದ ಯಾವ ಕತೆಯಿಂದ ' ಸೀಮೆ ' ಪಾಠವನ್ನು ಆಯ್ದುಕೊಳ್ಳಲಾಗಿದೆ?

------------------------------------------------------------------------

------------------------------------------------------------------------

೨.ಮುದುಕಿಯನ್ನು ಭೇಟಿಯಾದ ವ್ಯಕ್ತಿಯಾರು ?

------------------------------------------------------------------------

೩.ಮುದುಕ ಹೇಳಿದ ಕತೆಯಲ್ಲಿ ಬರುವ ಬಡವನ ಹೆಸರೇನು ?

------------------------------------------------------------------------

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **೩ * ೨ = ೬**

೪.ತಿಮ್ಮರಾಯನಿಗೆ ಮುದುಕಿಯು ವಿಧಿಸಿದ ಸೀಮೆಗಳನ್ನು ತಿಳಿಸಿ.

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

೫.ಮುದುಕನು ಹೇಳುವಂತೆ ಕಥೆಯ ನಿಜ ಸಂಗತಿ ಯಾವುದು ?

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

೬.ಆಸೆ ಮಿತಿಮೀರಿ ತಿಮ್ಮರಾಯ ಮಾಡಿದ್ದೇನು ?

------------------------------------------------------------------------

------------------------------------------------------------------------

------------------------------------------------------------------------

------------------------------------------------------------------------

******************************

## ಗದ್ಯ – ೮. ಸಪ್ತಾಕ್ಷರಿ ಮಂತ್ರ – ( ಮುದ್ದಣ )

**ನಿಗದಿಪಡಿಸಿದ ಅವಧಿಗಳು – ೭**



### ಕೃತಿಕಾರರ ಪರಿಚಯ:–

**'ಮುದ್ದಣ'** ಕಾವ್ಯನಾಮದಿಂದ ಹೆಸರಾಗಿರುವ **'ಲಕ್ಷ್ಮೀನಾರಾಯಣಪ್ಪ'ರವರು** ಸಾ.ಶ.ಸುಮಾರು **೧೮೭೦ ಜನವರಿ ೨೪** ರಂದು **ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ನಂದಳಿಕೆ** ಗ್ರಾಮದಲ್ಲಿ ಜನಿಸಿದರು. **ತಂದೆ ತಿಮ್ಮಪ್ಪಯ್ಯ ತಾಯಿ ಮಹಾಲಕ್ಷ್ಮಮ್ಮರವರಾಗಿದ್ದಾರೆ.** ಶ್ರೀ ಮಹಾಲಿಂಗೇಶ್ವರ ದೇವಳದಲ್ಲಿ ಮಾಲೆಗಾರರಾಗಿದ್ದರು.

ಉಡುಪಿಯ ಬೋರ್ಡ್ ಹೈಸ್ಕೂಲಿನಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಾಗಿ ಮಾಸಿಕ ಹತ್ತು ರೂಪಾಯಿ ವೇತನ ಪಡೆಯುತ್ತಿದ್ದರು. ಮಳಲಿ ಸುಬ್ಬರಾಯರೆಂಬ ವಿದ್ವಾಂಸರಿಂದ ಸಾಹಿತ್ಯಾಸಕ್ತಿಯನ್ನು ಹೊಂದಿ **'ರತ್ನಾವತಿ ಕಲ್ಯಾಣ', 'ಕುಮಾರ ವಿಜಯ' , 'ಶ್ರೀರಾಮಪಟ್ಟಾಭಿಷೇಕಂ','ಅದ್ಭುತ ರಾಮಾಯಣ' ಮತ್ತು 'ರಾಮಾಶ್ವಮೇಧಂ'** ಎಂಬ ಕೃತಿಗಳನ್ನು ರಚಿಸಿದ್ದಾರೆ. ಆದ್ದರಿಂದ **'ಹೊಸಗನ್ನಡದ ಅರುಣೋದಯದ ಮುಂಗೋಳಿ'** ಎಂಬ ಪ್ರಶಂಸೆಗೆ ಪಾತ್ರರಾಗಿದ್ದಾರೆ.

### ಅಭ್ಯಾಸ ಮಾದರಿ

### ಹಂತ :– ೧ ಪ್ರಮುಖಾಂಶಗಳನ್ನು ಗುರುತಿಸುವುದು.

| | |
|---|---|
| ಕೃತಿಕಾರರ ಹೆಸರು | ಲಕ್ಷ್ಮೀ ನಾರಾಯಣಪ್ಪ |
| ಸ್ಥಳ/ಕಾಲ | ಉಡುಪಿ ಜಿಲ್ಲೆಯ ಕಾರ್ಕಳದ ನಂದಳಿಕೆ, ೨೪/೦೧/೧೮೭೦ |
| ಕೃತಿಗಳು | 'ರತ್ನಾವತಿ ಕಲ್ಯಾಣ', 'ಕುಮಾರ ವಿಜಯ' , 'ಶ್ರೀರಾಮಪಟ್ಟಾಭಿಷೇಕಂ','ಅದ್ಭುತ ರಾಮಾಯಣ' ಮತ್ತು 'ರಾಮಾಶ್ವಮೇಧಂ' |
| ಬಿರುದು/ ಪ್ರಶಸ್ತಿಗಳು | 'ಹೊಸಗನ್ನಡದ ಅರುಣೋದಯದ ಮುಂಗೋಳಿ' |

### ಹಂತ :– ೨ ಬರೆಯುವ ವಿಧಾನ ರೂಢಿಸುವುದು.

ಮುದ್ದಣ ಎಂದು ಹೆಸರಾಗಿರುವ ಲಕ್ಷ್ಮೀ ನಾರಾಣಪ್ಪರವರು ಉಡುಪಿ ಜಿಲ್ಲೆಯ ಕಾರ್ಕಳದ ನಂದಳಿಕೆ ಗ್ರಾಮದಲ್ಲಿ ಸಾ.ಶ. ಸುಮಾರು ೨೪/೦೧/೧೮೭೦ ರಲ್ಲಿ ಜನಿಸಿದರು.

ಇವರು 'ರತ್ನಾವತಿ ಕಲ್ಯಾಣ', 'ಕುಮಾರ ವಿಜಯ' , 'ಶ್ರೀರಾಮಪಟ್ಟಾಭಿಷೇಕಂ','ಅದ್ಭುತ ರಾಮಾಯಣ' ಮತ್ತು 'ರಾಮಾಶ್ವಮೇಧಂ' ಎಂಬ ಕೃತಿಗಳನ್ನು ರಚಿಸಿದ್ದಾರೆ. ಆದ್ದರಿಂದ ಇವರನ್ನು 'ಹೊಸಗನ್ನಡದ ಅರುಣೋದಯದ ಮುಂಗೋಳಿ' ಎಂದು ಬಿರುದು ನೀಡಿ ಗೌರವಿಸಲಾಗಿದೆ.

### ಅಭ್ಯಾಸ ಹಾಳೆ

### ಹಂತ :– ೧ ಪ್ರಮುಖಾಂಶಗಳನ್ನು ಗುರುತಿಸುವುದು.

| | |
|---|---|
| ಕೃತಿಕಾರರ ಹೆಸರು | |
| ಸ್ಥಳ/ಕಾಲ | |
| ಕೃತಿಗಳು | |
| ಬಿರುದು/ ಪ್ರಶಸ್ತಿಗಳು | |

### ಹಂತ : ೨ ಸೂಕ್ತ ಪದಗಳಿಂದ ಬಿಟ್ಟ ಸ್ಥಳಗಳನ್ನು ತುಂಬಿರಿ.

'--------------' ಕಾವ್ಯನಾಮದಿಂದ ಹೆಸರಾಗಿರುವ '----------------ರವರು ಸಾ.ಶ.ಸುಮಾರು -----------ರಂದು ------ ಜಿಲ್ಲೆಯ ---------ತಾಲ್ಲೂಕಿನ ----------- ಗ್ರಾಮದಲ್ಲಿ ಜನಿಸಿದರು..

ಇವರು ------------------ರೆಂಬ ವಿದ್ವಾಂಸರಿಂದ ಸಾಹಿತ್ಯಾಸಕ್ತಿಯನ್ನು ಹೊಂದಿ ---------------------------------------------------------------------------------------------------

ಎಂಬ ಕೃತಿಗಳನ್ನು ರಚಿಸಿದ್ದಾರೆ. ಆದ್ದರಿಂದ -------------------------------ಎಂಬ ಪ್ರಶಂಸೆಗೆ ಪಾತ್ರರಾಗಿದ್ದಾರೆ.

## ಹಂತ :- ೩ ಸ್ವತಂತ್ರವಾಗಿ ಬರೆಯುವುದು.

-----------------------------------------------------------------------------------------

-----------------------------------------------------------------------------------------

-----------------------------------------------------------------------------------------

-----------------------------------------------------------------------------------------

-----------------------------------------------------------------------------------------

-----------------------------------------------------------------------------------------

-----------------------------------------------------------------------------------------

## ಪಾಠದ ಪ್ರಮುಖಾಂಶಗಳು:-

೧. ಚಳಿಗಾಲದಲ್ಲಿ ರಾಘವನ ಯಜ್ಞಾಶ್ವವು ಅರಣ್ಯಕ ಎಂಬ ತಪಸ್ವಿಯ ಆಶ್ರಮಕ್ಕೆ ಪ್ರವೇಶಿಸುವುದು.

೨. ಶತ್ರುಘ್ನ, ಜಾಂಬವಂತ, ಹನುಮಂತ, ಸುಗ್ರೀವಾದಿ ಕಪಿ ವೀರರು ಮುನಿಗಳ ದರ್ಶನಕ್ಕೆ ಆಶ್ರಮದ ಒಳಕ್ಕೆ ಬಂದರು.

೩. ಅರಣ್ಯಕ ಋಷಿಗಳು ಅವರನ್ನು ಸತ್ಕರಿಸಿದನು ನಂತರ ಶ್ರೀರಾಮನನ್ನು ಕುರಿತು ಮುದ್ದಣ ಮನೋರಮೆಗೆ ಕಥೆಯನ್ನು ಹೇಳುತ್ತಿದ್ದನು.

೪. ಮನೋರಮಗೆ ಕಥೆಯಲ್ಲಿ ಸಂಶಯ ಉಂಟಾಗಿ ಪ್ರಶ್ನೆಯನ್ನು ಕೇಳುತ್ತಿದ್ದಳು.

೫. ಆತಿಥ್ಯ ಎಂದರೇನು? ಬರಿ ಬಾಯುಪಚಾರವೇ?

೬. ಶತ್ರು ಸಂಹಾರ ಮಾಡುವಾಗ ದೊಡ್ಡ ಸೈನ್ಯಕ್ಕೆ ಅನ್ನ ನೀರು ಕೊಟ್ಟು ತೃಪ್ತಿಪಡಿಸಿದನೆ?

೭. ಹೌದು ಹೌದು ಭೋಜನದಿಂದ ತೃಪ್ತಿಪಡಿಸಿದನು

೮. ನನಗೆ ಆಶ್ಚರ್ಯ ಇದು ಹೇಗೆ ಸಾಧ್ಯ?

೯. ಮುನಿಗಳ ಜಪ ತಪ ಮಂತ್ರದ ಶಕ್ತಿ ಕಿರಿದೆ ಬೇಡಿದ ವಸ್ತು ಕೂಡಲೇ ತಂದು ಕೊಡುವರು

೧೦. ಆ ಶ್ರೇಷ್ಠ ಮಂತ್ರ ಯಾವುದು?

೧೧. ಏಕಾಕ್ಷರಿ, ದ್ವ್ಯಕ್ಷರಿ, ತ್ರ್ಯಕ್ಷರ, ಚತುರಾಕ್ಷರಿ, ಪಂಚಾಕ್ಷರಿ, ಷಡಾಕ್ಷರಿ ಇವು ಪ್ರಸಿದ್ಧ ಮಂತ್ರಗಳು.

೧೨) ಜಪದ ಶಕ್ತಿಯಿಂದ ಮುನಿಗಳ ಚಿಂತೆ ಇಲ್ಲದೆ ಇದ್ದಾರೆ

೧೩) ಹೌದು ತಪ್ಪೇನು

೧೪) ನಿಮ್ಮಂಥ ಕವಿಗಳು ಸಂಸಾರ ಬಿಟ್ಟು ಸುಮ್ಮನೆ ಕಥೆ ಕಾವ್ಯದಲ್ಲಿ ಇದ್ದೀರಾ ಉಣ್ಣಲು ತಿನ್ನಲು ಏನು ಮಾಡುವುದು ಹಿರಿಯರಿಂದ ಜಪವನ್ನು ಪಡೆಯಬೇಕು

೧೫) ನಮ್ಮ ಕವಿಗಳು ಸಾಮಾನ್ಯರೆ ಸೊಗಸಾಗಿ ವರ್ಣಿಸುವುದು ನಿನಗೆ ಗೊತ್ತಿಲ್ಲ

೧೬) ನಿಮಗೆ ಮಂತ್ರ ಸಿದ್ಧಿವತ್ತೆ ಅದಕ್ಕೆ ಹೆದರಿಕೆ ಇಲ್ಲ ನಿನ್ನಲ್ಲಿ

೧೭) ನಿಮಗೆ ಮಂತ್ರ ಸಿದ್ಧಿವತ್ತೆ ಅದಕ್ಕೆ ಹೆದರಿಕೆ ಇಲ್ಲ ನಿನ್ನಲ್ಲಿ ಇದೆಯೇ ನನ್ನಲ್ಲಿ ಸಾಕಷ್ಟು ಇದೆ ನೀನು

೧೮) ಬಲು ಮಹಿಮೆಗಾರ

೧೯) ಗುರುವಿನ ಕಡೆಯಿಂದ ಉಪದೇಶವಾಗಿದೆ

೨೦) ಆ ಮಂತ್ರ ಹೇಳು ಯಾರಿಗೂ ಹೇಳಬಾರದು ಎಂದನು

೨೧) ಇಬ್ಬರೂ ಪ್ರಮಾಣ ಮಾಡಿ ಭವತಿ ಭಿಕ್ಷಾಂ ದೇಹಿ ಕವಿಗಳಿಗೆ ಸಿದ್ಧಿಸಿದ ಸಪ್ತಾಕ್ಷರಿ ಮಂತ್ರ

## ಅಭ್ಯಾಸ ಹಾಳೆ :

➢ **ಈ ಮೇಲಿನ ಪ್ರಮುಖಾಂಶಗಳನ್ನು ವಾಕ್ಯ ರೂಪದಲ್ಲಿ ಬರೆಯಿರಿ.**

------------------------------------------------------------------------------------------------

------------------------------------------------------------------------------------------------

------------------------------------------------------------------------------------------------

------------------------------------------------------------------------------------------------

------------------------------------------------------------------------------------------------

------------------------------------------------------------------------------------------------

------------------------------------------------------------------------------------------------

------------------------------------------------------------------------------------------------

------------------------------------------------------------------------------------------------

------------------------------------------------------------------------------------------------

------------------------------------------------------------------------------------------------

------------------------------------------------------------------------------------------------

- **ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧) ರಾಘವನ ಯಜ್ಞಾಶ್ವ ಯಾರ ಆಶ್ರಮವನ್ನು ಹೊಕ್ಕಿತ್ತು ?

ಉತ್ತರ:– ರಾಘವನ ಯಜ್ಞಾಶ್ರವೂ ಅರಣ್ಯಕ ಮುನಿಯ ಆಶ್ರಮವನ್ನು ಹೊಕ್ಕಿತ್ತು.

೨) ಮನೋರಮೆಯಲ್ಲಿ ಮೂಡಿದ ಸಂದೇಹವೇನು ?

ಉತ್ತರ:– ಸಾವಿರ ಸಾವಿರ ಸಂಖ್ಯೆಯಲ್ಲಿದ್ದ ಸೈನಿಕರಿಗೆ ಭೋಜನ ನೀಡಲು ಅರಣ್ಯಕಮುನಿಗೆ ಹೇಗೆ ಸಾಧ್ಯವಾಯಿತು ಎಂದು ಮನೋರಮಗೆ ಸಂದೇಹ ಮೂಡಿತು.

೩) ಮುನಿಗಳಲ್ಲಿರುವ ಮಂತ್ರದ ಶಕ್ತಿ ಯಾವುದು ?

ಉತ್ತರ:– ಮುನಿಗಳಲ್ಲಿರುವ ಮಂತ್ರದ ಶಕ್ತಿ ಎಂದರೆ ಬೇಡಿದ ವಸ್ತುವನ್ನು ನೀಡುವುದು.

೪) ತಪಸ್ವಿಗಳಿಗೆ ಬೇರೆ ಗೊಡವೆ ಇಲ್ಲದಿರಲು ಕಾರಣವೇನು ?

ಉತ್ತರ:– ತಪಸ್ವಿಗಳಿಗೆ ಜಪದ ಶಕ್ತಿಯ ನೆರವು ಇರುವುದರಿಂದ ಬೇರೆ ಗೊಡವೆ ಇಲ್ಲದಿರಲು ಕಾರಣ.

೫) ಮುದ್ದಣನಿಗೆ ಸಿದ್ಧಿಸಿದ ಮಂತ್ರದ ಹೆಸರೇನು ?

ಉತ್ತರ:– ಮುದ್ದಣನಿಗೆ ಸಿದ್ಧಿಸಿದ ಮಂತ್ರದ ಹೆಸರು ಭವತಿ ಭಿಕ್ಷಾಂ ದೇಹಿ.

-

- **ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿರಿ.**

**ಆಯ್ಕೆ:** ಈ ವಾಕ್ಯವನ್ನು ಜಿ. ವೆಂಕಟಸುಬ್ಬಯ್ಯ ಅವರು ಸಂಪಾದಿಸಿರುವ ಮುದ್ದಣ ಬಂಡಾರ ಕೃತಿಯಿಂದ ಆರಿಸಲಾದ ಸಪ್ತಾಕ್ಷರಿ ಮಂತ್ರ ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

| ಗದ್ಯ | ಸಾಂದರ್ಭಿಕ ಪ್ರಶ್ನೆಗಳು | ಯಾರು ? ಯಾರಿಗೆ ? | ಸಂದರ್ಭ |
|---|---|---|---|
| | "ಎನಗಿದಚ್ಚರಿ ಎಂತುಟಾರ್ತಂ" | ಮುದ್ದಣ ಮನೋರಮೆಗೆ | ಅರಣ್ಯಕ ಮುನಿಗಳು ಸತ್ಕಾರ |
| | "ಅಪ್ಪುದಪ್ಪುದು ತಪ್ಪೇಂ" | ಮನೋರಮೆ ಮುದ್ದಣಗೆ | ತಪಸ್ವಿಗಳಿಗೆ ಯಾವುದು ಚಿಂತೆ |
| | "ಎಮ್ಮವರೊಂದಿರಕೆ ನಗುವ? " | ಮನೋರಮೆ ಮುದ್ದಣಗೆ | ಮುನಿಗಳ ಮಂತ್ರಾಶಕ್ತಿ |
| | "ಸಾಲ್ಗುಮೀ ಪರಿಹಾಸಂ" | ಮನೋರಮೆ ಮುದ್ದಣಗೆ | ನಿನೇನು ಕವಿಯೋ ಹಾಸ್ಯಗಾರನೋ ? |

## ಅಭ್ಯಾಸ ಚಟುವಟಿಕೆ :

### ಹೊಂದಿಸಿ ಬರೆಯಿರಿ

| " ಎ " ಪಟ್ಟಿ | " ಬಿ " ಪಟ್ಟಿ | ಸರಿಯುತ್ತರ ಬರೆಯಿರಿ |
|---|---|---|
| ಮೃಷ್ಟಾನ | ಲೋಪಸಂಧಿ | |
| ಒಡನಿರ್ದು | ಕಬ್ಬ | |
| ಕಾವ್ಯ | ಗೌರವಿಸು | |
| ಆಶ್ಚರ್ಯ | ಕುಪ್ಪಳ್ಳಿ | |
| ಮನ್ನಿಸು | ಅಚ್ಚರಿ | |
| ಬಾವನ್ನ | ಸವರ್ಣಧೀರ್ಘ ಸಂಧಿ | |
| ಕುವೆಂಪು | ನಂದಳಿಕೆ | |
| ಮುದ್ದಣ | ಶ್ರೀಗಂಧ | |
| | | |

## ಸೈದ್ಧಾಂತಿಕ ಭಾಷಾಭ್ಯಾಸ

## ಲೇಖನ ಚಿಹ್ನೆಗಳು

**ಬರೆದ ವಿಚಾರಗಳು ಓದುಗರಿಗೆ ಸ್ಪಷ್ಟವಾಗಿ ಅರ್ಥವಾಗಲೆಂದು ಅಲ್ಲಲ್ಲಿ ಉಪಯೋಗಿಸುವ ಚಿಹ್ನೆಗಳಿಗೆ ಲೇಖನ ಚಿಹ್ನೆಗಳನ್ನುತ್ತೇವೆ**

### ಲೇಖನ ಚಿಹ್ನೆಗಳ ಸಂಕ್ಷಿಪ್ತ ಕಿರು ನೋಟ

| ಕ್ರಸಂ | ಲೇಖನ ಚಿಹ್ನೆಗಳು ಹೆಸರು | ಸಂಕೇತ | ವಿವರ | ಉದಾಹರಣೆ |
|---|---|---|---|---|
| ೧ | ಪೂರ್ಣ ವಿರಾಮ | . | ಪೂರ್ಣ ಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಬಳಸಬೇಕು. | ಮಕ್ಕಳು ಹಾಡನ್ನು ಹಾಡಿದರು. |
| ೨ | ಅರ್ಧ ವಿರಾಮ | ; | ಅನೇಕ ಉಪ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಬಳಸಬೇಕು. | ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ. |
| ೩ | ಅಲ್ಪ ವಿರಾಮ | , | ಸಂಭೋಧನೆಯ ಮುಂದೆ ಹಾಗೂ ಕರ್ತೃ, ಕರ್ಮ, ಕ್ರಿಯಾಪದಗಳಿಗೆ ವಿಶೇಷಣಗಳು ಬರುವಾಗ ಬಳಸಬೇಕು. | ಬಟ್ಟೆಗಿರಣಿ, ರಟ್ಟು, ಪೆನ್ಸಿಲ್, ಬೆಂಕಿಕಡ್ಡಿ ತಯಾರಿಕ ಘಟಕಗಳನ್ನು ಸ್ಥಾಪಿಸಲಾಗಿದೆ. |
| ೪ | ಪ್ರಶ್ನಾರ್ಥಕ | ? | ಪ್ರಶ್ನೆ ರೂಪದ ಪದ ಮತ್ತು ವಾಕ್ಯಗಳ ಮುಂದೆ ಬಳಸಬೇಕು | ಮುದ್ದಣ ಯಾರು? |
| ೫ | ಭಾವಸೂಚಕ | ! | ಹರ್ಷ, ಆಶ್ಚರ್ಯ, ಸಂತೋಷ ವಿಷಯದ ಭಾವನೆಗಳ ಮುಂದೆ ಬಳಸಬೇಕು. | ಆ! ಎಮನ್ನರಪ್ಪ ಕಬ್ಬಿಗರಿರ್ಗೇಂ ಕೊರತೆಯೊ! |
| ೬ | ಉದ್ಧರಣ | " " | ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸಬೇಕು. | "ಸಾಲ್ಗುಮೀ ಪರಿಹಾಸಂ" |
| ೭ | ವಾಕ್ಯವೇಷ್ಟನ | ' ' | ಪರಿಭಾಷಿಕ, ಅನ್ಯದೇಶಿಯ, ಅನ್ಯ ಭಾಷೆಯ ಪದ ಬಳಸುವಾಗ ಬಳಸಬೇಕು. | ಕನ್ನಡ ಭಾಷೆಯಲ್ಲಿ 'ಇಂಗ್ಲಿಷ್' 'ಅರಬ್ಬಿ' 'ಪರ್ಷಿಯನ್' ಭಾಷೆಗಳ ಪದಗಳನ್ನು ಬಳಸಲಾಗುತ್ತಿದೆ. |
| ೮ | ಆವರಣ | ( ) | ಒಂದು ಪದ, ವಾಕ್ಯ, ಅದಕ್ಕೆ ಸಮನಾರ್ಥಕ ಹೇಳುವಾಗ ಬಳಸಬೇಕು. | ಆಮ್ಲಜನಕ (ಆಕ್ಸಿಜನ್) ಜಲಜನಕ (ಹೈಡ್ರೋಜನ್) |
| ೯ | ವಿವರಣಾತ್ಮಕ | :- | ಒಂದು ಅಭಿಪ್ರಾಯದ ವಿವರಣೆ ಮುಂದೆ ತಿಳಿಸಿದಂತೆ ಇದೆ ಎಂದು ತಿಳಿಸುವಾಗ ಬಳಸಬೇಕು. | ಪಂಚೇಂದ್ರಿಯಗಳು : ಕಣ್ಣು, ಮೂಗು, ಕಿವಿ, ನಾಲಿಗೆ, ಚರ್ಮ. |

**ಚಟುವಟಿಕೆಗಳು:- ಹೊಂದಿಸಿ ಬರೆಯಿರಿ.**

| ಕ್ರ.ಸಂ | ಎ ಭಾಗ | ಬಿ ಭಾಗ | | ಸರಿಯುತ್ತರ ಬರೆಯಿರಿ |
|---|---|---|---|---|
| ೧ | ಪೂರ್ಣ ವಿರಾಮ | ೧ | " " | |
| ೨ | ಅರ್ಧ ವಿರಾಮ | ೨ | ( ) | |
| ೩ | ಅಲ್ಪ ವಿರಾಮ | ೩ | ! | |
| ೪ | ಪ್ರಶ್ನಾರ್ಥಕ | ೪ | :– | |
| ೫ | ಭಾವಸೂಚಕ | ೫ | , | |
| ೬ | ಉದ್ಧರಣ | ೬ | . | |
| ೭ | ವಾಕ್ಯವೇಷ್ಟನ | ೭ | ' ' | |
| ೮ | ಆವರಣ | ೮ | ; | |
| ೯ | ವಿವರಣಾತ್ಮಕ | ೯ | ? | |

## ಘಟಕ ಪರೀಕ್ಷೆ (ಸಪ್ತಾಕ್ಷರಿ ಮಂತ್ರ)

ಅವಧಿ ೩೦ ನಿಮಿಷ ಅಂಕಗಳು = ೧೦

**ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕು ಸಂಭವನೀಯ ಉತ್ತರಗಳಿದ್ದು ಹೆಚ್ಚು ಸೂಕ್ತವಾದ ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ. ೧ * ೨ = ೦೨**

- ೧) ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಯಾವ ಚಿಹ್ನೆಯನ್ನು ಉಪಯೋಗಿಸಬೇಕು?

  ಎ) ಪೂರ್ಣ ವಿರಾಮ ಬಿ) ಭಾವ ಸೂಚಕ ಸಿ) ಅಲ್ಪ ವಿರಾಮ ಚಿಹ್ನೆ ಡಿ) ಉದ್ಧರಣ

  ೨) ಸಪ್ತಾಕ್ಷರಿ ಈ ಪದ ವಿಗ್ರಹಿಸಿದಾಗ ಯಾವ ಸಮಾಸವಾಗುತ್ತದೆ ?

  ಎ) ದ್ವಿಗುಸಮಾಸ ಬಿ) ಕ್ರಿಯಾಸಮಾಸ ಸಿ) ಗಮಕ ಸಮಾಸ ಡಿ) ತತ್ಪುರುಷ ಸಮಾಸ

- **ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. ೧ * ೨ = ೦೨**

  ೧) ರಾಘವನ ಯಜ್ಞಾಶ್ವ ಯಾರ ಆಶ್ರಮವನ್ನು ಹೊಕ್ಕಿತ್ತು ?

  ೨) ಮುದ್ದಣ್ಣನಿಗೆ ಸಿದ್ಧಿಸಿದ ಮಂತ್ರದ ಹೆಸರೇನು ?

- **ಈ ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ. ೧ * ೨ = ೦೨**
- ೧) ಮುದ್ದಣನ್ನು ಪರಿಹಾಸ ಮಾಡಿದನೆಂದು ಮನೋರಮೆಯೂ ಹೇಳಲು ಕಾರಣವೇನು ?
- **ಈ ಕೆಳಗಿನ ಪ್ರಶ್ನೆಗಳಿಗೆ ೮–೧೦ ವಾಕ್ಯಗಳಲ್ಲಿ ಉತ್ತರಿಸಿ. ೧ * ೪ = ೦೪**

೧) ಶತ್ರುಘ್ನ ರಾಜ್ಯರನ್ನು ಅರಣ್ಯಕನು ಸತ್ಕರಿಸಿದ ವಿಚಾರದಲ್ಲಿ ಮುದ್ದಣ ಮನೋರಮೆಯರ ಮಧ್ಯೆ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

************************

# ಪದ್ಯ–೮ . ರಾಮಧಾನ್ಯ ಚರಿತೆ – ( ಕನಕದಾಸರು )

ನಿಗದಿಪಡಿಸಿದ ಅವಧಿಗಳು – ೯



## ಕೃತಿಕಾರರ ಪರಿಚಯ :

ಸಂತಕವಿ **ಕನಕದಾಸರು** ಹಾವೇರಿ ಜಿಲ್ಲೆಯ **ಬಾಡ** ಗ್ರಾಮದಲ್ಲಿ ಸಾ.ಶ ಸುಮಾರು ೧೫೦೮ ರಲ್ಲಿ ಜನಿಸಿದರು. ತಂದೆ ಬೀರಪ್ಪ, ತಾಯಿ ಬಚ್ಚಮ್ಮ, ಗುರು ವ್ಯಾಸರಾಯರಾಗಿದ್ದಾರೆ. ಇವರ ಮೊದಲ ಹೆಸರು ತಿಮ್ಮಪ್ಪ ನಾಯಕ. ಆರಾಧ್ಯ ದೈವ ಹಾಗೂ ಅಂಕಿತನಾಮ ಕಾಗಿನೆಲೆ ಆದಿಕೇಶವ. ವಿಜಯನಗರ ಸಾಮ್ರಾಜ್ಯದಲ್ಲಿ ಸಣ್ಣಮಂಡಲದ ಡಣ್ಣಾಯಕರಾಗಿದ್ದರು. ಹರಿಭಕ್ತಿಸಾರ ರಾಮಧಾನ್ಯ ಚರಿತೆ, ಮೋಹನ ತರಂಗಿಣಿ, ನಳ ಚರಿತ್ರೆ, ಕೀರ್ತನೆಗಳು, ಉಗಾಭೋಗಗಳು ಮತ್ತು ಮಂಡಿಗೆಗಳನ್ನು ರಚಿಸಿದ್ದಾರೆ. ದಾಸಸಾಹಿತ್ಯದ ಅಶ್ವಿನಿ ದೇವತೆಗಳಲ್ಲಿ ಒಬ್ಬರಾಗಿದ್ದಾರೆ.

### ಅಭ್ಯಾಸ ಹಾಳೆ :

### ಹಂತ :– ೧ ಪ್ರಮುಖಾಂಶಗಳನ್ನು ಗುರುತಿಸುವುದು.

| | |
|---|---|
| ಕೃತಿಕಾರರ ಹೆಸರು | ಕನಕದಾಸರು |
| ಸ್ಥಳ/ಕಾಲ | ೧೫೦೮ಹಾವೇರಿ ಜಿಲ್ಲೆಯ **ಬಾಡ** ಗ್ರಾಮ |
| ಕೃತಿಗಳು | ಹರಿಭಕ್ತಿಸಾರ ರಾಮಧಾನ್ಯ ಚರಿತೆ, ಮೋಹನ ತರಂಗಿಣಿ, ನಳ ಚರಿತ್ರೆ, ಕೀರ್ತನೆಗಳು ಮತ್ತು ಉಗಭೋಗಗಳು |
| ಬಿರುದು | ಅಶ್ವಿನಿ ದೇವತೆಗಳಲ್ಲಿ ಒಬ್ಬರು. |

### ಹಂತ :– ೨ ಬರೆಯುವ ವಿಧಾನ ರೂಢಿಸುವುದು.

| |
|---|
| ಕೃತಿಕಾರರ ಹೆಸರು |
| ಸ್ಥಳ/ಕಾಲ |
| ಕೃತಿಗಳು |
| ಬಿರುದುಗಳು |

### ಅಭ್ಯಾಸ ಹಾಳೆ:

### ಹಂತ :– ೧ ಪ್ರಮುಖಾಂಶಗಳನ್ನು ಗುರುತಿಸುವುದು.

| | | |
|---|---|---|
| ಕೃತಿಕಾರರ ಹೆಸರು | | |
| ಸ್ಥಳ/ಕಾಲ | | |
| ಕೃತಿಗಳು | | |
| ಬಿರುದುಗಳು | | |

## ಹಂತ : ೩ ಸೂಕ್ತ ಪದಗಳಿಂದ ಬಿಟ್ಟ ಸ್ಥಳಗಳನ್ನು ತುಂಬಿರಿ.

'--------------' ಕಾವ್ಯನಾಮದಿಂದ ಹೆಸರಾಗಿರುವ '----------------ರವರು ಸಾ.ಶ.ಸುಮಾರು ------------ರಂದು -------- ಜಿಲ್ಲೆಯ ---------ತಾಲ್ಲೂಕಿನ ----------- ಗ್ರಾಮದಲ್ಲಿ ಜನಿಸಿದರು..

ಇವರು -------------------ರೆಂಬ ವಿದ್ವಾಂಸರಿಂದ ಸಾಹಿತ್ಯಾಸಕ್ತಿಯನ್ನು ಹೊಂದಿ ----------------------------------------------------------------------------------------------------------------ಎಂಬ ಕೃತಿಗಳನ್ನು ರಚಿಸಿದ್ದಾರೆ. ಆದ್ದರಿಂದ ---------------------------------------ಎಂಬ ಪ್ರಶಂಸೆಗೆ ಪಾತ್ರರಾಗಿದ್ದಾರೆ.

## ಹಂತ :- ೩ ಸ್ವತಂತ್ರವಾಗಿ ಬರೆಯುವುದು.

----------------------------------------------------------------------------------------

----------------------------------------------------------------------------------------

----------------------------------------------------------------------------------------

----------------------------------------------------------------------------------------

----------------------------------------------------------------------------------------

----------------------------------------------------------------------------------------

--------------.------------------------------------------------------------------------

----------------------------------------------------------------------------------------

## ಪದ್ಯದ ಪ್ರಮುಖ ಅಂಶಗಳು

೧. ಶ್ರೀರಾಮನು ವನವಾಸದಿಂದ ಹಿಂದುರುಗಿ ಬರುವಾಗ ಗೌತಮ ಮುನಿಗಳ ಆಶ್ರಮದಲ್ಲಿ ಭೋಜನ ನಡೆಯಿತು.

೨. ಭೋಜನದ ನಂತರ ವಿವಿಧ ಪಕ್ಷಗಳ ರುಚಿಯ ಬಗ್ಗೆ ಚರ್ಚೆ ನಡೆಯಿತು.

೩. ಶ್ರೀ ರಾಮನ ಬಂಟ ಹನುಮಂತನು ಧಾನ್ಯದ ಸತ್ತುವನ್ನು ನೋಡಿ ಶ್ರೇಷ್ಠತೆಯನ್ನು ನಿರ್ಧರಿಸಬೇಕೆನ್ನುತ್ತಾನೆ.

೪. ಗೌತಮ ಮುನಿಗಳು ಹಲವು ಧಾನ್ಯಗಳನ್ನು ತರಿಸುತ್ತಾರೆ.

೫. ಸಭೆಯಲ್ಲಿ ಧಾನ್ಯಗಳನ್ನು ಇಟ್ಟಾಗ ಚರ್ಚೆ ಆರಂಭವಾಯಿತು

೬. ಚರ್ಚೆಯಲ್ಲಿ ಕೆಲವರು ಗೋಧಿಯನ್ನು ಕೆಲವರು ಸಾಮೆಯನ್ನು, ಕೆಲವರು ನವಣೆಯನ್ನು, ಕೆಲವರು ಕೊಂಬುಜೋಳವನ್ನು, ಕೆಲವರು ಆರಗವೆಂದು, ಕೆಲವರು ನೆಲ್ಲನ್ನು, ಕೆಲವರು ನರೆದಲಗ, ರಾಗಿಯನ್ನು ಶ್ರೇಷ್ಠವೆಂದರು.

೭. ರಾಜನು ಹಲವು ಮತ ಏಕೆ ಒಂದನ್ನೇ ಹೇಳುವೆ ರಾಗಿ ನೆರದಲ್ಲ ಶ್ರೇಷ್ಠವೆಂದು ಹೇಳಿದರು.

೮. ಭತ್ತ ಆ ಮಾತನ್ನು ಒಪ್ಪದೆ ತಾನೇ ಶ್ರೇಷ್ಠವೆಂದು ಬ್ರಾಹ್ಮಣರ ಉಪನಯನದಲ್ಲಿ ವ್ರತಾಚರಣೆಯಲ್ಲಿ ಭೋಜನದಲ್ಲಿ ಮಂತ್ರಾಕ್ಷತೆ ಎಲ್ಲಿ ಶುಭ ಸಮಾರಂಭದಲ್ಲಿ ಮುಂತಾದ ಕಾರ್ಯಗಳಲ್ಲಿ ಬಳಸಲಾಗಿದೆ ಆದ್ದರಿಂದ ನಾನೇ ಶ್ರೇಷ್ಠವೆಂದಿತ್ತು.

೯. ರಾಗಿ ನೆರೆದಲಗ ಈ ಜಗತ್ತಿನಲ್ಲಿ ತಿಳಿದಿರುವಂತೆ ಮಳೆ ಹೋಗಿ ಬೆಳೆ ಇಲ್ಲದಾಗಿ ಘೋರ ಬರಗಾಲದಲ್ಲಿ ಅನ್ನವಿಲ್ಲದೆ ನಾಶವಾಗುವ ಪ್ರಾಣಿಗಳನ್ನು ಆಧರಿಸಿ ಕಾಪಾಡುತ್ತೇನೆ.

೧೦. ಆಗ ನೀವು ಎಲ್ಲಿರುವೆ ನಿನ್ನ ಬಳಗ ಇಲ್ಲಿರುವುದು ವಾದ ವಿವಾದ ನಡೆಯಿತು ಆಗ ಶ್ರೀರಾಮನು ಆರು ತಿಂಗಳಗಳು ಇಬ್ಬರನ್ನು ನೆರೆಯಲ್ಲಿ ಹಾಕಿದರೆ ಹಿರಿದು ಕಿರುದು ಎಂದು ವಾದಿಸುವ ಪೌರುಷವನ್ನು ತಿಳಿಯಬಹುದು ಎಂದು ಹೇಳಿ ಅವರನ್ನು ಸೆರೆಗೆ ಹಾಕುತ್ತಾನೆ.

**ವಿಶೇಷ ಸೂಚನೆ : ಪದಗಳು ನೆನಪಿಸಿಕೊಂಡು ಹತ್ತು ವಾಕ್ಯಗಳಲ್ಲಿ ಬರೆಯುವುದು.**

ಗೌತಮ ಮುನಿಗಳ ಆಶ್ರಮ, ಭೋಜನ ನಂತರ ಧ್ಯಾನ, ಧಾನ್ಯಗಳ ಶ್ರೇಷ್ಠ, ಧಾನ್ಯದ ಸತ್ವ ಕೆಲವರು ವಿವಿಧ ಧಾನ್ಯಗಳ ಶ್ರೇಷ್ಠ, ಭತ್ತ ತಾನೇ ಶ್ರೇಷ್ಠ, ಶ್ರೀರಾಮನು ಅಂತಿಮ ತೀರ್ಮಾನ.

**ಅಭ್ಯಾಸ ಹಾಳೆ :**

------------------------------------------------------------------------------------------------------------

------------------------------------------------------------------------------------------------------------

------------------------------------------------------------------------------------------------------------

------------------------------------------------------------------------------------------------------------

------------------------------------------------------------------------------------------------------------

------------------------------------------------------------------------------------------------------------

------------------------------------------------------------------------------------------------------------

------------------------------------------------------------------------------------------------------------

------------------------------------------------------------------------------------------------------------

------------------------------------------------------------------------------------------------------------

-------------------------------------------.

## ಒಂದು ವಾಕ್ಯದಲ್ಲಿರುವ ಪ್ರಶ್ನೋತ್ತರಗಳು

೧. ದೇಶಕ್ಕೆ ಅತಿಶಯವಾದ ಧಾನ್ಯ ಯಾವುದು.?

ಉತ್ತರ: ದೇಶಕ್ಕೆ ಅತಿಶಯವಾದ ಧಾನ್ಯ ರಾಗಿ ನರೆದಲಗ.

೨. ವ್ರಿಹಿ ಯಾರ ಬಾಯಿಗೆ ತುತ್ತು ಎಂದು ಹೇಳಿದೆ.?

ಉತ್ತರ: ವ್ರಿಹಿ ಹೆಣದ ಬಾಯಿಗೆ ತುತ್ತು ಎಂದು ಹೇಳಿದೆ.

೩. ದಾಶರಥಿ ಎಂದರೆ ಯಾರು?

ಉತ್ತರ: ದಾಶರಥಿ ಎಂದರೆ ಶ್ರೀರಾಮ.

೪. ನರೆದಲಗ ಯಾರನ್ನು ಆಧರಿಸಿ ಸಲಹುತ್ತದೆ?

ಉತ್ತರ: ನರೆದಲಗ ಅನ್ನ ಇಲ್ಲದೆ ಅಳಿವ ಪ್ರಾಣಿಗಳನ್ನು ಆಧರಿಸಿ ಸಲಹುತ್ತದೆ.

೫. ಹರಿಹರ ವಿರಂಚಿಗಳನ್ನು ಏತಕ್ಕಾಗಿ ಅಯೋಧ್ಯೆಗೆ ಕರೆಸಲಾಗುತ್ತದೆ?

ಉತ್ತರ: ನರೆದಲಗ ಮತ್ತು ವ್ರಿಹಿ ಇವುಗಳಲ್ಲಿ ಯಾರು ಶ್ರೇಷ್ಠ ಎಂಬ ವಿವಾದವನ್ನು ಸಂಹರಿಸಲು ಹರಿಹರ ವಿರಂಚಿಗಳನ್ನು ಅಯೋಧ್ಯೆಗೆ ಕರಿಸಲಾಗಿತ್ತು.

೬. ಸೆರೆಗೆ ಯಾರು ಯಾರನ್ನು ಹಾಕಲಾಗುತ್ತದೆ?

ಉತ್ತರ:- ರಾಗಿ ಮತ್ತು ಭತ್ತಗಳನ್ನು ಸೆರೆಗೆ ಹಾಕಲಾಗಿತ್ತು.

## ಚಟುವಟಿಕೆಗಳು

- **ಬಿಟ್ಟ ಸ್ಥಳಗಳಲ್ಲಿ ಸೂಕ್ತವಾದ ಉತ್ತರವನ್ನು ಬರೆಯಿರಿ**

೧. ದೇಶಕ್ಕೆ ಅತಿಶಯವಾದ ಧಾನ್ಯ..........,.........

೨. ವ್ರಿಹಿ................. ಬಾಯಿಗೆ ತುತ್ತು ಎಂದು ಹೇಳಿದೆ

೩. ದಾಶರತಿ ಎಂದರೆ................

೪. ನರೆದಲಗ........... ಗಳನ್ನು ಆಧರಿಸಿ ಸಲಹುತ್ತದೆ

೫. ಸೆರೆಗೆ............... ಮತ್ತು............ ಗಳನ್ನು ಹಾಕಲಾಗುತ್ತದೆ

## ಪದ್ಯ ಭಾಗದಲ್ಲಿ ಬಂದಿರುವ ಸಾಂದರ್ಭಿಕ ಹೇಳಿಕೆಗಳು

**ಆಯ್ಕೆ :** ಈ ಸಾಲನ್ನು ಡಾಕ್ಟರ್ **ಸಾ.ಶಿ.** ಮರಳಯ್ಯ ರವರು ಸಂಪಾದಿಸಿರುವ ಕನಕದಾಸರ ಕಾವ್ಯಭಾಗದಿಂದ ರಾಮಧಾನ್ಯ ಚರಿತೆ ಎಂಬ ಪದ್ಯದಿಂದ ಆಯ್ದುಕೊಳ್ಳಲಾಗಿದೆ.

| ಗದ್ಯ | ಸಾಂದರ್ಭಿಕ ಪ್ರಶ್ನೆಗಳು | ಯಾರು? ಯಾರಿಗೆ? | ಸಂದರ್ಭ |
|---|---|---|---|
| ರಾಮಧಾನ್ಯ ಚರಿತೆ | “ನಮ್ಮಯ ದೇಶಕತಿಶಯ ನರೆದಲಗ” | ಗೌತಮ ಮುನಿ ಶ್ರೀರಾಮನಿಗೆ | ರಾಗಿ ಶ್ರೇಷ್ಠ ಎಂಬ ಮಾತನ್ನು ಕೇಳಿ |
| | “ಕುಲಹೀನ ನೀನು ಪ್ರತಿಷ್ಠ ಸುಡು ಮತಿ ಹೀನ ನೀನು” | ವ್ರಿಹಿ ನರೆದಲಗಕ್ಕೆ | ಭಗವಂತನೇ ನಿಮ್ಮಿಬ್ಬರಲ್ಲಿ ಯಾರು ಶ್ರೇಷ್ಠ ಎಂಬುವುದನ್ನು ತಿಳಿಸುತ್ತಾ |
| | “ವಿನಯ ಕಾಲದೊಳೆನ್ನ ವಿಲ್ಲದೆ ಅಳಿವ ಪ್ರಾಣಿಗಳಾದರಿಸಿ ಸಲು ಹುವೆ” | ವ್ರಿಹಿ ನರೆದಲಗಕ್ಕೆ | ಘೋರ ಬರಗಾಲದಲ್ಲಿ ಅನ್ನವಿಲ್ಲದೆ ನಾಶವಾಗುವ ಪ್ರಾಣಿಗಳನ್ನು ಆಧರಿಸಿದೆ |
| | “ಇವರೆಲ್ಲಿ ಸೆರೆಯಾಳಗಾರು ತಿಂಗಳು” | ಶ್ರೀ ರಾಮನು ವ್ರಿಹಿ ಮತ್ತು ನರೆದಲಗಕ್ಕೆ | ಸಪ್ತ ಪರೀಕ್ಷೆ ಸೆರೆವಾಸದಿಂದ ಗೊತ್ತಾಗುವುದು |
| | | | |

## ಹೊಂದಿಸಿ ಬರೆಯಿರಿ

| ಕ್ರ.ಸಂ | ಎ ಭಾಗ | ಬಿ ಭಾಗ | | ಸರಿಯುತ್ತರ ಬರೆಯಿರಿ |
|---|---|---|---|---|
| ೧ | ಪುರಂದರದಾಸರು | ೧ | ಭತ್ತ | |
| ೨ | ಕನಕದಾಸರು | ೨ | ಪಥ್ಯ | |
| ೩ | ವ್ರಿಹಿ | ೩ | ಪುರಂದರ ವಿಠಲ | |
| ೪ | ನರೆದಲಗ | ೪ | ಬ್ರಹ್ಮ | |
| ೫ | ಬಾಣಂತಿಯರಿಗೆ | ೫ | ಭೂಮಿ | |
| ೬ | ಹೆಣದಬಾಯಿಗೆ | ೬ | ಲೋಪಸಂಧಿ | |
| ೭ | ಕ್ಷಿತಿ | ೭ | ಆದಿಕೇಶವ | |
| ೮ | ವಿರಂಚಿ | ೮ | ರಾಗಿ | |
| ೯ | ಸೆರೆಯೊಳಗೆ | ೯ | ತುತ್ತು | |
| ೧೦ | ತಾನೆಲ್ಲಿ | ೧೦ | ಆಗಮಸಂಧಿ | |

## ಚಟುವಟಿಕೆ:

### ಈ ಕೆಳಗಿನ ಸಾಲುಗಳಿಗೆ ಪ್ರಸ್ತಾರಹಾಕಿ ಗಣ ವಿಂಗಡಿಸಿರಿ

--------------------------------

ಪರಮ ಧ್ಯಾನದೊಳಿಬ್ಬರೇ ಇವ

--------------------------------

ರಿರಲಿ ಸೆರೆಯೊಳಗಾರು ತಿಂಗಳು

-------------------------------

ಹಿರಿದು ಕಿರಿದೆಂಬಿವರ ಪೌರುಷವರಿಯಬಹುದಿನ್ನು

--------------------------------

ಪುರಕೆ ಗಮನಿಸಿ ನಾವು ನಿಮ್ಮನು

--------------------------------

ಕರೆಸುವೆವು ಕೇಳೆನುತಯೋಧ್ಯಾ

--------------------------------

ಪುರಿಗೆ ಪಯಣವ ಮಾಡಹೇಳಿದನಾವಿಭೀಷಣಗೆ

### ಮೂರು ಸಾಲುಗಳಿಗೆ ಮಾತ್ರ ಪ್ರಸ್ತಾರ ಹಾಕಿ ಗಣವಿಂಗಡಿಸಿ.

--------------------------------

ಕೆಲರು ಗೋದಿಯ ಸಾಮೆಯನು ಕೆಲ

--------------------------------

ಕೆಲರು ನವಣೆಯ ಕಂಬು ಜೋಳವ

--------------------------------

ಕೆಲರು ಹಾರಕವೆಂದು ಕೆಲವರು ನಲ್ಲೆನತಿಶಯವ

ಎಂಟನೆಯ ತರಗತಿಯ ಪಠ್ಯಕ್ಕೆ ಒಟ್ಟು ೮ ಪದ್ಯಗಳಿವೆ. ಪ್ರತಿ ಪದ್ಯದಿಂದ ಎರಡು ನುಡಿಗಳನ್ನು ಕಂಠಪಾಠಕ್ಕೆ ನಿಗಧಿಪಡಿಸಿದೆ. ಪ್ರಶ್ನೆ ಪತ್ರಿಕೆಯಲ್ಲಿ ಎರಡು ನುಡಿಗಳನ್ನು ಒಂದೇ ಪದ್ಯದಿಂದ ಕೊಟ್ಟು, ಒಂದನ್ನು ಮಾತ್ರ ಬರೆಯಲು ಕೇಳುತ್ತಾರೆ. ಆದ್ದರಿಂದ ಒಂದೇ ನುಡಿಯನ್ನು ಪರಿಪೂರ್ಣವಾಗಿ ರೂಢಿಗೊಳಿಸಿಕೊಂಡರೂ ತಪ್ಪಿಲ್ಲದಂತೆ ಬರೆದು ಪೂರ್ಣ ನಾಲ್ಕು ಅಂಕಗಳನ್ನು ಗಳಿಸಬಹುದು. ಕಾರಣ ಒಂದು ಪದ್ಯವನ್ನು ಮಾತ್ರ ಅಭ್ಯಾಸಕ್ಕಾಗಿ ಬಳಸಿಕೊಳ್ಳಲಾಗಿದೆ

**ಅಭ್ಯಾಸ : ಪದ್ಯ ಕಂಠಪಾಠ**

**ಕಂಠಪಾಠಕ್ಕಾಗಿ ನಿಗದಿಪಡಿಸಿದ ಪದ್ಯ**

**ಅಭ್ಯಾಸ ಹಾಳೆ**

**ಮಾದರಿ–೦೧. ಮೊದಲು ಒಂದೊಂದೇ ಸಾಲನ್ನು ರೂಢಿಗೊಳಿಸುವುದು**

೧. ಮಳೆದೆಗೆದು ಬೆಳೆಯಡಗಿ ಕ್ಷಾಮದ    ೨. ವಿಲಯಕಾಲದೊಳನ್ನವಿಲ್ಲದೆ

_____________________________________  _______________________________________________

_____________________________________  _______________________________________________

೩. ಅಳಿವ ಪ್ರಾಣಿಗಳಾದರಿಸಿ ಸಲಹುವೆನು ಜಗವರಿಯೆ    ೪ ಎಲವೊ ನೀನೆಲ್ಲಿಹೆಯೊ ನಿನ್ನಯ

_____________________________________  _______________________________________________

_____________________________________  _______________________________________________

೫. ಬಳಗವದು ತಾನೆಲ್ಲಿಹುದು ಈ    ೬ ಹಲವು ಹುಲು ಧಾನ್ಯಗಳೆನಗೆ ಸರಿದೊರೆಯ ಕೇಳೆಂದ

_____________________________________  _______________________________________________

_____________________________________  _______________________________________________

**ಸುಳಿವು ನೀಡಿ ಬರೆಯಿಸುವುದು.**

<table>
<tr><th colspan="2">ಮಾದರಿ ೦೨– ಕೊಟ್ಟಿರುವ ಜಾಗವನ್ನು ಭರ್ತಿಮಾಡಿ</th></tr>
<tr><td>ಮಳೆದೆಗೆದು ----------------------------------<br>ವಿಲಯ ----------------------------------<br>ಅಳಿವ --------------------------------<br>ಎಲವೊ --------------------------------<br>ಬಳಗವದು ------------------------------<br>ಹಲವು ------------------------------</td><td>ಮಳೆದೆಗೆದು ----------------------------------<br>------------------------------------------<br>------------------------------------------<br>------------------------------------------<br>------------------------------------------<br>---------------------------------- ಕೇಳೆಂದ</td></tr>
</table>

<table>
<tr><th colspan="2">ಮಾದರಿ–೦೩. ಪದ್ಯವನ್ನು ಪೂರ್ಣಗೊಳಿಸಿ.</th></tr>
<tr><td>----------------------------------<br>ವಿಲಯ ಕಾಲದೊಳನ್ನವಿಲ್ಲದೆ<br>------------------------------------------<br>ಎಲವೊ ನೀನೆಲ್ಲಿಹೆಯೊ ನಿನ್ನಯ<br>------------------------------------------<br>ಹಲವು ಹುಲು ಧಾನ್ಯಗಳೆನಗೆ ಸರಿದೊರೆಯ ಕೇಳೆಂದ</td><td>ಮಳೆದೆಗೆದು ----------------------------------<br>------------------------------------------<br>------------------------------------------<br>------------------------------------------<br>------------------------------------------<br>---------------------------------- ಕೇಳೆಂದ</td></tr>
<tr><th colspan="2">ಮಾದರಿ–೪. ಪೂರ್ಣ ಪದ್ಯ ನೆನಪಿಸಿಕೊಂಡು ಬರೆಯಿರಿ.</th></tr>
<tr><td colspan="2"></td></tr>
</table>

## ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ

## ರೂಪಣಾತ್ಮಕ ಮೌಲ್ಯಮಾಪನ – ೦೪

**೮ ನೆಯ ತರಗತಿ ಪ್ರಥಮ ಭಾಷೆ ಕನ್ನಡ** **ಸಾಧನಾ ಪರೀಕ್ಷೆ – ೪** **ಸಮಯ : ೧.೦೦ ಗಂ**

**ಗರಿಷ್ಠ ಅಂಕಗಳು : ೨೦**

ಪ್ರ I. ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಆರಿಸಿ ಬರೆಯಿರಿ. ೨x೧=೨

೧. ಬೆಟ್ಟದಾವರೆ ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

ಎ) ತತ್ಪುರುಷ ಬಿ) ಕರ್ಮಧಾರಯ ಸಿ ) ದ್ವಿಗು ಡಿ ) ಬಹುವ್ರೀಹಿ ಸಮಾಸ

೨. ಒಬ್ಬರು ಹೇಳಿದ ಮಾತನ್ನು ಯಥಾವತ್ತಾಗಿ ಬರೆಯುವಾಗ ಈ ಲೇಖನ ಚಿಹ್ನೆಯನ್ನು ಬಳಸಲಾಗುವುದು

ಎ) ಉದ್ಧರಣ ಬಿ) ವಾಕ್ಯ ವೇಷ್ಠನ ಸಿ ) ಪೂರ್ಣವಿರಾಮ ಡಿ) ಅಲ್ಪ ವಿರಾಮ

ಪ್ರ II. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ ೨x೧=೨

೩. ಲೇಖಕರ ಮೊದಲ ವಿದ್ಯಾ ಗುರು ಯಾರು ?

೪. ಮುದುಕಿಯನ್ನು ಭೇಟಿಯಾದ ವ್ಯಕ್ತಿ ಯಾರು ?

ಪ್ರ III. ಈ ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ . ೨x೩=೬

೫. ತನ್ನ ಆಶ್ರಮಕ್ಕೆ ಬಂದ ಅತಿಥಿಗಳನ್ನು ಅರಣ್ಯಕ ಹೇಗೆ ಸತ್ಕರಿಸಿದನು?

೬. ಆಯ್ದಕ್ಕಿ ಮಾರಯ್ಯನ ಕಾಯಕದ ಮಹತ್ವವನ್ನು ಹೇಗೆ ನಿರೂಪಿಸಿದ್ದಾನೆ ?

೭. ಮುದುಕನು ಹೇಳುವಂತೆ ಕಥೆಯ ನಿಜರೂಪ ಯಾವುದು?

ಪ್ರ IV ಕೆಳಗಿನ ಹೇಳಿಕೆಗೆ ಸಂದರ್ಭದೊಡನೆ ಸ್ವಾರಸ್ಯ ಬರೆಯಿರಿ . ೧x೩=೩

೮. "ನನಗೂ ಹೆಣ್ಣು ಮಕ್ಕಳಂತೆ ಉದ್ದ ಕೂದಲಿತ್ತು"

ಪ್ರV. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿರಿ ೧x೪=೪

೯. ಮಳೆಯದೆಗೆದು ಬೆಳೆ ಎಡೆಗೆ..........................

.................................,..............................

............................................... ಜಗವರಿಯೆ

ಪ್ರ VI. ಕೆಳಗಿನ ಗಾದೆ ಮಾತನ್ನು ಗಾದೆಯ ಮಹತ್ವದೊಂದಿಗೆ ವಿವರಿಸಿ. ೧x೩=೩

೧೦ . ತಾಳಿದವನು ಬಾಳಿಯಾನು. ಅಥವಾ ಅತಿ ಆಸೆ ಗತಿಗೆಡು

****************************************************

# ದ್ವಿತೀಯ ಸಂಕಲನಾತ್ಮಕ ಮೌಲ್ಯಮಾಪನ ೨೦೨೪ –೨೫

ಲ ನೆಯ ತರಗತಿ | ಮಾದರಿ ಪ್ರಶ್ನೆಪತ್ರಿಕೆ | ಪ್ರಥಮ ಭಾಷೆ ಕನ್ನಡ

ಸಮಯ :– ೧.೩೦ ಗಂಟೆ | ಗರಿಷ್ಠ ಅಂಕಗಳು :– ೪೦

ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಸರಿಯುತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. ೪*೧=೪

೧. 'ವ್ಯಾಪಾರಿ' ಇದು ಯಾವ ನಾಮಪದಕ್ಕೆ ಉದಾಹರಣೆಯಾಗಿದೆ?

ಎ) ರೂಢನಾಮ ಬಿ) ಅಂಕಿತನಾಮ ಸಿ) ಅನ್ವರ್ಥನಾಮ ಡಿ) ಯಾವುದೂ ಅಲ್ಲ

೨. 'ಮೈದೊಳೆ' ಇದು ಯಾವ ಸಂಧಿಗೆ ಉದಾಹರಣೆಯಾಗಿದೆ?

ಎ) ಲೋಪ ಸಂಧಿ ಬಿ) ಆಗಮ ಸಂಧಿ ಸಿ) ಆದೇಶ ಸಂಧಿ ಡಿ) ಗುಣ ಸಂಧಿ

೩. ಪ್ರಶ್ನೆರೂಪದ ಪದ ಮತ್ತು ವಾಕ್ಯಗಳ ಮುಂದೆ ಬಳಸಲಾಗುವ ಲೇಖನ ಚಿಹ್ನೆ ಯಾವುದು?

ಎ) ಅಲ್ಪ ವಿರಾಮ ಬಿ) ಅರ್ಧವಿರಾಮ ಸಿ) ಪ್ರಶ್ನಾರ್ಥಕ ಡಿ) ಉದ್ಧರಣ

೪. ಆರು ಸಾಲಿನ ಪದ್ಯವನ್ನು ಏನೆಂದು ಕರೆಯುತ್ತಾರೆ?

ಎ) ಷಟ್ಪದಿ ಬಿ) ತ್ರಿಪದಿ ಸಿ) ಅಷ್ಟ ಷಟ್ಪದಿ ಡಿ) ಕಂದ ಪದ್ಯ

ಕೆಳಗಿನ ಪ್ರಶ್ನೆಗೆ ಒಂದು ವಾಕ್ಯದಲ್ಲಿ ಉತ್ತರಿಸಿ ೭*೧=೭

೫. ದೊರೆಯ ಹೆಂಡತಿ ಹೂವಿಗೆ ಎಷ್ಟು ಹಣವನ್ನು ಕೊಟ್ಟಳು?

೬. ಗಂಗರ ಮೊದಲ ರಾಜಧಾನಿ ಯಾವುದಾಗಿತ್ತು?

೭. ಲೇಖಕರ ಮೊದಲ ವಿದ್ಯಾಗುರು ಯಾರು?

೮. ಮುದ್ದಣನಿಗೆ ಸಿದ್ಧಿಸಿದ ಮಂತ್ರದ ಹೆಸರೇನು?

೯. ಆಯ್ದಕ್ಕಿ ಮಾರಯ್ಯನ ಪ್ರಕಾರ ಕೈಲಾಸ ಯಾವುದು?

೧೦. ದೇಶಕೆ ಅತಿಶಯವಾದ ಧಾನ್ಯ ಯಾವುದು?

೧೧. ಮುದುಕಿಯನ್ನು ಭೇಟಿಯಾದ ವ್ಯಕ್ತಿ ಯಾರು?

ಕೊಟ್ಟಿರುವ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. ೫*೨=೧೦

೧೨. ಲೇಖಕರಿಗೆ ವಿಮಾನಯಾನದ ಬಗ್ಗೆ ಭಯವಿಲ್ಲವೇಕೆ?

೧೩. ನಮ್ಮ ಸುತ್ತಲೂ ಇರುವ ಕಂದಕಗಳು ಯಾವುವು?

೧೪. ಶ್ರೇಷ್ಠವೆಂದು ಹೇಳುವ ಧಾನ್ಯಗಳು ಯಾವುವು?

೧೫. ಶ್ರೀ ಗುರುವು ಶಿಷ್ಯರಿಗೆ ಹೇಗೆ ಬುದ್ಧಿಯನ್ನು ಹೇಳಬೇಕಿದೆ?

೧೬. ಲೇಖಕರ ಅಕ್ಷರಾಭ್ಯಾಸ ಆರಂಭವಾದದ್ದು ಹೇಗೆ?

ಕೆಳಗಿನ ಹೇಳಿಕೆಗಳಿಗೆ ಸಂದರ್ಭ ಸಹಿತ ಸ್ವಾರಸ್ಯ ಬರೆಯಿರಿ. ೨*೨=೪

೧೭. "ಮೋಟಾರು ಓಡಲೊಲ್ಲದು, ಸಾರಥಿ ನಿಲ್ಲಿಸಲಾರನು".

೧೮. "ಯಾರಾದರೂ ಅನ್ನ ನೀರು ಕೊಟ್ಟರೆ ಜೀವ ಉಳಿಸಿಕೋ".

ಕೆಳಗಿನ ಕವಿ/ಸಾಹಿತಿಗಳ ಜನ್ಮಸ್ಥಳ, ಕಾಲ,ಕೃತಿ ಮತ್ತು ಪ್ರಶಸ್ತಿ/ಬಿರುದುಗಳ ಕುರಿತು ವಾಕ್ಯರೂಪದಲ್ಲಿ ಬರೆಯಿರಿ. ೧*೩=೩

೧೯. ಮುದ್ದಣ ಅಥವಾ ಚೆನ್ನವೀರ ಕಣವಿ

ಕೊಟ್ಟಿರುವ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. ೧*೨=೨

ಕಾಗೆಯ ಮರಿ ಕೋಗಿಲೆಯಾಗಬಲ್ಲುದೆ?
ಆಡಿನ ಮರಿ ಆನೆಯಾಗಬಲ್ಲದೆ?
ಸೀಳ ನಾಯಿ ಸಿಂಹದ ಮರಿಯಾಗಬಲ್ಲುದೆ?
ಅರಿವು ಆಚಾರ ಸಮ್ಯಜ್ಞಾನವನರಿಯದೆ
ನಾಮವ ಹೊತ್ತುಕೊಂಡು ತಿರುಗುವ ಗಾವಿಲರ
ಮುಖವ ನೋಡಲಾಗದು ಅಮುಗೇಶ್ವರಾ.

ಪದ್ಯಭಾಗವನ್ನು ಪೂರ್ಣಗೊಳಿಸಿರಿ. ೧*೨=೨

ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು
________________________________________
________________________________________
________________________________________
ಉಂಡವನು ಕಂಡಿಹನು ಇದರ ಹದನು.

ಕೊಟ್ಟಿರುವ ಪ್ರಶ್ನೆಗಳಲ್ಲಿ ಬೇಕಾದ ಒಂದಕ್ಕೆ ಮಾತ್ರ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿ. ೧*೪=೪

೨೦. ದೊರೆಯ ಕಿರಿಯ ಮಗಳು ತನ್ನ ಅತ್ತಿಗೆಗೆ ಮಾಡಿದ ದ್ರೋಹವೇನು?

ಅಥವಾ

ನರೆದಲಗ ಮತ್ತು ವ್ರಿಹಿಗಳ ನಡುವೆ ನಡೆದ ಸಂವಾದವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.

೨೧. ನಿಮ್ಮನ್ನು ಸರಕಾರಿ ಪ್ರೌಢಶಾಲೆ ಯಾದಗಿರಿಯ ಸುಮನ್/ಸುಮಂತ್ ಎಂದು ಭಾವಿಸಿಕೊಂಡು ನಿಮ್ಮ ಅಕ್ಕನ ಮದುವೆಯ ಪ್ರಯುಕ್ತ ಮೂರು ದಿನಗಳ ರಜೆಯನ್ನು ನೀಡುವಂತೆ ನಿಮ್ಮ ಮುಖ್ಯೋಪಾಧ್ಯಾಯರಿಗೆ ಒಂದು ರಜೆಯ ಅರ್ಜಿಯನ್ನು ಬರೆಯಿರಿ.

ಅಥವಾ

ಕೊಟ್ಟಿರುವ ಯಾವುದಾದರೂ ಒಂದು ವಿಷಯವನ್ನು ಕುರಿತು ಹದಿನೈದು ಸಾಲುಗಳಿಗೆ ಮೀರದಂತೆ ಪ್ರಬಂಧವನ್ನು ಬರೆಯಿರಿ. ೧*೪=೪

- ರಾಷ್ಟ್ರೀಯ ಹಬ್ಬಗಳು
- ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ

-----------------------------OOOOOOOOO-----------------------------